Budget Estimates for 1976-77 Supplimentary Demand for grants (Seceord and final Instalment)

Demand No. 2 3, 5, 6, 9, 10, 12, 16, 17, 19, 21, 22, 26, 27, 28, 29, 30, 35, 36, 37, 38, 39 41, 42, 44, 45, 47, 48, 49, 50 to 55.

SRI M. Y. GHORPADE (Minister for Finance).—Madam, on the recommendation of the Governor, I beg to move ;

"That a further sum not exceeding Rs. 5,50000 be granted to Government to defray the charges which will come in curse of payment during the year ending the 31st March 77 in respect of Demand No. 2 'Governor, Ministers and Public Service Commission

MADAM SPEAKER.—Motion moved.

"That a further sum not exceeding Rs 5,50,000 be granted to Government to defray the charges which will come in course of payment during the year ending the 31st March 1977 in respect of Demand No 2 'Governor, Ministers and Public Service Commission

Budget Estimate for 1977-78 Demand for grants(Vote on Account Expenditure) Demand No. 1 to 59.

SRI M. Y. GHORPADE.—I also beg to move ;

"That a sum not exceeding Rs, 1, 10, 000 be granted 'on account to the Government to defray the charges which will come in course of payment during the financial year ending 31st day of March 1978 in respect of Demand No 1 "State Legislature and Election,

MADAM SPEAKER,—Motion moved,

"That a sum not evceeding Rs, 1,10,000 be granted 'on account to the Government to defray the charges which will come in course of payment during the financial year ending 31st day of March 1978 in respect of Demand no 1 "State Legislature and Election,

Discussion on both the Supplimentary Estimate for 1976-77 and the Budget Estimate for 1977-78 vote on account for Expenditure in 1977-78 will commence now, All the Demands are deemed to have been moved,

2-00 P. M,

† ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೇ, ಸಪ್ಲಿಮೆಂಟರಿ ಬಡ್ಜೆಟ್ ಈಗಾಗಲೇ ಸಭೆಯ ಮುಂದೆ ಮಂಡನೆಯಾಗಿದೆ, ಇದರ ಬಗ್ಗೆ ಕೆಲವು ವಿವರಗಳನ್ನು ಕೊಡಬೇಕಾದರೆ, ನಾವು ಇಂಟ್ರುಡಕ್ಟರಿ ನೋಟ್‌ನಲ್ಲಿ ಸ್ಪಷ್ಟವಾಗಿ ಹೇಳಿದ ಪ್ರಕಾರ ಇದರಲ್ಲಿ 31 ಕೋಟಿ ರೂಪಾಯಿಗಳನ್ನು ತೋರಿಸಲಾಗಿದೆ, ಇದರ ಬಗ್ಗೆ ನಾವು ಯಾವ ತರಹದ ಕಳವಳನ್ನು ಪಡಬೇಕಾಗಿಲ್ಲ. ಇವತ್ತು ಸಪ್ಲಿಮೆಂಟರಿ ಡಿಮ್ಯಾಂಡಿನಿಂದ ನಮ್ಮ ರಾಜ್ಯದಲ್ಲಿ ಆಗುತ್ತಿರುವ ಅಭಿವೃದ್ಧಿ ಕೆಲಸಗಳನ್ನು ಇನ್ನಷ್ಟು ಬಲಪಡಿಸಿದಂತಾಗಿದೆ. ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ನಾವು 31 ಕೋಟಿ ರೂಪಾಯಿಗಳನ್ನು ತೋರಿಸಿದ್ದರೂ ಸಹ ಇದರಲ್ಲಿ 23 ಕೋಟಿ ರೂಪಾಯಿಗಳನ್ನು ನಮ್ಮ ಆರ್ಥಿಕ ಸಾಮಾಜಿಕ ಅಭಿವೃದಿ ಕೆಲಸಗಳಿಗೋಸ್ಕರ ಉಪಯೋಗ ಮಾಡಲಾಗಿದೆ. 31 ಕೋಟಿ ರೂಪಾಯಿಗಳಲ್ಲಿ ಸುಮಾರು 5 ಕೋಟಿ ರೂಪಾಯಿಗಳು ಮಾತ್ರ ಜನರಲ್ ಸರ್ವೀಸಸ್‌ಗೆ ಸಂಬಂಧಪಟ್ಟಿದ್ದಾಗಿದೆ. 5 ಕೋಟಿ ರೂಪಾಯಿಗಳಲ್ಲಿ 2,50 ಕೋಟಿ ರೂಪಾಯಿಗಳು ಓಲ್ಡೇಜ್ ಪೆನ್ಸನ್‌ಗೆ ಸಂಬಂಧಪಟ್ಟಿದ್ದು. ನಮ್ಮ ಈ ವರ್ಷದ ಬಡ್ಜೆಟ್ಟಿನಲ್ಲಿ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೋ ಅವುಗಳನ್ನು ಬಲಪಡಿಸುವುದಕ್ಕೋಸ್ಕರ ಸಪ್ಲಿಮೆಂಟರಿ ಬಡ್ಜೆಟ್ಟಿನ ಹಣವನ್ನು ಉಪಯೋಗ ಮಾಡಿದ್ದೇವೆ; ಇಷ್ಟೇ ಅಲ್ಲದೆ ಇದರಿಂದ ಹೆಚ್ಚಿನ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಾಗಿದೆ ಎನ್ನುವುದನ್ನು ನಾವು ನೋಡಿದರೆ ನಮ್ಮ ರಾಜ್ಯದಲ್ಲಿ ಹಣಕಾಸಿನ ಪರಿಸ್ಥಿತಿ ಬಹಳ ಭದ್ರವಾಗಿದೆ ಎಂದು ನನಗೆ ಸ್ಪಷ್ಟವಾಗಿ ಕಂಡುಬರುತ್ತದೆ. ಈಗ ಒಂದು ಪ್ರಶ್ನೆಯನ್ನು ವಿರೋಧ ಪಕ್ಷದವರು ಕೇಳಬಹುದು. ಏನೆಂದರೆ, ಈ ವರ್ಷದ ಬಡ್ಜೆಟ್ಟಿನಲ್ಲಿ 12 ಕೋಟಿ ರೂಪಾಯಿಗಳ ಡಿಫಿಸಿಟ್ ಇರುವಾಗ ಇಷ್ಟೆಲ್ಲಾ ಹೇಗೆ ಖರ್ಚು ಮಾಡಲಿಕ್ಕೆ ಸಾಧ್ಯವಾಯಿತು ಎಂದು. ಈ 12 ಕೋಟಿ ರೂಪಾಯಿಗಳ ಡಿಫಿಸಿಟ್ ಬಗ್ಗೆ ಯಾರೂ ಭಯ ಪಡಬೇಕಾಗಿಲ್ಲ. ಏಕೆಂದರೆ, ಇವತ್ತು ನಮ್ಮ ಹಣಕಾಸಿನ ಪರಿಸ್ಥಿತಿ ಭದ್ರವಾಗಿದೆ. ರಿಸರ್ವ್ ಬ್ಯಾಂಕಿನವರು 16 ಕೋಟಿ ರೂಪಾಯಿಗಳ ವೇಸ್ ಮತ್ತು ಮೀನ್ಸ್ ಪಡೆಯಲಿಕ್ಕೆ ಅವಕಾಶ ಮಾಡಿ ಕೊಟ್ಟಿದ್ದಾರೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಎರಡು ಮೂರು ವರುಷಗಳ ಹಿಂದೆ ನಮ್ಮ ರಾಜ್ಯಕ್ಕೆ ಬಾರೋಯಿಂಗ್ ಎಲಿಮೆಂಟ್ ಏನು ಇತ್ತು ಎಂದರೆ, 7 ಕೋಟಿ ರೂಪಾಯಿಗಳು ಮಾತ್ರ ಇತ್ತು. ಆಗ ನಮಗೆ ಏನಾದರೂ ಕಷ್ಟ ಪರಿಸ್ಥಿತಿ ಬಂದಿದ್ದು ಹೆಚ್ಚಾಗಿ ಖರ್ಚು ಮಾಡುವ ಅವಶ್ಯಕತೆ ಇದ್ದಿದ್ದರೆ ನಮಗೆ ತೊಂದರೆಯಾಗುತ್ತಿತ್ತು. ರಿಸರ್ವ್ ಬ್ಯಾಂಕಿನವರು ನಮಗೆ ಹಣ ಕೊಡುವುದನ್ನು ನಿಲ್ಲಿಸುತ್ತೇವೆಂದು ಹೇಳುವಂಥ ಪರಿಸ್ಥಿತಿಯನ್ನು ನಾವು ಕಂಡಿದ್ದೇವೆ. ಈಗ ನಮಗೆ 16 ಕೋಟಿ ರೂಪಾಯಿಗಳ ವೇಸ್ ಅಂಡ್ ಮೀನ್ಸ್ ಪಡೆಯುವುದಕ್ಕೆ ಅವಕಾಶ ಇದೆ. ಇದಕ್ಕೆ ಮುಖ್ಯವಾದಂಥ ಕಾರಣ ಏನೆಂದರೆ, ಕಳೆದ ಎರಡು ಮೂರು ವರ್ಷದಲ್ಲಿ 6 ಕೋಟಿ ರೂಪಾಯಿಗಳನ್ನು ಸೆಕ್ಯೂರಿಟಿಯಾಗಿ ನಾವು ರಿಸರ್ವ್ ಬ್ಯಾಂಕಿನಲ್ಲಿಟ್ಟಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಯಾವ ತರಹದ ಸೆಕ್ಯೂರಿಟಿ.

ಶ್ರೀ ಎಂ. ವೈ. ಘೋರ್ಪಡೆ.—ನಾವು ರಿಸರ್ವ್‌ಬ್ಯಾಂಕಿನಿಂದ ಹಣ ಪಡೆಯುವಂಥ ಕೆಪಾಸಿಟಿಯನ್ನು ಜಾಸ್ತಿ ಮಾಡಿಕೊಂಡಿದ್ದೇವೆ. ಇದು ವೇಸ್ ಮತ್ತು ಮೀನ್ಸ್ ಅನ್ನು ಅವಲಂಬಿಸಿರುತ್ತದೆ. ಅಂದರೆ ಅಡ್ವಾನ್ಸಸ್ ಪೊಜಿಷನ್ ಅನ್ನು ಇದು ರಿಫ್ಲೆಕ್ಟ್ ಮಾಡುತ್ತದೆ. ಈ ದೃಷ್ಟಿಯಿಂದ 16 ಕೋಟಿ ರೂಪಾಯಿಗಳ ಅಡ್ವಾನ್ಸ್ ಅನ್ನು ಪಡೆಯಲಿಕ್ಕೆ ಸಾಧ್ಯವಾಯಿತು. ಆದ್ದರಿಂದ 12 ಕೋಟಿ ರೂಪಾಯಿಗಳ ಡಿಫಿಸಿಟ್ ಬಗ್ಗೆ ಯಾರೂ ಕಳವಳವನ್ನು ವ್ಯಕ್ತಪಡಿಸಬೇಕಾಗಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಆಮೇಲೆ ನಮ್ಮ ಸಪ್ಲಿಮೆಂಟರಿ ಎಸ್ಟಿಮೇಟಿನಲ್ಲಿ ಹೆಚ್ಚಾಗಿ ಅಭಿವೃದ್ಧಿ ಕೆಲಸಗಳಿಗೆ ಹಣವನ್ನು ಉಪಯೋಗ ಮಾಡಿದ್ದೇವೆ. ನಾವು ಒಂದನೊಂದು ಡಿಮ್ಯಾಂಡ್ ಅನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಉದಾಹರಣೆಗೆ ಡಿಮ್ಯಾಂಡ್ ನಂಬರ್ 22. ಇದು 2-50 ಕೋಟಿ ರೂಪಾಯಿಗಳ ಡಿಮ್ಯಾಂಡ್, ನಾನು ಮೊದಲೇ ಹೇಳಿದ ಪ್ರಕಾರ ಇದು ಪೆನ್‌ಷನ್‌ಗೆ ಸಂಬಂಧಪಟ್ಟಿದ್ದು. ಆಮೇಲೆ ಡಿಮ್ಯಾಂಡ್ ನಂಬರ್ 27 ಅನ್ನು ನೋಡಿದರೆ ಇದರಲ್ಲಿ 3.20 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಈ ವರ್ಷ ನಾವು ಬೃಹತ್ ಪ್ರಮಾಣದಲ್ಲಿ ಬೋರ್‌ವೆಲ್ ಕಾರ್ಯಕ್ರಮಗಳನ್ನು ಮಾಡಿದ್ದೇವೆ. 5 ಸಾವಿರ ಬೋರ್ ವೆಲ್‌ಗಳನ್ನು ನಾವು ಈ ವರ್ಷ ಮಾಡಿದ್ದೇವೆ. ಈ ಕಾರ್ಯಕ್ರಮಕ್ಕೋಸ್ಕರ ಬಡ್ಜೆಟ್ಟಿನಲ್ಲಿ ಒದಗಿಸಿದಂಥ ಹಣ ಸಾಲದೆ ಬಂದಿದ್ದು ಮತ್ತೆ 55 ಲಕ್ಷ ರೂಪಾಯಿಗಳನ್ನು ಕೊಟ್ಟು

ದ್ದೇವೆ. ಸಪ್ಲಿಮೆಂಟರಿ ಎಸ್ಟಿಮೇಟಿನಲ್ಲಿ 3.20 ಲಕ್ಷ ರೂಪಾಯಿಗಳನ್ನು ತೋರಿಸಿದ್ದೇವೆ, ಅಂದರೆ ಇದು 6 ಕೋಟಿ ರೂಪಾಯಿಗಳ ಕಾರ್ಯಕ್ರಮವಾಗಿದೆ, ಇದರಿಂದ ರಾಜ್ಯದಲ್ಲಿ 5 ಸಾವಿರ ಬೋರ್ ವೆಲ್‌ಗಳನ್ನು ಮಾಡಿದ್ದೇವೆ. ಇದು ಎಲ್ಲರಿಗೂ ಸಮಾಧಾನ ಉಂಟು ಮಾಡುವಂಥ ಕಾರ್ಯಕ್ರಮ ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ಯಾವ ಕಡೆ ಕುಡಿಯುವ ನೀರಿನ ಅಭಾವ ಇದೆ ಅಲ್ಲಿ ಇದರಿಂದ ಬಹಳಷ್ಟು ಅನುಕೂಲವಾಗಿದೆ ಇದರ ಬಗ್ಗೆ ನಾವು ಶಕ್ತಿಮೀರಿ ಕೆಲಸ ಮಾಡಿದ್ದೇವೆ ಎಂದು ನಾನು ಧೈರ್ಯವಾಗಿ ಹೇಳುತ್ತೇನೆ.

ಶ್ರೀ ಜಿ. ಎನ್. ಪಾಟಿಲ್.—ನಮ್ಮ ಕಡೆ ಇದರ ಬಗ್ಗೆ ಪರಿಸ್ಥಿತಿ ಬೇರೆಯಾಗಿದೆ.

ಶ್ರೀ ಎಂ. ವೈ ಘೋರ್ಪಡೆ.—ನಿಮ್ಮ ಪರಿಸ್ಥಿತಿ ಬೇರೆ ಇದೆ. ಅಲ್ಲಿ ಬೋರ್‌ವೆಲ್‌ಗಳನ್ನು ಮಾಡಿದರೂ ಸಹ ಪ್ರಯೋಜನ ವಾಗುವುದಿಲ್ಲ. ಅಲ್ಲಿ ಕೆರೆಗಳನ್ನು ಮಾಡಬೇಕು. ಆದ ಕಾರಣ ಈ ಸಮಸ್ಯೆ ಮಾತ್ರ ನಿಮ್ಮ ಪ್ರದೇಶಕ್ಕೆ ಸಂಬಂಧಿಪಟ್ಟಿದೆ. ಕುಡಿಯುವ ನೀರಿಗೋಸ್ಕರ ಮಾನ್ಯ ಸದಸ್ಯರು ಸಣ್ಣ ಸಣ್ಣ ಕೆರೆಗಳನ್ನು ಮಾಡಬೇಕು ಎಂದು ಹೇಳುತ್ತಿದ್ದಾರೆ. ಇದಕ್ಕೂ ಬೋರ್ ವೆಲ್ ಕಾರ್ಯಕ್ರಮಕ್ಕೂ ಯಾವ ಸಂಬಂಧವಿಲ್ಲ. ನಾನು ಇನ್ನು ಮುಖ್ಯವಾದಂಥ ಡಿಮ್ಯಾಂಡ್‌ಗಳನ್ನು ಮಾತ್ರ ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಪ್ರತಿಯೊಂದರ ಬಗ್ಗೆ ಹೇಳಬೇಕಾದರೆ ಸುಮಾರು ಮೂರು ತಾಸು ಬೇಕಾಗುತ್ತದೆ.

ಇನ್ನು ಡಿಮ್ಯಾಂಡ್ ನಂಬರ್ 28, ಇದರಲ್ಲಿ ಹೌಸಿಂಗ್‌ಬೋರ್ಡಿಗೋಸ್ಕರ 16.2 ಕೋಟಿ ರೂಪಾಯಿಗಳನ್ನು ನಾವು ಈ ವರ್ಷ ಹೆಚ್ಚಾಗಿ ಕೊಟ್ಟಿದ್ದೇವೆ. ಇದರ ಬಗ್ಗೆ ನಾವು ಸ್ಪಷ್ಟವಾಗಿ ಹೇಳಿದ್ದೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅಲ್ಲಿನ ವ್ಯವಹಾರ, ಜಮಾ—ಖರ್ಚು ಅಜಮಾಯಿಸಿ ಮಾಡಿದ್ದೀರಾ

ಶ್ರೀ ಎಂ. ವೈ. ಘೋರ್ಪಡೆ.—ಡಿಮ್ಯಾಂಡ್ ನಂಬರ್ 35, ಇದು 3.6 ಲಕ್ಷ ರೂಪಾಯಿಗಳ ಡಿಮ್ಯಾಂಡ್, ಮತ್ತು ಇದು ಓಲ್ಡೇಜ್ ಪೆನ್‌ಷನ್‌ಗೆ ಸಂಬಂಧಪಟ್ಟಿದ್ದು. ತಮಗೆ ಗೊತ್ತಿರುವ ಹಾಗೆ, ಬಡ್ಜೆಟ್ಟಿನಲ್ಲಿ ಮೂರು ಕೋಟಿ ರೂಪಾಯಿಗಳನ್ನು ಓಲ್ಡೇಜ್ ಪೆನ್‌ಷೆನ್‌ಗೆ ಒದಗಿಸಲಾಗಿದ್ದು ನಮ್ಮ ರಾಜ್ಯದಲ್ಲಿ ಸುಮಾರು 1.60 ಲಕ್ಷ ಜನ ಪೆನ್‌ಷನ್ ಅನ್ನು ತೆಗೆದುಕೊಳ್ಳುವವರು ಇರುವುದರಿಂದ ಇದು ಸಾಲದೆ ಬಂದು ಇನ್ನೂ ಮೂರು ಕೋಟಿ ರೂಪಾಯಿಗಳನ್ನು ಸಪ್ಲಿಮೆಂಟರಿ ಮೂಲಕ ತೋರಿಸಿದ್ದೇವೆ: ಅಂದರೆ ಹೆಚ್ಚು ಕಡಿಮೆ 6 ಕೋಟಿ ರೂಪಾಯಿಗಳನ್ನು ಓಲ್ಡೇಜ್ ಪೆನ್‌ಷೆನ್‌ಗೋಸ್ಕರ ಈ ವರ್ಷ ನಾವು ಖರ್ಚು ಮಾಡಿದ್ದೇವೆ.

ಡಿಮ್ಯಾಂಡ್ ನಂಬರ್ 37, ಇದು ಒಂದು ಸಣ್ಣ ಡಿಮ್ಯಾಂಡ್, ಇದು ರಿಲಿಜಿಯಸ್ ಚಾರಿಟಬಲ್ ಇನ್‌ಸ್ಟಿಟ್ಯೂಷನ್‌ಗೆ ಸಂಬಂಧಪಟ್ಟಿದ್ದು. ಬಡ್ಜೆಟ್ಟಿನಲ್ಲಿ ಇವಕ್ಕೋಸ್ಕರ 4 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೆವು. ಇದು ಚಾರಿಟಬಲ್ ಇನ್‌ಸ್ಟಿಟ್ಯೂಷನ್ಸ್ ಬಿಲ್ಡಿಂಗ್‌ಗಳ ರಿಪೇರಿಗೋಸ್ಕರ ಸಾಲದೆ ಬಂದಿದ್ದರಿಂದ ಇನ್ನೂ ಹತ್ತು ಲಕ್ಷ ರೂಪಾಯಿಗಳನ್ನು ಈ ವರ್ಷ ಖರ್ಚು ಮಾಡಬೇಕಾಯಿತು. ಇದನ್ನು ನಾವು ಮಾಡಿದ್ದೇವೆ. ಇದರಲ್ಲಿ ನಾಲ್ಕು ಲಕ್ಷ ರೂಪಾಯಿಗಳು ರಿ ಅಪ್ರೊಪ್ರಿಯೇಷನ್ ನಿಂದ ಸಿಕ್ಕಿದೆ. ಆದಕಾರಣ ಈ ಬಗ್ಗೆ 6 ಲಕ್ಷ ರೂಪಾಯಿಗಳನ್ನು ಡಿಮ್ಯಾಂಡ್‌ನಲ್ಲಿ ತೋರಿಸಿದ್ದೇವೆ.

ಡಿಮ್ಯಾಂಡ್ ನಂಬರ್ 38 ಬಹಳ ಮುಖ್ಯವಾದಂಥಾ ಡಿಮ್ಯಾಂಡ್. ಇದರಲ್ಲಿ ಹಲವಾರು ಅಂಶಗಳನ್ನು ಸೇರಿಸಿದ್ದೇವೆ ಇದರಲ್ಲಿ ಮುಖ್ಯವಾಗಿಇರತಕ್ಕಂಥಾದ್ದು ಪ್ರೈಮರಿ ಲ್ಯಾಂಡ್‌ಡೆವಲಪ ಬ್ಯಾಂಕ್‌ಗೆ ಕೊಟ್ಟಿರತಕ್ಕಂಥಾ 30 ಲಕ್ಷ ರೂಪಾಯಿ ಇದರಲ್ಲಿ ಇದೆ, ಅನಂತರ ರಿಸರ್ವ್ ಬ್ಯಾಂಕ್ ನವರು ಕ್ರೆಡಿಟ್ ಕೋ ಆಪರೇಟೀವ್ ಸೂಸೈಟಿಗಳಿಗೆ ಏನು ಸಾಲ ಕೊಡುತ್ತಾರೆ ಅದನ್ನೂ ಸಹ ಇದರಲ್ಲಿ ಸೇರಿದ್ದೇವೆ. ರಿಸರ್ವ್ ಬ್ಯಾಂಕಿನಿಂದ 2 ಕೋಟಿ 40 ಲಕ್ಷ ರೂಪಾಯಿ ಏನು ಬಂತು ಅದು ಮತ್ತು ಬಡ್ಜೆಟ್‌ನಲ್ಲಿ 1 ಕೋಟಿ 25 ಲಕ್ಷ ರೂಪಾಯಿ ವ್ಯತ್ಯಾಸ ಏನು ಇದೆ ಅದನ್ನು ಈ ಡಿಮ್ಯಾಂಡ್‌ನಲ್ಲಿ ತೋರಿಸಿದ್ದೇವೆ.

ಇನ್ನು ಇದರಲ್ಲಿರುವ 5ನೇ ಐಟಂ ಮತ್ತು 6ನೇ ಐಟಂ ಏನು ಇದೆ ಎನ್ ಸಿ ಡಿ.ಸಿ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಮ್ ಫಾರ್ ಪ್ರೊವೈಡಿಂಗ್ ಮಾರ್ಜಿನ್ ಮನಿ ಟು ಮಾರ್ಕೆಟಿಂಗ್ ಕೋ ಆಪರೇಟೀವ್ಸ್ ಫಾರ್ ಡಿಸ್ಟ್ರಿಬ್ಯೂಷನ್ ಆಫ್ ಅಗ್ರಿಕಲ್‌ಚರಲ್ ಇನ್‌ಪುಟ್ಸ್ ಮತ್ತು ಕರ್ನಾಟಕ

ಸ್ಟೇಟ್ ಕೋ ಆಪರೇಟೀವ್ ಮಾರ್ಕೆಟಿಂಗ್ ಫೆಡರೇಷನ್—ಎನ್. ಸಿ. ಡಿ. ಸಿ. ಸ್ಕೀಮ್ಸ್ ಆಫ್ ಮಾರ್ಜಿನ್ ಮನಿ ಫಾರ್ ಪರ್ಚೆಸ್ ಆಫ್ ಕಾಟನ್ ಅಂಡ್ ಅದರ್ ಅಗ್ರಿಕಲ್ಚರಲ್ ಪ್ರೊಡ್ಯೂಸಿಂಗ್‌ಗೆ 30 ಲಕ್ಷ 50 ಲಕ್ಷ ಒಟ್ಟು 80 ಲಕ್ಷ ರೂಪಾಯಿ ಏನು ನಾನ್‌ಪ್ಲಾನ್‌ನಲ್ಲಿ ಇದೆ ಅದನ್ನು ಈ ಸಪ್ಲಿಮೆಂಟರಿನಲ್ಲಿ ತೋರಿಸಿದ್ದೇವೆ. ನಾವು ಇದಕ್ಕಾಗಿ ಖರ್ಚು ಮಾಡಿರತಕ್ಕಂಥಾ ಹಣ ಮತ್ತು ಕೇಂದ್ರ ಸರ್ಕಾರದಿಂದ ಸಂಬಂಧಪಟ್ಟ ಸಂಸ್ಥೆಗೆ ಬಂದಿರತಕ್ಕಂಥಾ ಅದನ್ನೆಲ್ಲಾ ಈ ಸಭೆಯ ಗಮನಕ್ಕೆ ನಾವು ತರಬೇಕಾಗಿದೆ. ಆದ್ದರಿಂದ ಅವೆಲ್ಲವನ್ನೂ ಈ ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ನಲ್ಲಿ ಸೇರಿಸಿದ್ದೇವೆ.

ಇನ್ನು ಇದರಲ್ಲಿ 7ನೇ ಐಟಂನಲ್ಲಿರುವ ಎನ್.ಸಿ.ಡಿ.ಸಿ. ಸ್ಪಾನ್ಸರ್ಡ್ ಸ್ಕೀಂ ಆಫ್ ಮಾರ್ಜಿನ್ ಮನಿ ಟು ಸೆಂಟ್ರಲ್ ಆರ್ಕ್ಯಾನಟ್ ಅಂಡ್ ಮಾರ್ಕೆಟಿಂಗ್ ಪ್ರೊಡ್ಯೂಸ್ ಕೋ ಆಪರೇಟೀವ್ ಫೆಡರೇಷನ ಗೆ ಬಂದಿರತಕ್ಕಂಥಾ 12 ಲಕ್ಷ ರೂಪಾಯಿ ಖರ್ಚಾಗಿರುವುದನ್ನು ಇದರಲ್ಲಿ ತೋರಿಸಿದ್ದೇವೆ.

ಇನ್ನು ಡ್ಯೆರಿ ಕೋ ಆಪರೇಟೀವ್ಸ್‌ಗೋಸ್ಕರ ಇನ್‌ವೆಸ್ಟ್‌ಮೆಂಟ್ ಇನ್ ಮಿಲ್ಕ್ ಪ್ರೊಡ್ಯೂಸರ್ಸ್ ಕೋ ಆಪರೇಟಿವ್ಸ್ ಬಗ್ಗೆ 49 ಲಕ್ಷ ರೂಪಾಯಿ ಏನು ಇವೆ ಅವು ಡ್ಯೆರಿ ಕೋ ಆಪರೇಟಿವ್ಸ್‌ಗೆ ಸಂಬಂಧಪಟ್ಟಿದ್ದು. ಇವೆಲ್ಲಾ ಕೋ ಆಪರೇಟೀವ್ ಸೊಸೈಟಿ ಬಗ್ಗೆ ಸಂಬಂಧಪಟ್ಟ ಖರ್ಚನ್ನು ಇದರಲ್ಲಿ ತೋರಿಸಿದೆ.

ಇನ್ನು ಫಿಷರ್‌ಮೆನ್ ಫ್ಯಾಮಿನ್ ಬಂದಾಗ ಅವರಿಗೆ ಸಹಾಯ ಮಾಡಲು ಫಿಷರ್‌ಮೆನ್ಸ್ ಕೋ ಆಪರೇಟೀವ್ಸ್ ಮುಖಾಂತರ ಡಿಸ್ಟ್ರೆಸ್ ರಿಲೀಫ್ ಫಂಡ್ ಲೋನ್ ಟು ಫಿಷರ್‌ಮೆನ್ ಅಂತ 25 ಲಕ್ಷ ರೂಪಾಯಿ ಖರ್ಚು ಮಾಡಿರುವುದನ್ನು ಇದರಲ್ಲಿ ತೋರಿಸಿದ್ದೇವೆ.

ಇನ್ನು ಡಿಮ್ಯಾಂಡ್ ನಂಬರ್ 39ರಲ್ಲಿ ಏನು ಇದೆ ಇದು ಒಂದು ಗೌರ್ನಮೆಂಟ್ ಆಫ್ ಇಂಡಿಯಾ ಸ್ಕೀಂ ಇಲಿಗಳ ಒಂದು ನಾಶಕ್ಕೆ ಪ್ಲಾಂಟ್ ಪ್ರೊಟೆಕ್ಷನ್ ಕೆಳಗಡೆ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಂ ಫಾರ್ ಕಂಟ್ರೋಲ್ ಆಫ್ ರೋಡೆಂಟ್ಸ್ ಅಂಡ್ ಜಾವರ್ ಇಯರ್‌ಹೆಡ್ ಮಿಡ್ಜ್‌ನ ಒಂದು ಸ್ಕೀಂ ಏನು ಇದೆ ಇದು 46 ಲಕ್ಷ ರೂಪಾಯಿನ ಒಂದು ಸ್ಕೀಂ. ಅದರಲ್ಲಿ 33 ಲಕ್ಷ ರೂಪಾಯಿ ಖರ್ಚಾಗಿದೆ. ಅದನ್ನು ಈ ಸಪ್ಲಿಮೆಂಟರಿನಲ್ಲಿ ತೋರಿಸಿದ್ದೇವೆ. ಈ ದುಡ್ಡು ಗೌರ್ನಮೆಂಟ್ ಆಫ್ ಇಂಡಿಯಾದಿಂದ ನಮಗೆ ಬರುತ್ತದೆ.

ಇನು 41ನೆ ಡಿಮ್ಯಾಂಡ್ ಬಗ್ಗೆ ಹೇಳುವುದಾದರೆ ಇದು ಮೈನರ್ ಇರ್ರಿಗೇಷನ್‌ಗೆ ಸಂಬಂಧಪಟ್ಟದ್ದು. ಇದರಲ್ಲಿರುವ 60 ಲಕ್ಷ ರೂಪಾಯಿ ಡಿಮ್ಯಾಂಡ್ ಏನು ಇದೆ ಅದನ್ನು ಈ ಸಭೆಯ ಗಮನಕ್ಕೆ ತರಬೇಕಾಗುತ್ತದೆ. ನಾವು ಈ ವರ್ಷ ಈ ಒಂದು ದೊಡ್ಡ ಪ್ರಮಾಣದಲ್ಲಿ ಈ ಮೈನರ್ ಇರ್ರಿಗೇಷನ್‌ಗೆ ಖರ್ಚು ಮಾಡಿದ್ದೇವೆ. ಈ ಮೈನರ್ ಇರ್ರಿಗೇಷನ್‌ಗೆ ಬಡ್ಜೆಟ್‌ನಲ್ಲಿ 8.7 ಕೋಟಿ ರೂಪಾಯಿ ಮಾತ್ರ ತೋರಿಸಿದ್ದೇವೆ. ಹೋದಸಲದ ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ನಲ್ಲಿ ಇದು ಇರಲಿಲ್ಲ. ನಾವು ಈ ಮೈನರ್ ಇರ್ರಿಗೇಷನ್ ಖರ್ಚು ಮಾಡಿರುವುದು 8.7 ಕೋಟಿ ರೂಪಾಯಿ ಒಂದು ಮತ್ತು 3.75 ಕೋಟಿ ರೂಪಾಯಿ ಸೆಂಟ್ರಲ್‌ನಿಂದ ಬಂದದ್ದು ಖರ್ಚು ಮಾಡಿದ್ದೇವೆ. ನಾವು ಅದರ ಮೇಲೆ ಇನ್ನೂ 60 ಲಕ್ಷ ರೂಪಾಯಿ ಹೆಚ್ಚಿಗೆ ಖರ್ಚು ಮಾಡಿದ್ದೇವೆ. ಒಟ್ಟು ಸುಮಾರು 13 ಕೋಟಿ ರೂಪಾಯಿ ಪ್ಲಾನ್‌ನಲ್ಲಿ ಖರ್ಚಾಗಿದೆ. ನಾನ್ ಪ್ಲಾನ್ ಬೇರೆ ಇದೆ. ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ.

ಇನ್ನು ಡಿಮ್ಯಾಂಡ್ ನಂಬರ್ 42ರ ಬಗ್ಗೆ ಹೇಳುವುದಾದರೆ ಸಾಯಿಲ್ ಅಂಡ್ ವಾಟರ್ ಕನ್‌ಸರ್ವೇಷನ್ ಬಗ್ಗೆ ಒಟ್ಟು 1 ಕೋಟಿ 85 ಲಕ್ಷ ಅದರಲ್ಲಿ ತೋರಿಸಿದ್ದೇವೆ. ಬಡ್ಜೆಟ್‌ನಲ್ಲಿ ಸಾಯಿಲ್ ಕನ್‌ಸರ್ವೇಷನ್ ಪ್ಲಾನ್‌ನಲ್ಲಿ 3.5 ಕೋಟಿ ರೂಪಾಯಿ ಸೇರಿಸಿದ್ದೇವೆ. ನಂತರ ಹೋದ ಸಲದ ಸಪ್ಲಿಮೆಂಟರಿನಲ್ಲಿ 2 ಕೋಟಿ ರೂಪಾಯಿ ಸೇರಿಸಿದ್ದೇವೆ. ಮತ್ತು ಈ ಸಲ 1.85 ಕೋಟಿ ರೂಪಾಯಿ ಸೇರಿಸಿದ್ದೇವೆ ಒಟ್ಟು ಇದಕ್ಕೆ 7 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಈ ಬಗ್ಗೆ ಗೌರ್ನಮೆಂಟ್ ಆಫ್ ಇಂಡಿಯಾ ಸ್ಕೀಂನಲ್ಲಿ 25 ಲಕ್ಷ ರೂಪಾಯಿ ಸಿಕ್ಕುತ್ತದೆ.

ಇನ್ನು ಡಿಮ್ಯಾಂಡ್ 14ರ ಬಗ್ಗೆ ಹೇಳುವುದಾದರೆ ಕರ್ನಾಟಕ ಫುಡ್ ಅಂಡ್ ಸಿವಿಲ್ ಸಪ್ಲೈಸ್‌ಗೆ ಆಹಾರವನ್ನು ಸ್ಟಾಕ್ ಮಾಡಿಕೊಳ್ಳುವುದಕ್ಕೆ ಒಂದು ದೊಡ್ಡ ಗೋಡೌನ್ ಕಟ್ಟುವುದಕ್ಕೆ ಹೋದ ಸಲ 12 ಲಕ್ಷ ರೂಪಾಯಿ ಮಂಜೂರಾತಿ ಆಗಿತ್ತು. ಆದರೆ ಕೆಲಸ ಮುಂದುವರೆಯುತ್ತಾ ಇದೆ. ಈಗ ಅದರ ಕನ್‌ಸ್ಟ್ರಕ್ಷನ್ ವರ್ಕ್ 18½ ಲಕ್ಷ ಏರಿರುವುದರಿಂದ ಆ ಕೆಲಸವನ್ನು ಮುಗಿಸುವುದಕ್ಕೆ ಇನ್ನೂ 6½ ಲಕ್ಷ ರೂಪಾಯಿಯನ್ನು ಖರ್ಚು ಮಾಡಬೇಕಾಗಿದೆ.

ಇನ್ನು ಡಿಮ್ಯಾಂಡ್ ನಂಬರ್ 45, ಅನಿಮಲ್ ಹಸ್ಬೆಂಡರಿ ಬಗ್ಗೆ ಹೇಳುವುದಾದರೆ ಇದು ಒಂದು ಕೇಂದ್ರ ಸರ್ಕಾರದ ಸ್ಕೀಂ. ಕ್ಯಾಟಲ್ ಡೆವಲಪ್‌ಮೆಂಟ್‌ಗಾಗಿ ಮತ್ತು ಪೌಲ್ಟ್ರಿ, ಪಿಗ್ಗರಿ ಮತ್ತು ಶೀಪ್ ಪ್ರೋಗ್ರಾಂಗಳಿಗಾಗಿ ಖರ್ಚು ಮಾಡುವ ಹಣ. Centrally Sponsored Scheme of assistance to Small/Marginal Farmers and Agricultural Labourers rearing cross bred heifers and Central Sector Scheme of other Assistance to Small/Marginal Farmers and Agricultural Labourers for Poultry, Piggary and Sheep Programme. ಈ ಎರಡು ಸ್ಕೀಂಗಳಿಗೆ ಸುಮಾರು 40 ಲಕ್ಷ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಅದರಲ್ಲಿ 15 ಲಕ್ಷ ರೂಪಾಯಿಯನ್ನು ಈ ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ನಲ್ಲಿ ಸೇರಿಸಿದ್ದೇವೆ. ಇನ್ನು 15 ಲಕ್ಷ ರೂಪಾಯಿಯ ಪೈಕಿ ಸರ್ಕಾರದಿಂದ ನಮಗೆ 11 ಲಕ್ಷ ಬರುತ್ತದೆ.

ಇನ್ನು ಡಿಮ್ಯಾಂಡ್ ನಂಬರ್ 48ರ ಬಗ್ಗೆ ಹೇಳುವುದಾದರೆ ಇದರಲ್ಲಿ ಅಪೆಕ್ಸ್ ಸೊಸೈಟಿಯ ಒಂದು ಕಾರ್ಯಕ್ರಮಕ್ಕೆ 30 ಲಕ್ಷ ರೂಪಾಯಿ ಸೇರಿಸಿದ್ದೇವೆ. ಆಪರೇಟಿವ್ ಸೊಸೈಟಿಯ ಒಂದು ಕಾರ್ಯಕ್ರಮಕ್ಕೆ ಬಡ್ಜೆಟ್ಟಿನಲ್ಲಿ 1 ಕೋಟಿ ರೂಪಾಯಿ 10 ಲಕ್ಷ ಸೇರಿಸಿತ್ತು. ಅನಂತರ ಅದಕ್ಕೆ ಇನ್ನೂ 70 ಲಕ್ಷ ರೂಪಾಯಿ ಈ ಸಪ್ಲಿಮೆಂಟರಿನಲ್ಲಿ ಮಾಡಿದ್ದೇವೆ. ಅಲ್ಲಿಗೆ ಒಟ್ಟು ಈ ಒಂದು ಕಾರ್ಯಕ್ರಮಕ್ಕೆ 1 ಕೋಟಿ 80 ಲಕ್ಷ ರೂಪಾಯಿ ಆಯಿತು. ಅದಕ್ಕೆ ನಾನು ಹೇಳುವುದು ಏನೆಂದರೆ ಈ ಸಪ್ಲಿಮೆಂಟರಿನಲ್ಲಿರತಕ್ಕಂಥಾ ಹಲವಾರು ವಿಷಯಗಳು ನೇರವಾಗಿ ನಮ್ಮ ರಾಜ್ಯದ ಅಭಿವೃದ್ಧಿಗೆ ಸಂಬಂಧಪಟ್ಟದ್ದು ಎಂದು ಹೇಳುತ್ತೇನೆ.

ಇನ್ನು ಡಿಮ್ಯಾಂಡ್ ನಂಬರ್ 49ರ ಬಗ್ಗೆ ಹೇಳುವುದಾದರೆ ಕಮ್ಯೂನಿಟಿ ಡೆವಲಪ್‌ಮೆಂಟ್ ಕೆಳಗಡೆ ಲೋನ್ಸ್ ಟು ಖಾದಿ ಅಂಡ್ ವಿಲೇಜ್ ಇಂಡಸ್ಟ್ರೀಸ್ ಬೋರ್ಡ್ ಫಾರ್ ಗೋಬರ್ ಗ್ಯಾಸ್ ಪ್ಲ್ಯಾಂಟ್ಸ್‌ಗೆ ಸಾಲ ಕೊಟ್ಟಿದ್ದೇವೆ. ಇದಕ್ಕೆ 2.5 ಕೋಟಿ ರೂಪಾಯಿ ಬೇಕಾಗುತ್ತದೆ. ಅನಂತರ ಈ ಹಣ ಕಮರ್ಷಿಯಲ್ ಬ್ಯಾಂಕ್ಸ್‌ನಿಂದ ಬರುತ್ತದೆ. ಆದರೆ ಇದರಲ್ಲಿ 20 ಪರ್ಸೆಂಟ್ ಭಾಗ ಈ ಹಣ ಸಬ್ಸಿಡಿ ರೂಪದಲ್ಲಿ ಕೇಂದ್ರ ಸರ್ಕಾರದಿಂದ ಬರುತ್ತದೆ, ಸಬ್ಸಿಡಿ ರೂಪದಲ್ಲಿ 2[illegible] ಲಕ್ಷ ರೂಪಾಯಿ ಕೇಂದ್ರ ಸರ್ಕಾರದಿಂದ ಬಂದಮೇಲೆ ಆ ಹಣ ಕೇಂದ್ರ ಸರ್ಕಾರಕ್ಕೇನೆ ವಾಪಸ್ಸು ಹೋಗುತ್ತದೆ. ಒಂದು ದೊಡ್ಡ ಕಾರ್ಯಕ್ರಮ.

ಇನ್ನು 50 ಡಿಮ್ಯಾಂಡ್‌ನಲ್ಲಿ ಎರಡು ಮುಖ್ಯವಾದ ವಿಷಯಗಳಿವೆ. ಇಲ್ಲಿ ಸೋಪ್ ಫ್ಯಾಕ್ಟರಿಗೆ ವರ್ಕಿಂಗ್ ಕ್ಯಾಪಿಟಲ್ ಎಂದು ಸ್ಯಾಂಡಲ್‌ವುಡ್ ಕೊಂಡುಕೊಳ್ಳುವುದಕ್ಕಾಗಿ 1.79 ಕೋಟಿಯನ್ನು ಕೊಟ್ಟಿದ್ದೇವೆ. ಈ ಹಣ ವರ್ಕಿಂಗ್ ಕ್ಯಾಪಿಟಲ್‌ಗೆ ಕೊಟ್ಟಂತೆ. ಈ ಹಣ ವಾಪಸ್ ಬರುತ್ತದೆ. ಸಧ್ಯಕ್ಕೆ ಅವರು ಅವರ ಕೆಲಸವನ್ನು ದಕ್ಷತೆಯಿಂದ ನಡೆಸಬೇಕಾದರೆ ವರ್ಕಿಂಗ್ ಕ್ಯಾಪಿಟಲ್ ಹೆಚ್ಚು ಬೇಕಾಗುತ್ತದೆ. ಅದಕ್ಕೋಸ್ಕರ ಈ ಹಣವನ್ನು ಕೊಟ್ಟಿದ್ದೇವೆ.

ಇನ್ನು ಕರ್ನಾಟಕ ಲೆದರ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಏನಿದೆ, ಅವರಿಗೆ 25 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮೊದಲು ಲೆದರ್ ಬೋರ್ಡ್ ಎಂದು ಇತ್ತು. ಅದು ಈಗ ಕಾರ್ಪೊರೇಷನ್ ಎಂದು ಆಗಿದೆ. ಈ ಮೊದಲೇ ಅದಕ್ಕೆ 25 ಲಕ್ಷ ರೂಪಾಯಿ ಗ್ರಾಂಟ್ ಕೊಡಬೇಕೆಂದು ತೀರ್ಮಾನವಾಗಿತ್ತು. ಈಗ ಅದು ಕಾರ್ಪೊರೇಷನ್ ಎಂದು ಆದ ಮೇಲೆ ನಾವು ಈ ಹಣವನ್ನು ಬೇರೆ ರೀತಿಯಿಂದ ಕೊಡಬೇಕಾಗುತ್ತದೆ. ಇದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವ ಸಲುವಾಗಿ ಇದರಲ್ಲಿ ಸೇರಿಸಲಾಗಿದೆ.

ಇನ್ನು ಎನ್.ಜಿ.ಇ.ಎಫ್.ನಲ್ಲಿ ಲಾಭ ಬಂದಿದೆ. 8 ಪರ್ಸೆಂಟ್ ಡಿವಿಡೆಂಟ್ ಡಿಕ್ಲೇರ್ ಮಾಡಿದ್ದಾರೆ. ಅವರು ಬೇರೆ ಎಕ್ಸ್‌ಪ್ಯಾನ್‌ಷನ್ ಪ್ರೋಗ್ರಾಂ ಇಟ್ಟುಕೊಂಡಿದ್ದಾರೆ. ಎಕ್ಸ್‌ಟ್ರಾ ಹೈ ವೋಲ್ಟೇಜ್ ಟ್ರಾನ್ಸ್‌ಫಾರ್ಮರ್ಸ್ ಮುಂತಾದವುಗಳನ್ನು ತಯಾರು ಮಾಡುವ ಕಾರ್ಯಕ್ರಮ ಇಟ್ಟುಕೊಂಡಿದ್ದಾರೆ. ಆದಕಾರಣ ಅವರು 54 ಲಕ್ಷ ರೂಪಾಯಿಗಳಷ್ಟು ಡಿವಿಡೆಂಟ್‌ನ್ನು ಡಿಫಾಜಿಟ್ ಆಗಿ ಉಳಿಸಿಕೊಳ್ಳಲು ಕೇಳಿಕೊಂಡಿರುವುದರಿಂದ ಅದನ್ನು ನಾವು ಒಪ್ಪಿದ್ದೇವೆ.

ಇನ್ನು ವಿಶ್ವೇಶ್ವರಯ್ಯ ಐರನ್ ಅಂಡ್ ಸ್ಟೀಲ್ ಲಿಮಿಟೆಡ್, ಭದ್ರಾವತಿ, ಇಲ್ಲಿ ಫೋರ್ಜ್ ಪ್ಲಾನ್ಟ್ ಬಗ್ಗೆ ಭಾರಿ ಕಾರ್ಯಕ್ರಮ ಇವೆ. ಫೈನಾನ್ಸಿಯಲ್ ಇನ್ಸ್‌ಟಿಟ್ಯೂಷನ್‌ನಿಂದ 3.56 ಲಕ್ಷ ರೂಪಾಯಿ ಬಂದಿವೆ. Internal accruals required would be Rs. 5·89 crores. ಈ 5 ಕೋಟಿ 89 ಲಕ್ಷ ರೂಪಾಯಿ ಏನಿವೆ, ಇದರಲ್ಲಿ ಇಂಟರ್‌ನಲ್ ಅಕ್ರೂಯಲ್ಸ್ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. 250 ಲಕ್ಷ ರೂಪಾಯಿಗಳಷ್ಟು ವ್ಯತ್ಯಾಸ ಬಂತು. ಈ ಹಣದ ಪೈಕಿ 150 ಲಕ್ಷ ರೂಪಾಯಿಗಳು ರಾಜ್ಯ ಸರ್ಕಾರದಿಂದ ಮತ್ತು ನೂರು ಲಕ್ಷ ರೂಪಾಯಿಗಳು ಕೇಂದ್ರದಿಂದ ಬರಬೇಕೆಂದು ಒಪ್ಪಂದವಾಯಿತು. ಷೇರ್ ಕ್ಯಾಪಿಟಲ್ 60 : 40ರ ರೇಷ್ಯೋ ಪ್ರಕಾರ ಇರುವುದರಿಂದ ಈ ರೀತಿಯ ಒಂದು ಒಪ್ಪಂದವಾಯಿತು. ಅದರ ಪ್ರಕಾರ ನಾವು ಈಗ 50 ಲಕ್ಷ ರೂಪಾಯಿಗಳನ್ನು ಅವರಿಗೆ ಕೊಡುತ್ತಿದ್ದೇವೆ. ಇದು ಒಂದು ದೊಡ್ಡ ಕಾರ್ಯಕ್ರಮ ಇದೆ. ಮತ್ತು ಇದು ಯಶಸ್ವಿಯಾಗಿ ನಡೆಯುತ್ತದೆಯೆಂದು ನಾವು ತಿಳಿದುಕೊಂಡಿದ್ದೇವೆ.

ಇನ್ನು ಡಿಮ್ಯಾಂಡ್ ನಂ. 51 ಏನಿದೆ, ಇದು ಸಿರಿಕಲ್ಚರ್‌ಗೆ ಸಂಬಂಧಪಟ್ಟಿದ್ದು. ಇದಕ್ಕೆ 28 ಲಕ್ಷ ರೂಪಾಯಿಗಳನ್ನು ತೋರಿಸಿದ್ದೇವೆ. ಇದೂ ಸಹ ಒಂದು ದೊಡ್ಡ ಕಾರ್ಯಕ್ರಮವಿದೆ. ಈ 28 ಲಕ್ಷ ರೂಪಾಯಿಗಳನ್ನು ನಾವು ಇದರ ಬೇರೆಬೇರೆ ಕಾರ್ಯಕ್ರಮಗಳಿಗೆ ಕೊಟ್ಟಿದ್ದೇವೆ.

ಇನ್ನು ಡಿಮ್ಯಾಂಡ್ ನಂ. 52ರಲ್ಲಿ ಎರಡು ಮುಖ್ಯವಾದ ಅಂಶಗಳಿವೆ. ಒಂದು 3 ಕೋಟಿ 9 ಲಕ್ಷ ರೂಪಾಯಿನ ಐಟಮ್ ಇದೆ. ಇನ್ನೊಂದು 3 ಕೋಟಿ 48 ಲಕ್ಷ ರೂಪಾಯಿನ ಐಟಮ್ ಇದೆ. 3.9 ಕೋಟಿ ರೂಪಾಯಿನ ಐಟಮ್ ಏನಿವೆ, ಇದು ಅಪ್ಪರ್‌ಕೃಷ್ಣಾ ಮತ್ತು ಮಲಪ್ರಭಾಗೆ ಸಂಬಂಧಪಟ್ಟಿದ್ದು. ಅಪ್ಪರ್‌ಕೃಷ್ಣಾಗೆ ಮೊದಲು 4 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೆವು. ಅನಂತರ ಅದಕ್ಕೆ 2 ಕೋಟಿ ರೂಪಾಯಿ ಜಾಸ್ತಿ ಮಾಡಿದೆವು. ಹೀಗೆ 6 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಇಲ್ಲಿ 3.48 ಕೋಟಿ ರೂಪಾಯಿಗಳಿಗೆ ಸಂಬಂಧಪಟ್ಟ ಐಟಮ್ ಏನಿದೆ, ಈ ಬಗ್ಗೆ ಹೇಳಬೇಕೆಂದರೆ, ಲೋಕೋಪಯೋಗಿ ಇಲಾಖೆಯಲ್ಲಿ ದೊಡ್ಡ ದೊಡ್ಡ ಕಾಮಗಾರಿಗಳನ್ನು ಮಾಡುವಾಗ ಸಸ್ಪೆನ್ಸ್ ಅಕೌಂಟ್ಸ್ ಎಂದು ತೋರಿಸಿ ಆಮೇಲೆ ಸಂಬಂಧಪಟ್ಟ ಅಕೌಂಟ್‌ಗೆ ತೋರಿಸುತ್ತಾರೆ. ಇದು ಈ ಮಾನ್ಯ ಸಭೆಯ ಗಮನಕ್ಕೆ ಬರಬೇಕೆಂಬ ಉದ್ದೇಶದಿಂದ ಇಲ್ಲಿ ತೋರಿಸಲಾಗಿದೆ. ಇದು ಏನಿದ್ದರೂ ಅಜೆಸ್ಟ್‌ಮೆಂಟ್ ಐಟಮ್ ಹೊರತು ಹೊಸ ಖರ್ಚಲ್ಲ.

ಇನ್ನು ಡಿಮ್ಯಾಂಡ್ ನಂ. 55 ಏನಿದೆ, ಇದರಲ್ಲಿ ಒಂದು ಕೋಟಿ ರೂಪಾಯಿಗಳನ್ನು ಇತ್ತೀಚೆಗೆ ಕೇಂದ್ರ ಸರ್ಕಾರದವರು ಮಿನಿಮಂ ನೀಡ್ಸ್ ಪ್ರೋಗ್ರಾಂ ಪ್ರಕಾರ ರಸ್ತೆಗೋಸ್ಕರ ಕೊಟ್ಟರು. ಮತ್ತು ಈ ವರ್ಷದ ಪ್ಲಾನ್ ಆದನಂತರ 7.5 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ನಮಗೆ ಕೊಟ್ಟಿದ್ದಾರೆ. ಇದರ ಬ್ರೇಕ್ ಅಪ್ ಈ ರೀತಿ ಇದೆ.—ಅಫಾರ್‌ಸ್ಟೇಷನ್‌ಗಾಗಿ 70 ಲಕ್ಷ ಲಕ್ಷ ರೂಪಾಯಿಗಳು, ಬೋರ್‌ವೆಲ್ಸ್‌ಗಾಗಿ 55 ಲಕ್ಷ ರೂಪಾಯಿಗಳು ರಸ್ತೆಗೋಸ್ಕರ ಒಂದು ಕೋಟಿ ರೂಪಾಯಿಗಳು, ಮೈನರ್ ಇರಿಗೇಷನ್‌ಗೋಸ್ಕರ 3 ಕೋಟಿ 50 ಲಕ್ಷ ರೂಪಾಯಿಗಳು, ಡಿ.ಪಿ.ಎ.ಪಿ. ಪ್ರೋಗ್ರಾಂಗೆ ಎರಡು ಕೋಟಿ 75 ಲಕ್ಷ ರೂಪಾಯಿಗಳು. ಈ ರೀತಿ ಒಟ್ಟು 7 ಕೋಟಿ 50 ಲಕ್ಷ ರೂಪಾಯಿಗಳು ಅಡ್ವಾನ್ಸ್ ಪ್ಲಾನ್ ಅಸಿಸ್ಟೆನ್ಸ್‌ನಿಂದ ನಮಗೆ ಕೇಂದ್ರದಿಂದ ಸಿಕ್ಕಿತು. ಇದರಲ್ಲಿ ರಸ್ತೆಗೋಸ್ಕರ ಒಂದು ಕೋಟಿ ರೂಪಾಯಿ ಏನಿವೆ, ಅದರಲ್ಲಿ 50 ಲಕ್ಷ ರೂಪಾಯಿಗಳನ್ನು ಎಂ ಎಸ್.ಪಿ ಗೋಸ್ಕರ ಖರ್ಚು ಮಾಡಿ ಉಳಿದ 50 ಲಕ್ಷ ರೂಪಾಯಿಗಳನ್ನು ಇಂಟಿಗ್ರೇಟೆಡ್ ಅಂಡ್ ಕಾಂಪ್ರಹೆನ್ಸಿವ್ ರೂರಲ್ ಕಮ್ಯುನಿಕೇಷನ್ ಪ್ರೋಗ್ರಾಂ ವರ್ಕ್ಸ್‌ಗೆ ಉಪಯೋಗ ಮಾಡಿದ್ದೇವೆ. ಈ ವಿವರಗಳನ್ನು ಮಾನ್ಯ ಸಭೆಯ ಗಮನಕ್ಕೆ ತರುವ ಉದ್ದೇಶದಿಂದ ಈ ಸಪ್ಲಿಮೆಂಟರಿ ಡಿಮ್ಯಾಂಡ್‌ನಲ್ಲಿ ಸೇರಿಸಬೇಕಾಯಿತು. ಒಟ್ಟಿನಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಹಣವನ್ನು ಖರ್ಚು ಮಾಡಿ

ದ್ದೇವೆ. ಮತ್ತು ಅಭಿವೃದ್ಧಿ ಕೆಲಸಗಳಿಗೆ ಹಣ ಖರ್ಚು ಮಾಡಲು ನಮ್ಮ ರಾಜ್ಯಕ್ಕೆ ಆರ್ಥಿಕ ಶಕ್ತಿ ಬಂದಿದೆ. ಇದು ಎಲ್ಲರಿಗೂ ಸಮಾಧಾನ ಉಂಟುಮಾಡಿದೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ) —ಸನ್ಮಾನ್ಯ ಸಭಾಧ್ಯಕ್ಷರೇ, ಈ ದಿನ ಮಾನ್ಯ ಅರ್ಥ ಸಚಿವರು ಮಂಡಿಸಿರತಕ್ಕಂಥ ಹೆಚ್ಚುವರಿ ಬೇಡಿಕೆ ಬಗ್ಗೆ ವಿರೋಧವನ್ನು ಈ ಕೆಳಕಂಡ ಕಾರಣಗಳಿಗಾಗಿ ವ್ಯಕ್ತಪಡಿಸಬೇಕಾಗುತ್ತದೆ. ಮೊದಲನೆಯದಾಗಿ ಮಾನ್ಯ ಅರ್ಥ ಸಚಿವರು ಈಗ ನಮ್ಮ ರಾಜ್ಯದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳಿಗಾಗಿ ಹಣ ಒದಗಿಸಿದ್ದೇವೆಂದು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆ ಒಂದು ಹೇಳಿಕೆ ತತ್ವಶಃ ಮತ್ತು ವಾಸ್ತವಿಕವಾಗಿ ಸತ್ಯಕ್ಕೆ ದೂರವಾದುದೆಂದು ಹೇಳಬೇಕಾಗುತ್ತದೆ. ಏಕೆಂದರೆ ಕಳೆದ 5 ವರ್ಷಗಳಿಂದ ಒಂದರ ಮೇಲೆ ಒಂದರಂತೆ ತೆರಿಗೆ ಹಾಕಿದರೂ ಕೂಡ ಜನರಿಗೆ ಸಾಕಷ್ಟು ನೆಮ್ಮದಿ ಸಿಕ್ಕಲಿಲ್ಲವೆಂದು ವ್ಯಥೆ ಪಡಬೇಕಾಗಿದೆ. ಸಾಧಾರಣವಾಗಿ ದೊಡ್ಡ ದೊಡ್ಡ ಕಾರ್ಯಕ್ರಮಗಳಿಗಾಗಿ ಹೆಚ್ಚು ಹಣ ಒದಗಿಸುತ್ತೇವೆಂದು ಸರ್ಕಾರದವರು ಹೇಳಿದರೂ ಸಹ, ಈ ಸಲ ಪ್ರತಿಯೊಂದು ಇಂಜನಿಯರಿಂಗ್ ಇಲಾಖೆಯಲ್ಲಿ ಕೆಲಸವೇ ಇಲ್ಲವಾಗಿದೆ. ಯಾವಾಗಲೂ ಮಾರ್ಚಿ ತಿಂಗಳ ಕೊನೆಯೊಳಗೆ ಪ್ರತಿಯೊಂದು ಇಂಜನಿಯರಿಂಗ್ ಇಲಾಖೆಗಳಲ್ಲಿಯೂ ಹೆಚ್ಚಿನ ಕೆಲಸವಿರುತ್ತಿತ್ತು. ಕೆಲವು ಸಲ ಒಂದು ಮತ್ತು ಎರಡನೇ ತಾರೀಖಿನವರೆಗೂ ಸಹ ಆಂಟಿ ಡೇಟ್ ಹಾಕಿಕೊಂಡು ಕೆಲಸ ಮಾಡುತ್ತಿದ್ದರು. ಆದರೆ ಈ ವರ್ಷದ ಕೊನೆಯಲ್ಲಿ ಹಣವೂ ಇಲ್ಲ, ಕೆಲಸವೂ ಇಲ್ಲ ಎಂದು ಹೇಳುತ್ತಿರುವುದನ್ನು ವಾಸ್ತವಿಕವಾಗಿ ಯಾರಾದರೂ ಹೋಗಿ ನೋಡಿಕೊಂಡು ಬಂದರೆ ಗೊತ್ತಾಗುತ್ತದೆ. ಈ ಅಂಕಿ ಅಂಶಗಳ ಒಂದು ಹೊಂದಾಣಿಕೆ ಮತ್ತು ಜೋಡಾಣಿಕೆಯಿಂದ ಜನರನ್ನು ಮೆಚ್ಚಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಯೇ ವಿನಃ ಇದರಿಂದ ಜನರಿಗೆ ಎಷ್ಟರಮಟ್ಟಿಗೆ ಅನುಕೂಲವಾಗುತ್ತದೆ ಎಂಬ ಬಗ್ಗೆ ಸತ್ಯಾಂಶವನ್ನು ನೋಡಿ ಅನುಭವಿಸಿದವರಿಗೆ ಗೊತ್ತು.

ಈಗ ನಮ್ಮಲ್ಲಿ ಕಾಳಿನದಿ ಪ್ರಾಜೆಕ್ಟಾಗಲೀ ನಮ್ಮ ದೇಶದ ಮೇಜರ್ ಅಥವಾ ಮೈನರ್ ಇರಿಗೇಷನ್ ಕೆಲಸಗಳಾಗಲೀ ಇವುಗಳಿಗೆ ಹಣ ಸಾಕಷ್ಟು ಖರ್ಚಾಗುತ್ತಿದ್ದರೂ ಕೂಡ ಆ ಕೆಲಸಗಳು ನಿಧಾನವಾಗಿವೆ. ಇದರಿಂದಾಗಿ ಅವುಗಳ ಖರ್ಚು ಒಂದಕ್ಕೆ ಎರಡರಷ್ಟು 3ರಷ್ಟು ಬೆಳೆದು ಕೆಲಸ ನಡೆಯುವುದು ಸಾವಕಾಶವಾಗುತ್ತದೆ. ಆಂಧ್ರದಲ್ಲಿ ನಾಗಾರ್ಜುನ ಸಾಗರ ರಿವರ್ ಪ್ರಾಜೆಕ್ಟನ್ನು ಪೂರೈಸಿ ಜನಗಳಿಗೆ ಹೆಚ್ಚು ಅನುಕೂಲ ಮಾಡಿದ್ದಾರೆ. ಇದರಿಂದಾಗಿ ಅಲ್ಲಿಯ ಜನಗಳ ಆರ್ಥಿಕ ಪರಿಸ್ಥಿತಿ ಹೆಚ್ಚು ಆಗುವುದಕ್ಕೆ ಅನುಕೂಲವಾಯಿತು. ನಮ್ಮ ರಾಜ್ಯದಲ್ಲಿ ಇರಿಗೇಷನ್ ಪ್ರಾಜೆಕ್ಟ್ ಕೆಲಸಕಾರ್ಯಗಳು ನಿಧಾನವಾಗುತ್ತಾ ಇರುವುದರಿಂದ ಸರ್ಕಾರದವರು ಆ ಕೆಲಸಕ್ಕೆ ಹಣವನ್ನು ಒದಗಿಸುವುದಕ್ಕೆ ಹಣದ ಕೊರತೆ ಇರುವುದರಿಂದ ಆ ಕೆಲಸಗಳು ನಿಧಾನವಾಗಿ ಅವುಗಳಿಗೆ ಆಗತಕ್ಕಂಥಾ ಖರ್ಚು ಒಂದಕ್ಕೆ ಎರಡರಷ್ಟು ಮೂರರಷ್ಟು ಹೆಚ್ಚಾಗಿ ಜನಗಳಿಗೆ ತೊಂದರೆಯಾಗುತ್ತದೆ, ಮತ್ತು ರಾಜ್ಯದ ಬೊಕ್ಕಸಕ್ಕೂ ಹೆಚ್ಚು ಹೊರೆತ ಬದ್ದ ಹಾಗಾಗುತ್ತದೆ. ಈ ದೃಷ್ಟಿಯಿಂದ ಇದನ್ನು ಬಹಳ ದೀರ್ಘವಾಗಿ ಆಲೋಚನೆ ಮಾಡಬೇಕಾಗುತ್ತದೆ.

2-30 P.M.

ಇದರ ಜೊತೆಗೆ ಸರ್ಕಾರದವರು ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಪೂರ್ಣವಾಗಿ ವಿಫಲವಾಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಗ್ರಾಮಾಂತರ ಪ್ರದೇಶಗಳಲ್ಲಿ ಬರಗಾಲ ಬಂದಿರತಕ್ಕ ಪ್ರದೇಶದಲ್ಲಿ ಮಳೆ ಬೆಳೆಗಳಿಲ್ಲದೆ ಜನ ಕಷ್ಟಪಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಪಟ್ಟಣಗಳಲ್ಲಿ ಕೂಡ ಅನೇಕ ಕಡೆ ವಿದ್ಯಾವಂತರು ಯಾವುದೇ ರೀತಿಯ ಸಂಪಾದನೆ ಇಲ್ಲದೆ ಇರತಕ್ಕವರು ಯಾವುದೇ ಕೆಲಸವಿಲ್ಲದೆ ನಿರುದ್ಯೋಗಿಗಳಾಗಿ ತೊಂದರೆ ಪಡುತ್ತಿದ್ದಾರೆ. ಇದರ ಜೊತೆಗೆ ಜೀವನಾವಶ್ಯಕ ವಸ್ತುಗಳ ಬೆಲೆಗಳು ವಿಪರೀತವಾಗಿ ಏರಿರುವುದರಿಂದ ಜನಗಳು ಜೀವನ ಮಾಡುವುದು ಕಷ್ಟವಾಗಿದೆ. ಬೆಳಗಿನಿಂದ ಸಾಯಂಕಾಲದವರೆಗೂ ಜನಗಳು ಆಹಾರಕ್ಕಾಗಿ ಹಾತೊರೆಯುತ್ತಾ ಇರುವಾಗ ಅಂಥಾ ಜನಗಳ ಸಮಸ್ಯೆಯನ್ನು ಬಗೆಹರಿಸದೇ ಹೋದರೆ ಇದು ಯೋಗ್ಯ ಸರ್ಕಾರವೇ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಅಕ್ಕಿ, ರಾಗಿ, ಗೋಧಿ ಬೆಲೆಗಳು ಅಷ್ಟು ಹೆಚ್ಚಾಗದಿದ್ದರೂ ಕೂಡ ಇತರೇ ಸಾಮಾನುಗಳ ಬೆಲೆಗಳು ಒಂದಕ್ಕೆ ಎರಡರಷ್ಟು

ಮೂರರಷ್ಟು ಬೆಲೆಗಳು ಏರಿವೆ. ಇದರಿಂದಾಗಿ ಜನಗಳು ಜೀವನ ಮಾಡುವುದು ಕಷ್ಟವಾಗಿದೆ. ಎಣ್ಣೆ, ಬೇಳೆ ಮತ್ತು ಇತರೇ ಸಾಮಾನುಗಳ ಬೆಲೆಗಳಂತೂ ವಿಪರೀತವಾಗಿ ಏರಿಹೋಗಿವೆ. ಮನುಷ್ಯರು ಯಾವ ರೀತಿ ಜೀವನ ಮಾಡಬೇಕೆಂಬುದನ್ನು ಯೋಚನೆ ಮಾಡಬೇಕಾಗಿದೆ. ಸುಮ್ಮನೆ ಅಂಕಿ ಸಂಖ್ಯೆಗಳನ್ನು ತೋರಿಸಿ ಜನಗಳನ್ನು ಮೆಚ್ಚಿಸಿ ಜನಗಳ ಕಣ್ಣಿಗೆ ಮಂಕುಬೂದಿಯನ್ನು ಎರಚುವ ಒಂದು ಪ್ರಯತ್ನವನ್ನು ಮಾಡುವುದು ಸರಿಯಿಲ್ಲ. ಈಗ ನಮ್ಮ ರಾಜ್ಯದಲ್ಲಿ ಬರಗಾಲ ಪೀಡಿತ ಪ್ರದೇಶದಲ್ಲಿ ಅನೇಕ ಕಡೆಗಳಲ್ಲಿ ಸರ್ಕಾರದವರು ಸಾಕಷ್ಟು ಹಣವನ್ನು ಖರ್ಚು ಮಾಡಿದ್ದರೂ ಕೂಡ ಹೆಚ್ಚಿನ ಪ್ರಯೋಜನವಾಗುತ್ತಾ ಇಲ್ಲ. ಕಷ್ಟದ ದಿನಗಳು ಬಹಳ ದಿನಗಳು ಇನ್ನು ಮುಂದೆ ಇವೆ. ಆದಷ್ಟು ಜಾಗ್ರತೆ ಮಳೆ ಬಂದರೆ ಸರಿ ಇಲ್ಲದಿದ್ದರೆ ತುಂಬಾ ಕಷ್ಟವಾಗುತ್ತದೆ. ಈಗ ಆ ಪ್ರದೇಶಗಳಲ್ಲಿ ಹಣವನ್ನು ಖರ್ಚು ಮಾಡಿರುವುದರಿಂದ ಜನಗಳಿಗೆ ಎಷ್ಟು ಪ್ರಯೋಜನವಾಗಿದೆ. ಮುಂದೆ ಅವರನ್ನು ಕಷ್ಟದಿಂದ ಯಾವ ರೀತಿ ಪಾರು ಮಾಡಬೇಕು ಎಂದು ಯೋಚನೆ ಮಾಡುವುದು ಅಗತ್ಯ. ಈ ದೃಷ್ಟಿಯಿಂದ ಇದರ ಬಗ್ಗೆ ಯೋಚನೆ ಮಾಡದಿದ್ದರೆ ಖಂಡಿತವಾಗಿಯೂ ಕೂಡ ಖರ್ಚು ಮಾಡತಕ್ಕ ಹಣ ವ್ಯರ್ಥವಾಗುತ್ತದೆ. ಕಾಲ ಮೀರಿದ ಮೇಲೆ ಅದನ್ನು ತಡೆಗಟ್ಟುವುದು ಕಷ್ಟವಾಗುತ್ತದೆ. ಆದ್ದರಿಂದ ಪರಿಸ್ಥಿತಿಯನ್ನು ಅರಿತುಕೊಂಡು ಜನರ ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಇಲ್ಲಿ ಕೊಟ್ಟಿರತಕ್ಕ ಹೆಚ್ಚುವರಿ ಬೇಡಿಕೆಗಳ ಬಗ್ಗೆ ಕೆಲವು ಅಂಶಗಳನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಈಗ ಮೊದಲನೆಯದಾಗಿ ನಮ್ಮ ಮುಂದಿಟ್ಟಿರತಕ್ಕ ಬೇಡಿಕೆಗಳಲ್ಲಿ ಡಿಮ್ಯಾಂಡ್ ನಂಬರ್ ಎರಡರಲ್ಲಿ ಮಂತ್ರಿಗಳ ಹಾಗೂ ರಾಜ್ಯಪಾಲರಿಗೆ ಸಂಬಂಧಪಟ್ಟ ಕೆಲವು ಖರ್ಚುಗಳನ್ನು ಹೇಳಿದ್ದಾರೆ ಇದರಲ್ಲಿ ಒಂದು ಅಂಶ ಎದ್ದು ಕಾಣುತ್ತದೆ ಬಡ್ಜೆಟ್ಟಿನಲ್ಲಿ ಟೆಲಿಫೋನ್ ಬಗ್ಗೆ ಪ್ರೊವೈಡ್ ಮಾಡಿರತಕ್ಕ ಹಣದ ಜೊತೆಗೆ ಈಗ ಸಪ್ಲಿಮೆಂಟರಿ ಎಸ್ಟಿಮೇಟಿನಲ್ಲಿ ಟೆಲಿಫೋನ್ ಮತ್ತು ಲೋಕಲ್ ಟ್ರಂಕಾಲ್‌ಗೋಸ್ಕರ ಹೆಚ್ಚುವರಿ 5 ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಈಗಾಗಲೇ ಬಡ್ಜೆಟ್ಟಿನಲ್ಲಿ ಕೊಟ್ಟಿರತಕ್ಕ ಹಣದ ಜೊತೆಗೆ ಮತ್ತೆ ಹೆಚ್ಚುವರಿ ಹಣವನ್ನು ಕೇಳಿದರೆ ಇದು ಯಾವ ನೀತಿ ನಿಯಮ ಎಂದು ಹೇಳುವುದಕ್ಕಾಗುತ್ತದೆ ? ಈ ಬಗ್ಗೆ ನನ್ನ ಅಭಿಪ್ರಾಯವನ್ನು ಹೇಳುವುದಾದರೆ ಇವರು ಟೆಲಿಫೋನ್‌ಗೋಸ್ಕರ ಇಷ್ಟು ಹಣವನ್ನು ಜನತೆಯ ಹಿತದೃಷ್ಟಿಯಿಂದ ಖರ್ಚು ಮಾಡಿಲ್ಲ ಎಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ಪ್ರಜೆಗಳ ಹಿತಕ್ಕೋಸ್ಕರ ಟೆಲಿಫೋನ್‌ಗಾಗಿ ಹೆಚ್ಚು ಖರ್ಚು ಮಾಡಿದ್ದೇವೆ ಎಂದು ಹೇಳಿಕೊಳ್ಳುವಾಗ ನಮಗೆ ಸಮಾಜವಾದದಲ್ಲಿ ಹೆಚ್ಚು ನಂಬಿಕೆ ಇದೆ ಎಂದು ಹೇಳಿಕೊಳ್ಳುವಾಗ ನಾನು ಒತ್ತಾಯಪೂರ್ವಕವಾಗಿ ಕೇಳುತ್ತೇನೆ. ಫ್ಯಾಮಿಲಿ ಪ್ಲಾನಿಂಗ್ ಮೇಲೆ ಸೀಲಿಂಗ್ ಹಾಕಬೇಕು, ಹಿಡುವಳಿ ಮೇಲೆ ಸೀಲಿಂಗ್ ಹಾಕಬೇಕು ಎಂದು ಹೇಳುವಾಗ ಇವರು ಮಾಡತಕ್ಕ ಖರ್ಚಿನ ಮೇಲೆ ಏತಕ್ಕೆ ಇವರು ಸೀಲಿಂಗ್ ಹಾಕಿಕೊಳ್ಳಬಾರದು ? ಇವರ ನೀರಿನ ಖರ್ಚು. ಲೈಟಿನ ಖರ್ಚು, ಟೆಲಿಫೋನ್ ಖರ್ಚು, ಸಿಬ್ಬಂದಿ ಖರ್ಚು ಯದ್ವಾತದ್ವಾ ಆಗುತ್ತಿದೆ ಎಂದು ನಮ್ಮ ಗಮನಕ್ಕೆ ಬಂದಿದೆ. ನಿಜವಾಗಿಯೂ ಸಮಾಜವಾದದಲ್ಲಿ ನಂಬಿಕೆ ಇರತಕ್ಕವರು ಇವರು ಯಾವ ಖರ್ಚನ್ನು ಇಳಿಸಿದ್ದಾರೆ ? ಇವರು ನಿಜವಾಗಿಯೂ ದೇಶಕ್ಕೆ ದ್ರೋಹ ಮಾಡುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಆದ್ದರಿಂದ ಆದಷ್ಟು ಇದರ ಬಗ್ಗೆ ತಕ್ಷಣ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡು ಇದರ ಬಗ್ಗೆ ಖರ್ಚಿನ ಮೇಲೆ ಒಂದು ಸೀಲಿಂಗ್ ಹಾಕದಿದ್ದರೆ ಇವರೇ ಮುಂದೆ ಪಶ್ಚಾತ್ತಾಪ ಪಡಬೇಕಾಗುತ್ತದೆ. ಮಂತ್ರಿಗಳ ಪದವಿ ಹೋದ ಮೇಲೆ ವೈಭವಪೂರಿತವಾದ ಜೀವನವನ್ನು ಬಿಟ್ಟು ಸಾಧಾರಣ ಜೀವನವನ್ನು ಮಾಡುವಾಗ ಅದರ ಅರಿವು ಅವರಿಗೆ ಉಂಟಾಗುತ್ತದೆ. ಈ ದೃಷ್ಟಿಯಿಂದ ಖರ್ಚಿನ ಮೇಲೆ ಒಂದು ಮಿತಿಯನ್ನು ಹಾಕಿಕೊಳ್ಳಬೇಕು ; ರಾಜ್ಯಪಾಲರ ಖರ್ಚಿನ ಬಗ್ಗೆ ಮಾತನಾಡುವುದಕ್ಕೆ ನಮಗೆ ಅಧಿಕಾರ ಇಲ್ಲ. ಆದರೆ ಅವರಿಗೆ ಕೊಡತಕ್ಕ ಸೌಲಭ್ಯಗಳ ಬಗ್ಗೆ ನಾವು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಈ ದೃಷ್ಟಿಯಿಂದ ಈ ಡಿಮ್ಯಾಂಡಿನಲ್ಲಿ ಕೇಳಿರತಕ್ಕ ಬೇಡಿಕೆಗಳು ನ್ಯಾಯಸಮ್ಮತವಲ್ಲ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಡಿಮ್ಯಾಂಡ್ ನಂಬರ್ 5ರಲ್ಲಿ ಅರ್ಬನ್‌ಲ್ಯಾಂಡ್ ಟ್ಯಾಕ್ಸ್ ಬಗ್ಗೆ ಹಣವನ್ನು ಕೇಳಿದ್ದಾರೆ. ಈ ಅರ್ಬನ್‌ಲ್ಯಾಂಡ್ ಟ್ಯಾಕ್ಸ್ ಒಂದು ವಿಚಿತ್ರವಾದ ಟ್ಯಾಕ್ಸ್ ಎಂದು ಹೇಳಿದರೆ ತಪ್ಪಾಗಲಾರದು. ಇದು ಒಂದು ತೊಡಕಿನ ಮತ್ತು ತೊಂದರೆಯ ಟ್ಯಾಕ್ಸ್. ಒಂದು ವರ್ಷದ ಕೆಳಗೆ

ಅರ್ಬನ್‌ಲ್ಯಾಂಡ್ ಟ್ಯಾಕ್ಸ್ ಮುಂದುವರಿಯುವುದಕ್ಕೆ ಸಾಧ್ಯವಿಲ್ಲ, ಇದು ಜನಗಳಿಗೆ ತೊಂದರೆಯನ್ನು ಕೊಡತಕ್ಕ ಟ್ಯಾಕ್ಸ್ ಇದು ಹೋಗಬೇಕು ಎಂದು ಅನೇಕರು ಹೇಳಿದ್ದರು. ಆದ್ದರಿಂದ ಇದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಈ ಅರ್ಬನ್ ಟ್ಯಾಕ್ಸಿನಿಂದ ಮನೆಗಳ ಮಾಲೀಕರಿಗೆ ಬೀಳತಕ್ಕ ಪೆಟ್ಟು ಅಷ್ಟಿಷ್ಟಲ್ಲ. ಅನೇಕರು ಮನೆಗಳನ್ನು ಇಟ್ಟುಕೊಂಡಿರುವವರ ಮೇಲೆ ಈ ಟ್ಯಾಕ್ಸ್ ಬಿದ್ದರೂ ಕೂಡ ಇದು ಬಾಡಿಗೆದಾರರ ಮೇಲೂ ಬೀಳುತ್ತದೆ. ಇದರಿಂದಾಗಿ ಈ ಅರ್ಬನ್ ಟ್ಯಾಕ್ಸ್ ಬಾಡಿಗೆ ಮನೆಯಲ್ಲಿರತಕ್ಕವರಿಗೆ ಒಂದು ಹೆಚ್ಚಿನ ಹೊರೆಯಾಗುತ್ತದೆ. ಆದಕಾರಣ ಈ ಅರ್ಬನ್ ಲ್ಯಾಂಡ್ ಹಾಕುವ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕು. ಇದನ್ನು ಹಾಕಿರುವುದು ನ್ಯಾಯವೂ ಅಲ್ಲ ವಿಹಿತವೂ ಅಲ್ಲ. ಇದು ಮನೆಯನ್ನು ಹಾಳು ಮಾಡತಕ್ಕ ಟ್ಯಾಕ್ಸ್. ಇದನ್ನು ಹಾಕುವುದಕ್ಕೆ ಪ್ರಯತ್ನ ಮಾಡಬಾರದು ಒಂದು ವರ್ಷದಿಂದ ಇದು ವಿಫಲವಾಗಿದೆ ಆದ್ದರಿಂದ ಇನ್ನು ಮುಂದಾದರೂ ಈ ಅರ್ಬನ್ ಲ್ಯಾಂಡ್ ಟ್ಯಾಕ್ಸ್ ತೆಗೆದುಹಾಕಬೇಕೆಂದು ನಾನು ಹೇಳುತ್ತೇನೆ. ಸ್ಟ್ಯಾಂಪುಗಳ ಬಗ್ಗೆ ಒಂದು ಬೇಡಿಕೆಯನ್ನು ಸರ್ಕಾರದವರು ಈ ಸಭೆಯ ಮುಂದೆ ಇಟ್ಟಿದ್ದಾರೆ. ಈ ಸ್ಟ್ಯಾಂಪುಗಳನ್ನು ಒದಗಿಸತಕ್ಕ ವ್ಯವಸ್ಥೆ ಸರಿಯಾಗಿಲ್ಲ. ಮುಖ್ಯವಾಗಿ ಬೆಂಗಳೂರು ನಗರದಲ್ಲಿ ರೆಂಟ್ ಕಂಟ್ರೋಲ್ ಸಂಬಂಧವಲ್ಲಿ ಅಪ್ಲಿಕೇಷನ್ ಹಾಕಬೇಕು ಎಂದಾಗ ಆದಕ್ಕೆ ಒಂದು ರೂಪಾಯಿ ಸ್ಟ್ಯಾಂಪ್ ಹಾಕಬೇಕು ಎಂದು ಹೇಳಿದಾಗ ಸ್ಟ್ಯಾಂಪುಗಳನ್ನು ಕೊಂಡುಕೊಳ್ಳುವುದಕ್ಕೆ ಸಾವಿರಾರು ಜನಗಳು ಕ್ಯೂನಲ್ಲಿ ನಿಂತುಕೊಂಡರು ಜೊತೆಗೆ ಸ್ಟ್ಯಾಂಪು ಸಿಕ್ಕದೆ ಒಂದು ರೂಪಾಯಿ ಸ್ಟ್ಯಾಂಪು ಹಾಕುವುದಕ್ಕೆ ಬದಲಾಗಿ 5 ರೂಪಾಯಿ 6 ರೂಪಾಯಿ ಸ್ಟ್ಯಾಂಪುಗಳನ್ನು ಹಾಕಬೇಕಾದ ಒಂದು ಪರಿಸ್ಥಿತಿ ಬಂದಿತ್ತು. ಅದಕ್ಕಾಗಿ ನಾನು ಹೇಳುವುದೇನೆಂದರೆ ಜನಗಳಿಗೆ ಸ್ಟ್ಯಾಂಪುಗಳನ್ನು ಒದಗಿಸಲು ಸರಿಯಾದ ಒಂದು ವ್ಯವಸ್ಥೆಯನ್ನು ಮಾಡಬೇಕು. ದುಡ್ಡು ತೆಗೆದುಕೊಂಡು ಕೂಡ ಜನಗಳಿಗೆ ಸ್ಟ್ಯಾಂಪು ಒದಗಿಸಲು ಒಂದು ವ್ಯವಸ್ಥೆ ಮಾಡದೇ ಹೋದರೆ ಇದು ಎಂತಹ ಆಡಳಿತವೋ ನನಗೆ ಅರ್ಥವಾಗುವುದಿಲ್ಲ. ಸ್ಟ್ಯಾಂಪುಗಳ ಬಗ್ಗೆ ಪ್ರತಿವರ್ಷವೂ ಹೆಚ್ಚಿನ ಬೇಡಿಕೆ ಕೇಳುತ್ತಿದ್ದಾರೆ ಆದರೆ ಜನಗಳಿಗೆ ಬೇಕಾದ ಸ್ಟ್ಯಾಂಪುಗಳನ್ನು ಮಾರತಕ್ಕ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ಮಾಡದಿದ್ದರೆ ಖಂಡಿತವಾಗಿಯೂ ಆಡಳಿತದಲ್ಲಿ ಒಂದು ಹೆಚ್ಚಿನ ಲೋಪ ಇದೆ ಎಂದು ಕಾಣುತ್ತದೆ.

ಇನ್ನು ಡಿಮ್ಯಾಂಡ್ ನಂ. 10ರಲ್ಲಿ ಲಾಟರಿಗೆ ಸಂಬಂಧಪಟ್ಟ ಬೇಡಿಕೆ ಇವೆ. ಲಾಟರಿಯನ್ನು ನಡೆಸತಕ್ಕಂಥಾದ್ದು ಪಾಪಕರವಾದ ಕೆಲಸ. ಲಾಟರಿಯಿಂದ ಪ್ರತಿ ವರ್ಷ ಬರುತ್ತಾ ಇರತಕ್ಕಂಥ ವರಮಾನ ಕಡಿಮೆಯಾಗುತ್ತಾ ಇವೆ. ಲಾಟರಿಯಿಂದ ಬರತಕ್ಕಂಥ ವರಮಾನಕ್ಕಿಂತ ಖರ್ಚೆ ಜಾಸ್ತಿಯಾಗತಕ್ಕಂಥ ಸಂದರ್ಭ ಇದೆ. ಆದುದರಿಂದ ನಾನು ಕಡ್ಡಾಯಪೂರ್ವಕವಾಗಿ, ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಏನೆಂದರೆ, ಲಾಟರಿಯಿಂದ ಖಂಡಿತವಾಗಿಯೂ ಜನಗಳಿಗೆ ಮೋಸ ಮಾಡುತ್ತಾ ಇದ್ದೀರಿ. ಕೋಟ್ಯಾಂತರ ಜನ ಲಾಟರಿ ಟಿಕೆಟ್ ತೆಗೆದುಕೊಳ್ಳತಕ್ಕಂಥ ದುಡ್ಡು ಕೇವಲ ಕೆಲವು ಜನರಿಗೆ ಅನುಕೂಲವಾಗುವುದರಿಂದ ಪ್ರಯೋಜನವಿಲ್ಲ ಅಲ್ಲದೆ ಇದರ ವೆಚ್ಚ ಬಹಳ ಜಾಸ್ತಿ ಇರುತ್ತದೆ. ಆದುದರಿಂದ ಈ ಲಾಟರಿಯನ್ನು ಕಿತ್ತುಹಾಕುವುದರ ಜೊತೆಗೆ ಬೇರೆ ರಾಜ್ಯಗಳ ಲಾಟರಿ ಟಿಕೇಟನ್ನು ಈ ರಾಜ್ಯದಲ್ಲಿ ಮಾರಬಾರದು ಎಂದು ಹೇಳಬೇಕು ಏಕೆಂದರೆ, ಈ ಲಾಟರಿಯಿಂದ ಜನಗಳಿಗೆ ಅನುಕೂಲವಾಗುವುದಕ್ಕಿಂತ ಹೆಚ್ಚಿಗೆ ತೊಂದರೆಯಾಗುವುದರಿಂದ ಈ ಲಾಟರಿ ಸಿಸ್ಟಂನ್ನು ಕಿತ್ತುಹಾಕಬೇಕು ಮತ್ತು ಬೇರೆ ರಾಜ್ಯಗಳ ಲಾಟರಿ ಟಿಕೇಟನ್ನು ಮಾರುವುದನ್ನು ಕಿತ್ತುಹಾಕಬೇಕು. ಇದರ ಜೊತೆಗೆ ಲಾಟರಿ ಟಿಕೆಟ್‌ಗಳನ್ನು ಸಿಂಡಿಕೇಟ್ ಎಂದು ಮಾಡಿಕೊಳ್ಳುತ್ತಾರೆ. ಇದರಿಂದ ಜನಗಳಿಗೆ ತೊಂದರೆಯಾಗುತ್ತಾ ಇದೆ. ಸಿಂಡಿಕೇಟನ್ನು ತಪ್ಪಿಸದೇ ಹೋದರೆ ಜನಗಳಿಗೆ ವರಮಾನ ಕಡಿಮೆಯಾಗುತ್ತದೆ, ತೊಂದರೆಗಳು ಜಾಸ್ತಿಯಾಗುತ್ತದೆ. ಆದುದರಿಂದ ಇದನ್ನು ತಪ್ಪಿಸುವುದಕ್ಕೆ ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಇದರ ಜೊತೆಗೆ ಬೋಗಸ್ ಲಾಟರಿ ಟಿಕೇಟ್‌ಗಳನ್ನು ಮಾರುತ್ತಾ ಇದ್ದಾರೆ ಇದರ ಬಗ್ಗೆ ಕೂಡ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಒಟ್ಟಿನಲ್ಲಿ ಈ ಲಾಟರಿ ಸಿಸ್ಟಂನ್ನು ತೆಗೆದುಹಾಕಿದರೆ ದೇಶಕ್ಕೆ ಒಳ್ಳೆಯದಾಗುತ್ತದೆ ಎಂದು ನಾನು ಒತ್ತಾಯಪೂರ್ವಕವಾಗಿ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಓಲ್ಡೇಜ್ ಪೆನ್‌ಷನ್ ಬಗ್ಗೆ ಹೆಚ್ಚುವರಿ ಬೇಡಿಕೆಯನ್ನು ಮಾನ್ಯ ಸಚಿವರು ಕೇಳಿದ್ದಾರೆ. ತಾವು ಮಾಡಿದ್ದೆಲ್ಲ ತಪ್ಪು ಎಂದು ಹೇಳುವಷ್ಟು ದೂರ ಹೋಗತಕ್ಕ ದಿಟ್ಟತನ ನನಗಿಲ್ಲ. ಓಲ್ಡೇಜ್ ಪೆನ್‌ಷನ್‌ನಿಂದ ಅನೇಕ ಜನರಿಗೆ ಪ್ರಯೋಜನವಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಆದರೆ ಒಲ್ಡೇಜ್ ಪೆನ್‌ಷನ್‌ನ್ನು ಅರ್ಹತೆ ಇಲ್ಲದವರು ತೆಗೆದುಕೊಳ್ಳತಕ್ಕ ಸನ್ನಿವೇಶಗಳು ನನ್ನ ಗಮನಕ್ಕೆ ಬಂದಿವೆ. ನಿಜವಾಗಿಯೂ ಕಷ್ಟಕ್ಕೆ ಸಿಕ್ಕಿರತಕ್ಕವರಿಗೆ ಒಲ್ಡೇಜ್ ಪೆನ್‌ಷನ್ ಸಿಕ್ಕುವುದು ಬಹಳ ಕಷ್ಟವಾಗಿದೆ. ಯಾರು ರೆವಿನ್ಯೂ ಇನ್‌ಸ್ಪೆಕ್ಟರ್ ಕೈ ಬೆಚ್ಚಗೆ ಮಾಡಿ ಸುಳ್ಳು ಸರ್ಟಿಫಿಕೇಟ್ ಬರೆಸಿ, ಹಣ ಚಲಾವಣೆ ಮಾಡುತ್ತಾರೋ ಅಂಥವರಿಗೆ ಸುಲಭವಾಗಿ ಸಿಕ್ಕುತ್ತದೆ. ನಿಜವಾಗಿ ಯಾರಿಗೆ ಸಿಕ್ಕಬೇಕೋ ಅವರಿಗೆ ಒಲ್ಡೇಜ್ ಪೆನ್‌ಷನ್ ಸಿಕ್ಕುತ್ತಾ ಇಲ್ಲ. ನೀವು ಯಾರಿಗೆ ಪೆನ್‌ಷನ್ ಕೊಡಬೇಕು, ಅವರಿಗೆ ಪ್ರಯೋಜನ ಆಗಬೇಕು ಎಂದು ತೀರ್ಮಾನ ಮಾಡಿದ್ದೀರಿ ಅವರಿಗೆ ನ್ಯಾಯವಾಗಿ ಸಲ್ಲುತ್ತಿದೆಯೋ ಎಂಬುದನ್ನು ದೀರ್ಘವಾಗಿ ಆಲೋಚನೆ ಮಾಡಿ. ಮತ್ತು ಈಗ ಕೊಟ್ಟಿರುವುದರ ಬಗ್ಗೆ ಚೆಕ್‌ಅಪ್ ಮಾಡಿ ಮುಂದೆ ಕೊಡುವುದರ ಬಗ್ಗೆ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು, ದಿನೇ ದಿನೇ ಒಲ್ಡೇಜ್ ಪೆನ್‌ಷನ್ ಪಡೆಯತಕ್ಕವರ ಸಂಖ್ಯೆ ಬೆಳೆಯುತ್ತಾ ಇದೆ. ಆದರೆ ಈಗ ಒಲ್ಡೇಜ್ ಪೆನ್‌ಷನ್‌ನ್ನು ಸ್ಯಾಂಕ್ಷನ್ ಮಾಡತಕ್ಕ ಸಿಸ್ಟಂ ಸಾಕಷ್ಟು ಪರಿಣಾಮಕಾರಿಯಾಗಿ ನಡೆಯುತ್ತಾ ಇಲ್ಲ. ಆದುದರಿಂದ ಇದರ ಬಗ್ಗೆ ತನಿಖೆ ಮಾಡಿ ಒಲ್ಡೇಜ್ ಪೆನ್‌ಷನ್‌ನ್ನು ಶೀಘ್ರವಾಗಿ ದೊರಕಿಸಿ, ನ್ಯಾಯವಾಗಿ ಯಾರಿಗೆ ಸಲ್ಲಬೇಕೋ ಅವರಿಗೆ ಸಲ್ಲುವ ಹಾಗೆ ಮಾಡಬೇಕು. ಯಾರಿಗೆ ಸ್ವಲ್ಪ ತಿಳಿವಳಿಕೆ ಇರುತ್ತದೋ ಅವರು ಯಾರಿಂದ ಪ್ರಯೋಜನ ಪಡೆಯುವುದಕ್ಕೆ ಆಗುತ್ತದೆಯೋ ಅವರು ಪಡೆದುಕೊಳ್ಳುತ್ತಾರೆ. ನಿಜವಾಗಿ ಕಷ್ಟದಲ್ಲಿದ್ದವರಿಗೆ ಸಿಕ್ಕುತ್ತಾ ಇಲ್ಲ. ಯಾರು ನಿಜವಾಗಿ ತಿರುಪೆ ಮಾಡಿಕೊಂಡು ಜೀವನ ಮಾಡುತ್ತಾರೋ ಅವರಿಗೆ ಇದರ ಸೌಲಭ್ಯ ಸಿಕ್ಕಬೇಕು. ಯಾರು ಸ್ವಲ್ಪ ಹಣ ಖರ್ಚು ಮಾಡುವುದರ ಮೂಲಕ ಈ ಸೌಕರ್ಯವನ್ನು ಪಡೆದುಕೊಳ್ಳುತ್ತಾರೆ ಅದನ್ನು ತಪ್ಪಿಸಿ ನಿಜವಾಗಿ ತೊಂದರೆಯಲ್ಲಿರತಕ್ಕವರಿಗೆ ಒಲ್ಡೇಜ್ ಪೆನ್‌ಷನ್ ಸಿಕ್ಕುವಂತೆ ಮಾಡಬೇಕು. ಆದುದರಿಂದ ಇದರ ಬಗ್ಗೆ ದೀರ್ಘವಾಗಿ ಪರಿಶೀಲನೆಮಾಡಿ ನಿಜವಾಗಿ ತೊಂದರೆಯಲ್ಲಿರತಕ್ಕವರಿಗೆ ಸರಿಯಾದ ರೀತಿಯಲ್ಲಿ. ನ್ಯಾಯವಾದ ರೀತಿಯಲ್ಲಿ ಒಲ್ಡೇಜ್ ಪೆನ್‌ಷನ್ ಸಿಕ್ಕುವ ಹಾಗೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಪೆನ್‌ಷನ್ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ 75,000 ಜನಕ್ಕೆ ರಾಜ್ಯ ಸರ್ಕಾರದ ಪೆನ್‌ಷನ್ ಬರುತ್ತಾ ಇದೆ. ಬೆಂಗಳೂರು ಸಿಟಿಯಲ್ಲಿ ಸುಮಾರು 18,000 ಜನಕ್ಕೆ ಪೆನ್‌ಷನ್ ಬರುತ್ತಾ ಇದೆ. ಪೆನ್‌ಷನ್‌ದಾರರಿಗೆ ಪೆನ್‌ಷನ್ ಒದಗಿಸಿಕೊಡುವುದು ಸರ್ಕಾರದ ಕರ್ತವ್ಯ. ಏಕೆಂದರೆ ಅವರ ಸೇವೆಯನ್ನು ಸರ್ಕಾರ ಉಪಯೋಗಿಸಿಕೊಂಡಿದ್ದರಿಂದ ಅವರಿಗೆ ಪೆನ್‌ಷನ್ ಒದಗಿಸಿಕೊಡುವುದು ನ್ಯಾಯವಾಗಿದೆ ಈಚೆಗೆ ತಾವು ದೊಡ್ಡ ಮನಸ್ಸು ಮಾಡಿ ಅವರಿಗೆ ಸ್ವಲ ಅನುಕೂಲ ಮಾಡಿಕೊಟ್ಟಿದ್ದೀರಿ ಆದರೆ ಇಷ್ಟು ಪೆನ್‌ಷನ್ ಯಾವರೀತಿ ದೊರಕಬೇಕು ಆದರ ಬಗ್ಗೆ ಯೋಚನೆ ಮಾಡಿಲ್ಲ. ಏಕೆಂದರೆ, ತುಕೋಳ್ ಪೇ ಕಮಿಷನ್ ಅಪಾಯಿಂಟ್ ಆದಾಗ ಅವರು 1-11-1968ಕ್ಕೆ ಹಿಂದೆ ಇದ್ದಂಥ ಪೆನ್‌ಷನ್‌ದಾರರಿಗೆ ಸೌಲಭ್ಯವನ್ನು ಒದಗಿಸಿಲ್ಲ. 1-11-1968 ಆದ ಮೇಲೆ ಹೆಚ್ಚುವರಿ ಸಂಬಳ ಪಡೆಯುತ್ತಾ ಇದ್ದಂಥವರಿಗೆ ಹೆಚ್ಚಿನ ಪೆನ್‌ಷನ್ ಬರುತ್ತಾ ಇತ್ತು. 1-11-1968ಕ್ಕೆ ಹಿಂದೆ ಇರತಕ್ಕ ಪೆನ್‌ಷನ್‌ದಾರರಿಗೆ ಏನಿತ್ತೋ ಆದು ಕಡಿಮೆ ಎಂದು ಹೇಳುತ್ತಾರೆ. ಹಳೇ ಕಾಲದ ಪೆನ್‌ಷನ್ ಕಡಿಮೆ ಆಯಿತು. ಆದುದರಿಂದ ಹಳೇ ಪೆನ್‌ಷನ್‌ದಾರರಿಗೆ ಹೆಚ್ಚಿನ ಅನುಕೂಲ ಮಾಡಿಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಮದ್ರಾಸಿನಲ್ಲಿ ಮೆಡಿಕಲ್ ರಿಲೀಫನ್ನು ಪೆನ್‌ಷನ್‌ದಾರರಿಗೆ ಕೊಡುತ್ತಾ ಇದ್ದಾರೆ. ಪೌಷ್ಟಿಕಾಹಾರ ಇಲ್ಲದೆ ತೊಂದರೆ ಪಡತಕ್ಕ ಪೆನ್‌ಷನ್‌ದಾರರಿಗೆ ಮೆಡಿಕಲ್ ರಿಲೀಫ್ ಕೊಡುವುದಕ್ಕೆ ಆಗುತ್ತದೆಯೋ ಎನ್ನುವುದನ್ನು ಯೋಚನೆ ಮಾಡಿ. ಇದರ ಜೊತೆಗೆ ಫ್ಯಾಮಿಲಿ ಪೆನ್‌ಷನ್‌ನ್ನು ಕೊಡುವುದಕ್ಕೆ ಸರ್ಕಾರ ಹೆಚ್ಚಿನ ಆಸಕ್ತಿಯನ್ನು ವಹಿಸಿದೆ ಫ್ಯಾಮಿಲಿ ಪೆನ್‌ಷನ್ ತೆಗೆದುಕೊಳ್ಳತಕ್ಕವರಿಗೆ ಬಹಳ ಕಷ್ಟವಾಗಿದೆ. ಮೊದಲನೇ ಹೆಂಡತಿ ಸತ್ತುಹೋಗಿ ಎರಡನೇ ಹೆಂಡತಿ ಇದ್ದರೆ ಮೊದಲನೇ ಹೆಂಡತಿಗೆ ಸಂಬಂಧಪಟ್ಟ ದಾಖಲೆಗಳನ್ನು ತೆಗೆದುಕೊಂಡು ಬಾ ಎಂದು ಹೇಳುತ್ತಾರೆ ಇದಲ್ಲದೆ ಇದರಲ್ಲಿ ಅನೇಕ ತೊಡಕುಗಳಿವೆ. ಅವರು ಕೊಟ್ಟಿರತಕ್ಕ ಮನವಿಯನ್ನು ತಮಗೆ ಕಳಿಸಿಕೊಡುತ್ತೇನೆ ತಾವು ಇದರ ಬಗ್ಗೆ ಪರಿಶೀಲನೆಮಾಡಿ ಇದರಲ್ಲಿರತಕ್ಕ ತೊಡಕುಗಳನ್ನು ಬಗೆಹರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಡಿಮ್ಯಾಂಡ್ ನಂಬರ್ 26ರಲ್ಲಿ ಲೆಪ್ರಸಿ ಎನ್ನುವುದರ ಬಗ್ಗೆ ಒಂದು ಬೇಡಿಕೆ ಇದೆ. ಈ ಲೆಪ್ರಸಿ ಬಗ್ಗೆ ಇಷ್ಟು ದುಡ್ಡು ಖರ್ಚಾಗುತ್ತಿದ್ದರೂ ಬೀದಿಯಲ್ಲಿ ಓಡಾಡತಕ್ಕ ಕುಷ್ಠರೋಗಿಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಾ ಇದೆ. ಈ ಸಾಂಕ್ರಾಮಿಕ ರೋಗ ದಿನೇ ದಿನೇ ಹರಡುತ್ತಾ

ಇದೆ. ಇದರ ಬಗ್ಗೆ ತಾವು ಆಸಕ್ತಿ ವಹಿಸಿ ಈ ಕುಷ್ಠರೋಗ ಇರತಕ್ಕವರಿಗೂ ಇಲ್ಲದೆ ಇರತಕ್ಕವರಿಗೂ ಸಂಪರ್ಕ ಇರುವುದನ್ನು ತಪ್ಪಿಸಿ ಈ ಸಾಂಕ್ರಾಮಿಕ ಜಾಡ್ಯ ಹರಡದಂತೆ ಮಾಡದೇ ಹೋದರೆ ಜನರ ಆರೋಗ್ಯಕ್ಕೆ ಬಹಳ ತೊಂದರೆಯಾಗುತ್ತದೆ. ಇದು ಖಂಡಿತವಾಗಿಯೂ ದೊಡ್ಡ ಅಂಟುರೋಗ. ಆದುದರಿಂದ ಇದರ ಬಗ್ಗೆ ತಾವು ಗಮನಕೊಟ್ಟು ಪರಿಶೀಲನೆ ಮಾಡಬೇಕು ಎಂದು ಕೇಳಿ ಕೊಳ್ಳುತ್ತೇನೆ.

ಇನ್ನು ಡಿಮ್ಯಾಂಡ್ ನಂ 28ರಲ್ಲಿ ಹೌಸಿಂಗ್‌ಬೋರ್ಡ್ ಬಗ್ಗೆ ಒಂದು ಬೇಡಿಕೆ ಇದೆ. 3-4 ವರ್ಷಗಳ ಹಿಂದೆ ಅದರ ಛೇರ್ಮನ್ನಿಗೂ ಆಗಿನ ಮಂತ್ರಿಗಳಿಗೂ ಒಂದು ವಿವಾದ ಇದ್ದುದರಿಂದ ಮನೆ ಗಳಿಗೆ ಸಂಬಂಧಪಟ್ಟ ಅನುಕೂಲಗಳು ಹೆಚ್ಚಾಗಿ ಆಗಲಿಲ್ಲ. ಆಮೇಲೆ ಇವರು ಬಂದ ಮೇಲೆ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಲಕ್ಷಾಂತರ ಸಂಖ್ಯೆಯಲ್ಲಿ ಸೈಟುಗಳನ್ನು ಕೊಟ್ಟಿದ್ದಾರೆ ಮನೆಗಳನ್ನು ಕಟ್ಟುವುದಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ಮನೆಗಳನ್ನು ಕಟ್ಟುವುದಕ್ಕೆ ಅವಕಾಶ ಮಾಡದೇ ಹೋದರೆ ಸೈಟುಗಳನ್ನು ಕೊಟ್ಟು ಪ್ರಯೋಜನವಿಲ್ಲ ದಿನೇ ದಿನೇ ಮನೆಗಳನ್ನು ಕಟ್ಟ ತಕ್ಕಂಥ ಖರ್ಚು ಜಾಸ್ತಿಯಾಗುತ್ತಾ ಇರುವುದರಿಂದ ತಡಮಾಡಿದಷ್ಟು ಕೂಡ ಖರ್ಚು ಹೆಚ್ಚಾಗಿ ಮನೆಗಳ ಸೌಕರ್ಯ ಸಿಕ್ಕುವುದು ಕಷ್ಟವಾಗುತ್ತದೆ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸುಲಭ ರೀತಿಯಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಆದಷ್ಟು ಜಾಗ್ರತೆ ಅನುಕೂಲ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಆದಮೇಲೆ ಬೆಂಗಳೂರಿನವರಿಗೇ ಇದರ ಸೌಲಭ್ಯ ದೊರಕುತ್ತಾ ಇಲ್ಲ. ಇವರು ಆ ಕೆಲಸವನ್ನು ಸರಿಯಾಗಿ ನಿರ್ವಹಿಸುತ್ತಾ ಇಲ್ಲ. ಈ ಕೆಲಸವನ್ನು ಹೌಸಿಂಗ್ ಬೋರ್ಡಿನಿಂದ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ತೆಗೆದುಕೊಂಡಿರ ತಕ್ಕಂಥಾದ್ದು ಒಂದು ವ್ಯಸನಪಡಬೇಕಾದ ವಿಚಾರ. ಬಿ.ಡಿ.ಎ. ಸಾವಿರಾರು ಸೈಟುಗಳನ್ನು ಕೊಟ್ಟಿದ್ದಾರೆ. ದುರ್ಬಲವರ್ಗದವರಿಗೆ ಸೈಟುಗಳನ್ನು ಕೊಟ್ಟಿದ್ದಾರೆ ಆದರೆ ಅವರಿಗೆ ಮನೆ ಗಳನ್ನು ಕಟ್ಟುವುದಕ್ಕೆ ಅವಕಾಶ ಮಾಡಿಕೊಡದೇ ಹೋದರೆ ಸೈಟುಗಳನ್ನು ಕೊಟ್ಟೂ ಪ್ರಯೋಜನ ವಾಗುವುದಿಲ್ಲ.

ಏಕೆಂದರೆ ಮನೆ ಕಟ್ಟುವುದಕ್ಕೆ ಬ್ಯಾಂಕುಗಳಲ್ಲಿ ಸಾಲ ಸಿಕ್ಕುವುದಿಲ್ಲ. ಪ್ರೈವೇಟಾಗಿ ಕೂಡ ಈಗ ಸಾಲ ಸಿಗುವುದಿಲ್ಲ. ಈಗ ಗೃಹನಿರ್ಮಾಣದ ಅವಶ್ಯಕತೆ ಜನಗಳಿಗೆ ಹೆಚ್ಚಾಗುವುದರಿಂದ ಮನೆಗಳನ್ನು ಕಟ್ಟುವುದಕ್ಕೆ ವ್ಯವಸ್ಥೆ ಮಾಡಬೇಕು. ಮನುಷ್ಯನಿಗೆ ಬಹು ಮುಖ್ಯವಾಗಿ ಬೇಕಾ ದುದು ಬಟ್ಟೆ, ಆಹಾರ ವಸತಿ ಸೌಕರ್ಯ. ಈ ಮೂರು ಸೌಕರ್ಯಗಳನ್ನು ಸರ್ಕಾರ ಒದಗಿಸಬೇಕು. ಸಾಧಾರಣ ಮನುಷ್ಯ ಬ್ಯಾಂಕಿನಿಂದ ಆಗಲಿ ಖಾಸಗಿಯಾಗಿ ಆಗಲಿ ಸಾಲ ಮಾಡಿ ಮನೆಗಳನ್ನು ಕಟ್ಟಿಸುವುದಕ್ಕೆ ಸಾಧ್ಯವಿಲ್ಲದ ಈ ಕಾಲದಲ್ಲಿ ಹೌಸಿಂಗ್ ಬೋರ್ಡ್ ಮತ್ತು ಬೆಂಗಳೂರು ಡೆವಲಫ್ ಅಥಾರಟಿಯವರು ಕಟ್ಟಿಸುವ ಮನೆಗಳು ಗಟ್ಟಿಮುಟ್ಟಾಗಿರಬೇಕು. ಅವು ಬೇಗ ಬಿದ್ದು ಹೋಗದಂತೆ ಸರ್ಕಾರ ನೋಡಿಕೊಳ್ಳಬೇಕು. ಏಕೆಂದರೆ ಹಿಂದೆ ಹೌಸಿಂಗ್ ಬೋರ್ಡಿನವರು ಕಟ್ಟಿಸಿದ್ದಂತಹ ಮನೆಗಳಲ್ಲಿ ಅನೇಕವು ಬೇಗ ಬಿದ್ದು ಹೋಗಿರುವಂತಹ ಪ್ರಸಂಗಗಳು ಇವೆ. ಆದ್ದರಿಂದ ಅವರು ಮನೆಗಳನ್ನು ಕಟ್ಟುವ ವ್ಯವಸ್ಥೆ ಸಮರ್ಪಕವಾಗಿರಬೇಕು.

ಡಿಮ್ಯಾಂಡ್ ನಂ. 30ರಲ್ಲಿ ಅಡಿಷನಲ್ ಡಿಮ್ಯಾಂಡ್ ಫಾರ್ ಇನ್‌ಫರ್ಮೇಷನ್ ಅಂಡ್ ಪಬ್ಲಿಸಿಟಿ ಡಿಪಾರ್ಟ್‌ಮೆಂಟಿಗೆ ಹಣ ಕೇಳಿದ್ದೀರಿ. ಈ ಇಲಾಖೆ ಈಗ ಮಾಡುತ್ತಿರುವುದು ಆಡಳಿತ ಪಕ್ಷದವರ ಒಂದು ಪ್ರತಿಷ್ಠೆಯನ್ನು ಬೆಳೆಸುವುದಕ್ಕೆ. ಅದಕ್ಕೆ ಮಾತ್ರ ಹೆಚ್ಚಾಗಿ ಹಣ ಖರ್ಚಾಗುತ್ತ ದೆಯೇ ಹೊರತು ಜನಸಾಮಾನ್ಯರ ಸೌಕರ್ಯಕ್ಕಾಗಿ ರಾಜ್ಯದ ಅಭಿವೃದ್ಧಿಗಾಗಿ ಖರ್ಚಾಗುತ್ತಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಮೊನ್ನೆ ಕರ್ನಾಟಕ ಎಂಬ ಪುಸ್ತಕ ವನ್ನು ಒಬ್ಬರು ಹೊರಡಿಸಿದ್ದಾರೆ. ಆ ಪುಸ್ತಕಕ್ಕೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ದ್ದಾರೆ. ಅದರಲ್ಲಿರುವುದೆಲ್ಲಾ ಕಗ್ಗ. ಈ ರೀತಿ ಖರ್ಚು ಮಾಡುವುದಕ್ಕೆ ಬದಲಾಗಿ ಜನಸಾಮಾನ್ಯರಿಗೆ ಅರ್ಥವಾಗುವಂತೆ ಸಣ್ಣ ಸಣ್ಣ ಪಾಂಪ್ಲೆಟ್ಸ್ ಮಾಡಿದರೆ, ಲಕ್ಷಾಂತರ ಪುಸ್ತಕಗಳನ್ನು ಹಂಚಿದರೆ ಪಬ್ಲಿಸಿಟಿ ಇಲಾಖೆ ಚೆನ್ನಾಗಿ ಕೆಲಸ ಮಾಡಿದಂತಾಗುತ್ತದೆ ಆದುದರಿಂದ ನಿಮ್ಮ ಪಕ್ಷದ ಸ್ವಂತ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಇಷ್ಟು ಖರ್ಚಾಗುತ್ತಿದೆ. ಇದು ಜನಗಳ ಸೌಕರ್ಯಕ್ಕೆ, ರಾಜ್ಯದ ಹಿತದೃಷ್ಟಿಯಿಂದ ಆಗುತ್ತಾ ಇಲ್ಲ. ನಿಜವಾಗಿ ಇಲ್ಲಿ ಯಾವ ರೀತಿ ಹಣ ಖರ್ಚಾಗುತ್ತಿದೆ ಎನ್ನುವುದನ್ನು ಪರಿಶೀಲನೆ ಮಾಡತಕ್ಕ ಕಾರ್ಯಕ್ರಮ ತೆಗೆದುಕೊಳ್ಳದೇ ಹೋದರೆ ನೀವು ಖಂಡಿತ

ವಾಗಿ ದ್ರೋಹ ಮಾಡಿದಹಾಗಾಗುತ್ತದೆ. ಕರ್ನಾಟಕ ಎಂಬ ಪಬ್ಲಿಕೇಷನ್‌ನಿಂದ ಖಂಡಿತವಾಗಿ ರಾಜ್ಯಕ್ಕೆ ಏನೇನೂ ಅನುಕೂಲವಾಗುತ್ತಿಲ್ಲ. ಇದಕ್ಕೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿರುವುದನ್ನು ನೋಡಿದರೆ ನನಗೆ ಖೇದವಾಗುತ್ತದೆ ಆದುದರಿಂದ ಇನ್‌ಫರ್ಮೇಷನ್ ಮತ್ತು ಪಬ್ಲಿಸಿಟಿ ಡಿಪಾರ್ಟ್‌ಮೆಂಟಿಗೆ ಹೆಚ್ಚಿನ ಬೇಡಿಕೆ ಇಡತಕ್ಕಂಥಾದ್ದು ಖಂಡಿತವಾಗಿಯೂ ಯೋಗ್ಯವಾದುದಲ್ಲ.

ಡಿಮ್ಯಾಂಡ್ ನಂ. 37ರಲ್ಲಿ ರಿಲಿಜಿಯಸ್ ಮತ್ತು ಚಾರಿಟಬಲ್ ಇನ್ಸ್ಟಿಟ್ಯೂಷನ್ಸ್ ಸಂಬಂಧಪಟ್ಟ ಹಾಗೆ ಟೆಂಪಲ್ಸ್‌ಗಳನ್ನು ಸರಿಪಡಿಸುವುದಕ್ಕೆ ಖರ್ಚು ಮಾಡಬೇಕೆಂದು ಹೇಳಿದ್ದಾರೆ. ಆದರೆ, ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನವರು ಸರಿಯಾಗಿ ಟೆಂಪಲ್ಸ್‌ಗಳನ್ನು ನೋಡಿಕೊಳ್ಳುವುದಿಲ್ಲ. ರಿಲಿಜಿಯಸ್ ಮತ್ತು ಚಾರಿಟಬಲ್ ಇನ್‌ಸ್ಟಿಟ್ಯೂಷನ್ಸ್‌ಗೆ ಖರ್ಚು ಮಾಡಿರುವುದು ಡ್ಯೂಯಲ್ ಅಥಾರಿಟಿಗಳಿಗೆ ಸಂಬಂಧಪಟ್ಟಿದ್ದು ಎಂದೇ ಹೇಳಬಹುದು. ಅನೇಕ ಸಂದರ್ಭಗಳಲ್ಲಿ ಈ ಇಲಾಖೆಗೆ ಖರ್ಚು ಮಾಡಿರತಕ್ಕಂಥ ಹಣ ಸಾಕಷ್ಟು ಪ್ರಯೋಜನಕಾರಿಯಾಗಿಲ್ಲ. ರಿಲಿಜಿಯಸ್ ಮತ್ತು ಚಾರಿಟಬಲ್ ಇನ್‌ಸ್ಟಿಟ್ಯೂಷನ್ಸ್ ಬಗ್ಗೆ ಉದಾಹರಣೆಗೆ ಹೇಳುವುದಾದರೆ ನಾನು ಚಾಮರಾಜಪೇಟೆಯ ರಾಮೇಶ್ವರ ಟೆಂಪಲಿನಲ್ಲಿ ಕನ್ವೀನರ್ ಆಗಿದ್ದೇನೆ ರಾಮೇಶ್ವರ ಟೆಂಪಲ್ಲಿನಲ್ಲಿ ಕಲ್ಯಾಣ ಮಂಟಪ ಕಟ್ಟುವುದಕ್ಕೆ ಒಂದು ಲಕ್ಷ ಎಪ್ಪತ್ತೆರಡು ಸಾವಿರ ರೂಪಾಯಿಗಳ ಎಸ್ಟಿಮೇಟ್ ಆಗಿ 8 ವರ್ಷಗಳಾದವು. ಸರ್ಕಾರಿ ಅಧಿಕಾರಿಗಳು ಮಾಡಿದಂತಹ ಒಂದು ಲೋಪದಿಂದ ಇದು ಮೂರು ಕಾಂಟ್ರಾಕ್ಟ್‌ದಾರರಿಗೆ ಬದಲಾವಣೆ ಮಾಡಿ ಆ ಕಂಟ್ರಾಕ್ಟರ್ ಅದನ್ನು ಪೂರೈಸಬೇಕಾದರೆ ಅದರ ಡಬ್ಬಲ್ ಖರ್ಚಾಯಿತು. ಅದಕ್ಕೆ ಸುಮಾರು ಒಂದೂವರೆ ವರ್ಷ ಆಯಿತು. ಆದರೆ ಗಾರೆ ಕೆಲಸ ಕೆಟ್ಟು ಹೋಗಿ ಮತ್ತೊಂದು ಸಾರಿ ಪುನಃ ಎಲ್ಲಾ ಕೆಲಸಗಳನ್ನು ಮಾಡುವಂತಹ ಪರಿಸ್ಥಿತಿ ಬಂತು. ಸಾರ್ವಜನಿಕರ ಮತ್ತು ದೇವಸ್ಥಾನದ ಹಣವನ್ನು ಈ ರೀತಿ ಲೋಪ ಮಾಡಿದರೆ ಒಳ್ಳೆಯದಲ್ಲ. ಇದರ ಬಗ್ಗೆ ತನಿಖೆ ಆಗಲೇಬೇಕು. ಏಕೆಂದರೆ ಇದರಲ್ಲಿ ಹೆಚ್ಚು ಅವ್ಯವಹಾರವಿದೆ. ಅಲ್ಲಿ ಲಕ್ಷಾಂತರ ರೂಪಾಯಿ ದುರ್ವ್ಯವಹಾರ ನನ್ನ ಕಣ್ಣ ಮುಂದೆಯೇ ಆಗಿದೆ. ನಮ್ಮಂತಹವರೇ ಇದನ್ನು ಕಣ್ಣು ಮುಚ್ಚಿಕೊಂಡು ನೋಡುವಂತಾಗಿದೆ. ಆದ್ದರಿಂದ ಇದರ ಬಗ್ಗೆ ತನಿಖೆ ನಡೆಯಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಡಿಮ್ಯಾಂಡ್ ನಂ 33ರಲ್ಲಿ 125 ಲಕ್ಷ ರೂಪಾಯಿಗಳನ್ನು ಕೋಆಪರೇಟೀವ್ ಸೊಸೈಟಿಗಳಿಗೆ ಪ್ರೊವೈಡ್ ಮಾಡಿದ್ದಾರೆ ಮತ್ತು ರಿಜರ್ವ್ ಬ್ಯಾಂಕಿನವರು 240 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆಂದು ಹೇಳಿದ್ದೀರಿ ಆದರೆ ಕೋಆಪರೇಟೀವ್ ಇನ್‌ಸ್ಟಿಟ್ಯೂಷನ್ಸ್ ಸರಿಯಾದಂತಹ ರೀತಿಯಲ್ಲಿ ಸಹಕಾರ ಪದ್ಧತಿಯ ಪ್ರಕಾರ ನಡೆಯದೆ ಅಲ್ಲಿ ಅನೇಕ ಹೆಗ್ಗಣಗಳು ಸೇರಿಕೊಂಡು ಯಾವ ಕೋಆಪರೇಟೀವ ಸೊಸೈಟಿಗೂ ಹೆಚ್ಚಿನ ರೀತಿಯಲ್ಲಿ ಪ್ರಯೋಜನವಾಗದೇ ಇರುವುದು ಬಹಳ ಶೋಚನೀಯವಾದ ವಿಚಾರ ಕೋಆಪರೇಟೀವ್ ಡಿಪಾರ್ಟ್‌ಮೆಂಟಿಗೆ ಕೊಡುವ ಹಣ ಸರಿಯಾದ ರೀತಿಯಲ್ಲಿ ಖರ್ಚು ಮಾಡದೇ ಇರುವುದು ಆಶಾದಾಯಕವಾಗಿಲ್ಲ. ಕೋಆಪರೇಟೀವ್ ಸಂಸ್ಥೆಗಳಲ್ಲಿ ಕೋಆಪರೇಟೀವ್ ಸಿಸ್ಟಂ ಜಯಪ್ರದವಾಗದೇ ಹೋದರೆ ನಮ್ಮ ರಾಜ್ಯದ ಆರ್ಥಿಕ ಹಾಗೂ ಸಾಮಾಜಿಕ ಪರಿಸ್ಥಿತಿಯನ್ನು ಸರಿಪಡಿಸುವುದಕ್ಕಾಗುವುದಿಲ್ಲ. ಇದರಿಂದ ಅಲ್ಲಿ ಕೋಟ್ಯಾಂತರ ರೂಪಾಯಿಗಳು ದುರ್ವಿನಿಯೋಗವಾಗುತ್ತಿದೆ. ಈ ಸಂಸ್ಥೆಗಳಲ್ಲಿರುವ ಮಧ್ಯಸ್ಥರು, ಡೈರೆಕ್ಟರುಗಳು ಹಾಗೂ ಪ್ರಭಾವಶಾಲಿಗಳು ಅಲ್ಲಿನ ಅಧಿಕಾರಿಗಳು ದುರುಪಯೋಗ ಮಾಡಿರುವುದರಿಂದ ನಿಜವಾಗಿ ಅಲ್ಲಿ ಯಾರಿಗೆ ಸಹಾಯಕವಾಗಬೇಕೋ ಅದು ಆಗುತ್ತಿಲ್ಲ ಯಾರೂ ಏನೊಂದೂ ಉಪಯೋಗ ಪಡೆಯುತ್ತಾ ಇಲ್ಲ ಆದುದರಿಂದ ಇದರ ಬಗ್ಗೆ ಒಂದು ತನಿಖೆ ಆಗುವುದು ಉಚಿತವೆಂದು ನನಗನ್ನಿಸುತ್ತದೆ.

ಡಿಮ್ಯಾಂಡ್ ನಂ. 27 ಇದರಲ್ಲಿ 6 ಕೋಟಿ ರೂಪಾಯಿಗಳ ಹೆಚ್ಚುವರಿ ಬೇಡಿಕೆ ಕೇಳಿ 5 ಸಾವಿರ ಬೋರ್ ವೆಲ್ಸ್‌ಗಳನ್ನು ಮಾಡುತ್ತೇವೆ ಎಂದು ಹೇಳಿದ್ದೀರಿ ಆದರೆ ಇದುವರೆವಿಗೂ ಎಷ್ಟು ಬೋರ್‌ವೆಲ್ಸ್‌ಗಳು ಫೇಲಾಗಿವೆ ಎಂಬುದನ್ನು ಹೇಳಿಲ್ಲ. ನನಗೆ ಗೊತ್ತಿರುವ ಹಾಗೆ ಈಗಾಗಲೇ ಅನೇಕ ಬೋರ್‌ವೆಲ್ಸ್‌ಗಳು ಫೇಲಾಗಿವೆ. ಇದರ ಬಗ್ಗೆ ಅಂಕಿ ಅಂಶಗಳ ಮೂಲಕ ತಮ್ಮ ರಿಪ್ಲೈನಲ್ಲಿ ತಿಳಿಸಿದರೆ ಒಳ್ಳೆಯದು. ಬೋರ್‌ವೆಲ್ಸ್ ಕೆಲವು ಕಡೆ ಪ್ರಾರಂಭವಾಗಿವೆ. ಇನ್ನೂ ಅನೇಕ ಕಡೆಗಳಲ್ಲಿ ಪ್ರಾರಂಭವಾಗಿಲ್ಲ. ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನೂ ಕುಡಿಯುವ ನೀರಿನ ಅಭಾವ ಇದೆ. ಇನ್ನೂ ಹೆಚ್ಚಿನ ರೀತಿಯಲ್ಲಿ ನಿರ್ಮಾಣವಾಗಿಲ್ಲವೆಂದು ನಾನು ಕೇಳಿದ್ದೇನೆ. ಆರ್ಥ

ಮುಕ್ಕಾಲು, ಒಂದು ಮೈಲಿ ದೂರದಿಂದ ನೀರನ್ನು ತರುವ ಪರಿಸ್ಥಿತಿ ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ಇರುವುದರಿಂದ, ಕುಡಿಯುವ ನೀರಿನ ಸೌಕರ್ಯದ ಅವಶ್ಯಕತೆ ಇದ್ದೇ ಇದೆ. ಇದರ ಬಗ್ಗೆ ಕೂಡಲೇ ಒಂದು ತೀರ್ಮಾನವನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಡೈರಿ ಬಗ್ಗೆ ಹೇಳ ವುದಾದರೆ, ಡೈರಿ ಡಿಪಾರ್ಟ್‌ಮೆಂಟಿನಿಂದ ರಾಜ್ಯಪಾಲರ ಭಾಷಣ ದಲ್ಲಿ ನಮೂದಿಸಿದಂತೆ ಹಾಲು ಸರ್‌ಪ್ಲಸ್ ಇದೆಯೆಂತಲೂ ಮತ್ತೊಂದು ಕಡೆ ಹಾಲು ಹೆಚ್ಚಿಗೆ ಬಾರದೇ ಇರುವುದರಿಂದ ಬೆಲೆ ಏರಿಸಿದೆಯೆಂದು ಹೇಳಿಕೆ ಕೊಟ್ಟಿದ್ದೀರಿ. ಇದಕ್ಕೂ ಇದಕ್ಕೂ ವ್ಯತ್ಯಾಸ ಇದೆ. ಇದರ ಬಗ್ಗೆ ವಿವರಣೆ ಬೇಕೆಂದು ಕೇಳುತ್ತೇನೆ.

ಡಿಮ್ಯಾಂಡ್ ನಂ. 49 ಕರ್ನಾಟಕ ರಾಜ್ಯದ ಖಾದಿ ಅಂಡ್ ವಿಲೇಜು ಇಂಡಸ್ಟ್ರೀಸ್ ಬೋರ್ಡಿಗೆ ಎರಡೂವರೆ ಕೋಟಿ ರೂಪಾಯಿಗಳ ಬೇಡಿಕೆ ಇಟ್ಟಿದ್ದೀರಿ. ಖಾದಿ ಅಂಡ್ ವಿಲೇಜ್ ಇಂಡಸ್ಟ್ರೀಸ್ ಬೋರ್ಡಿನ ವ್ಯವಹಾರದ ಬಗ್ಗೆ ಸುಮಾರು ಹತ್ತಾರು ವರ್ಷಗಳಿಂದ ತನಿಖೆಯಾಗಬೇಕೆಂದು ಹೇಳುತ್ತಾ ಬಂದಿದ್ದೇನೆ ಆದರೂ ಇನ್ನು ತನಿಖೆಗೆ ವ್ಯವಸ್ಥೆಯಾಗಿಲ್ಲ ಖಾದಿ ಅಂಡ್ ವಿಲೇಜ್ ಇಂಡಸ್ಟ್ರೀಸ್ ಬೋರ್ಡಿನವರೇ ಹೆಚ್ಚು ಹಣವನ್ನು ಸ್ವಾಹ ಮಾಡುತ್ತಿದ್ದಾರೆ, ಇದರಿಂದ ಅನೇಕ ಸಂಸ್ಥೆಗಳು ಈಗಾಗಲೇ ಮುಳುಗಿಹೋಗಿವೆ. ಅದಕ್ಕೆ ಕೊಟ್ಟಿರತಕ್ಕಂಥಹ ಹಣ ಎಲ್ಲಿಹೋಯಿತು, ಕೊಟ್ಟಿರತಕ್ಕಂಥಹ ಹಣದಲ್ಲಿ ಎಷ್ಟು ವಸೂಲಿ ಆಗಿದೆ ಎಷ್ಟು ವಸೂಲಿಯಾಗಿಲ್ಲ, ಖರ್ಚಾಗಿರತಕ್ಕಂಥಾದ್ದು ಸರಿಯಾದ ರೀತಿಯಲ್ಲಿ ಖರ್ಚಾಗಿ ಪ್ರತಿಫಲ ಏನಾದರೂ ದೊರೆಯುತ್ತಿದೆಯೋ ಎಂಬುದರ ಬಗ್ಗೆ ಸಚಿವರು ವಿವರಣೆ ಕೊಟ್ಟರೆ ಒಳ್ಳೆಯದು.

ಡಿಮ್ಯಾಂಡ್ ನಂ. 50 ಇದರಲ್ಲಿ ಎನ್.ಜಿ.ಇ.ಎಫ್ 8 ಪರ್ಸೆಂಟ್ ಡಿವಿಡೆಂಡ್ ಕೊಟ್ಟಿದ್ದಾರೆ ಪಬ್ಲಿಕ್ ಸೆಕ್ಟಾರ್‌ನಲ್ಲಿ ನಿಜವಾಗಿಯೂ ಸರಿಯಾದಂತಹ ರೀತಿಯಲ್ಲಿ ಕೆಲಸ ಮಾಡಿದರೆ ಕಾರ್ಮಿಕರಿಗೆ ಹೆಚ್ಚಿಗೆ ಅನುಕೂಲವಾಗುತ್ತದೆ. ಏಕೆಂದರೆ ಈ ನ್ಯಾಯವಾದ ಬೋನಸ್ ಸೌಲಭ್ಯ ಅವರಿಗೆ ದೊರಕುತ್ತಾ ಇಲ್ಲ.

ಕೈಗಾರಿಕಾ ಕೇಂದ್ರಗಳೂ ಕೂಡ ಸರಿಯಾದಂಥ ರೀತಿಯಲ್ಲಿ ಕೆಲಸಮಾಡುತ್ತಿಲ್ಲ. ಆದ್ದರಿಂದ ಆದಷ್ಟು ಬೇಗ ಕಾರ್ಮಿಕರಿಗೆ ಸಲ್ಲಬೇಕಾದಂಥ ಬೋನಸ್ ಮತ್ತು ಹಿಂದೆ ಹಿಡಿದಿರತಕ್ಕಂಥ ಕಡ್ಡಾಯ ಠೇವಣಿಯನ್ನು ಕೊಡದೇ ಇದ್ದರೆ ಖಂಡಿತವಾಗಿ ಕೂಡ ಕಾರ್ಮಿಕರು ತಮ್ಮ ಬಗ್ಗೆ ಅಸಮಾಧಾನವನ್ನು ತೋರಿಸುತ್ತಾರೆ ಆದ್ದರಿಂದ ಇದನ್ನು ಬೇಗ ಕಾರ್ಮಿಕರಿಗೆ ವಾಪಸ್ ಕೊಡಿಸುವ ಏರ್ಪಾಟು ಮಾಡಬೇಕು. ನಾವು ವ್ಯವಸಾಯಕ್ಕೆ ಯಾವರೀತಿ ದುಡ್ಡನ್ನು ಖರ್ಚು ಮಾಡುತ್ತಿದ್ದೇವೋ ಅದೇ ರೀತಿಯಲ್ಲಿ ಇಂಡಸ್ಟ್ರೀಸ್‌ಗೂ ಖರ್ಚು ಮಾಡುತ್ತಿದ್ದೇವೆ. ಹಾಗೆ ಖರ್ಚು ಮಾಡುವಾಗ ಅದರ ಬಗ್ಗೆ ಆಗತಕ್ಕ ವ್ಯವಹಾರವನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳದೇಹೋದರೆ ಕಾರ್ಮಿಕರಲ್ಲಿ ಅಸಮಾಧಾನವುಂಟಾಗಿ ದೇಶದ ಆರ್ಥಿಕ ಪರಿಸ್ಥಿತಿಗೆ ತೊಂದರೆಯಾಗುತ್ತದೆ. ಇದರಿಂದ ಕಾರ್ಮಿಕರಿಗೆ ತೊಂದರೆಯಾಗುವುದಲ್ಲದೆ ಕೈಗಾರಿಕೆಗಳನ್ನು ನಂಬಿಕೊಂಡಿರತಕ್ಕ ಬಳಕೆದಾರರಿಗೂ ತೊಂದರೆಯಾಗುತ್ತದೆ. ಆದ್ದರಿಂದ ಬಳಕೆದಾರ ಕಾರ್ಮಿಕರ, ಹಾಗೂ ಎಲ್ಲ ಹಿತದೃಷ್ಟಿಯಿಂದ ಪರಿಣಾಮಕಾರಿಯಾದ ರೀತಿಯಲ್ಲಿ ಕೆಲಸ ಮಾಡದೇಹೋದ ಪಕ್ಷದಲ್ಲಿ ಖಂಡಿತವಾಗಿ ಆರ್ಥಿಕ ಪರಿಸ್ಥಿತಿಗೆ ದೊಡ್ಡ ಪೆಟ್ಟು ಬೀಳುತ್ತದೆ ಎಂಬ ಬಗ್ಗೆ ಯಾವ ಸಂದೇಹವೂ ಇಲ್ಲ. ಇಲ್ಲಿ ಇನ್ನೂ ಅನೇಕ ಬೇಡಿಕೆಗಳಿವೆ ಇದರ ಬಗ್ಗೆ ಬೇರೆ ಸದಸ್ಯರು ಮಾತನಾಡುವವರಿದ್ದಾರೆ ಮುಖ್ಯವಾಗಿ ಇವತ್ತು ಅಪ್ಪಣೆ ಕೊಟ್ಟಿರುವಹಾಗೆ ಬೇಡಿಕೆ ಮತ್ತು ವೋಟ್ ಆನ್ ಅಕೌಂಟ್ ಈ ಎರಡರ ಬಗ್ಗೆ ತೀರ್ಮಾನ ಮಾಡಬೇಕಾಗಿದೆ ವೋಟ್ ಆನ್ ಅಕೌಂಟ್ ತೆಗೆದುಕೊಳ್ಳುವಾಗ ವಿವರಗಳನ್ನು ಕೊಟ್ಟಿದ್ದರೆ ಚೆನ್ನಾಗಿತ್ತು ಆದರೆ ಇಲ್ಲಿ ವಿವರಗಳನ್ನು ಕೊಟ್ಟಿಲ್ಲ ಬಜೆಟ್ ಮೇಲೆ ಮಾತನಾಡುವಾಗ ಅದಕ್ಕೆ ಅವಕಾಶ ಇದೆ ಎಂದು ತಿಳಿದುಕೊಂಡಿದ್ದೇನೆ. ನಮ್ಮ ಹಣ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಾಗಿ ಹೋಗಬೇಕಾಗುತ್ತದೆ. ಅದರಲ್ಲೂ ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಕೇವಲ ಮತಗಳಿಸುವುದಕ್ಕೋಸ್ಕರವಾಗಿ ಹಣ ಖರ್ಚು ಮಾಡತಕ್ಕ ಯೋಜನೆ ಇದೆ ಮತ ಗಳಿಸುವುದಕ್ಕೆ ಯಾವ ಕೆಲಸಗಳನ್ನು ಮಾಡಬೇಕೋ ಅಷ್ಟನ್ನು ಮಾತ್ರ ಮಾಡಿದರೆ ಸಾಲದು ಈಗ ಖರ್ಚಾಗುತ್ತಿರುವ ಹಣ ರಾಜ್ಯದ ಆರ್ಥಿಕ ಪರಿಸ್ಥಿತಿ ಅಭಿವೃದ್ಧಿ ಮಾಡುವುದಕ್ಕಾಗಲೀ ಜನಸಾಮಾನ್ಯರ ಸೌಕರ್ಯವನ್ನು ಹೆಚ್ಚು ಮಾಡುವುದಕ್ಕಾಗಲೀ ಖರ್ಚಾಗುತ್ತಿಲ್ಲ. ಓಟು ಯಾರು ಕೊಡುತ್ತಾರೆ ಅಂತಹವರ ಮನವೊಲಿಸುವುದಕೆ. ಹೆಚ್ಚಾಗಿ ಹಣ ಖರ್ಚಾಗು

ತ್ತಿದೆ. ಬಡವರನ್ನು ಅನುಕೂಲ ಸ್ಥಿತಿಗೆ ತರಬೇಡಿ ಎಂದು ಯಾರೂ ಹೇಳುವುದಕ್ಕೆ ಹೋಗುವುದಿಲ್ಲ. ಒಂದು ಒಳ್ಳೆಯ ಉದ್ದೇಶ ಇಟ್ಟುಕೊಂಡು ಹಣ ಖರ್ಚು ಮಾಡಿದರೆ ಜನಗಳ ಹಿತವಾಗುತ್ತದೆ. ಬರೀ ಓಟು ಕೊಂಡುಕೊಳ್ಳುವುದಕ್ಕೆ ಹಣ ಖರ್ಚು ಮಾಡುವುದು ಒಳ್ಳೆಯದಲ್ಲ. ಎಲ್ಲಿಯವರಿಗೆ ಈ ರೀತಿ ಖರ್ಚು ಮಾಡುತ್ತಾ ಹೋಗುತ್ತಾರೋ ಅಲ್ಲಿಯವರೆಗೂ ಒಳ್ಳೆಯದಾಗುವುದಿಲ್ಲ.

3-00 ಪಿ.ಎಂ.

ಸ್ಲಂ ಎನ್‌ವೈರ್ನಮೆಂಟ್ ಇಂಪ್ರೂವ್‌ಮೆಂಟಿಗೆ ಒಂದೂವರೆ ಕೋಟಿ ರೂಪಾಯಿ ಸ್ಯಾಂಕ್ಷನ್ ಆಗಿದ್ದು ಅದರಲ್ಲಿ ಒಂದು ಕೋಟಿ ರೂಪಾಯಿ ಈಗ ಖರ್ಚು ಮಾಡಿದ್ದಾರೆ. ಇದರಲ್ಲಿ ಮುಕ್ಕಾಲು ಭಾಗವೆಲ್ಲಾ ವ್ಯರ್ಥವಾಗಿ ಖರ್ಚಾಗಿದೆ. ಒಂದೊಂದು ಸ್ಲಂನಲ್ಲೂ ಲ್ಯಾವೆಟರಿಗಳನ್ನು ಕಟ್ಟಿಸಿದ್ದಾರೆ. ದಯವಿಟ್ಟು ಅದನ್ನು ಪರಿಶೀಲನೆ ಮಾಡಿ. ಒಂದಾದರೂ ಚೆನ್ನಾಗಿದೆಯೋ ಎಂಬುದನ್ನು ಹೋಗಿ ನೋಡಿ. ಪ್ರತಿಯೊಂದು ಕಡೆ ಮಜಾಯಿಕ್ ಫ್ಲೋರಿಂಗ್ ಮತ್ತು ಗ್ಲೇಸಿಕ್ ಟೈಲ್ಸ್ ಹಾಕಿದ್ದಾರು. ಆದರೆ ಅದರಲ್ಲಿ ಸರಿಯಾಗಿ ನೀರಿನ ವ್ಯವಸ್ಥೆ ಇಲ್ಲ. ಟ್ಯಾಪ್‌ಗಳಿಲ್ಲ. ಹೀಗಾಗಿ ಲ್ಯಾವೆಟರಿಗಳೆಲ್ಲಾ ಗಲೀಜಾಗಿ ಯಥಾಪ್ರಕಾರ ಮೊದಲಿನ ಸ್ಥಿತಿಯಾಗಿವೆ. ಎಲ್ಲಾ ಕಡೆ ಮಲಿನವಾಗಿ ಹೋಗಿದೆ. ಸುಮಾರು ಒಂದೊಂದು ಸ್ಲಂಗೆ 10 ಕೊಳಾಯಿಗಳನ್ನು ಹಾಕಿದ್ದಾರೆ. ಅದು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಕಾರ್ಪೊರೇಷನ್ನಿನವರು ಕೊಳಾಯಿಗಳಿಗೆ ವರ್ಷಕ್ಕೆ 4800 ರೂಪಾಯಿಗಳನ್ನು ಕೊಡಬೇಕು, ಆದರೂ ನೀರಿನ ವ್ಯವಸ್ಥೆ ಸರಿಯಾಗಿಲ್ಲ. ಸೌಕರ್ಯಗಳಿಲ್ಲ. ಆ ಸ್ಲಂನಲ್ಲಿ ರೂಢಿಯಿಲ್ಲದೇ ಇರುವವರು ಹೋಗಿ ಕಾಲಿಟ್ಟರೆ ವಾಂತಿ ಮಾಡಿಕೊಂಡು ಕಷ್ಟಪಡಬೇಕಾದಂಥ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಇವರು ಖರ್ಚು ಮಾಡತಕ್ಕ ಹಣ ಪ್ರಯೋಜನವಾದಂತಾಗುವುದಿಲ್ಲ. ನೀವು ಖರ್ಚು ಮಾಡತಕ್ಕ ಹಣವನ್ನು ಬಡವರ ಉದ್ಧಾರ ಮಾಡುವುದಕ್ಕೆ ಕೊಡಿ. ಬೇಡ ಎಂದು ಹೇಳುವುದಿಲ್ಲ. ಬರೀ ಎಲೆಕ್ಷನ್ ಟೈಂನಲ್ಲಿ ಬಂದು ತ್ಯಾಪೆ ಕೆಲಸ ಮಾಡಿ ಓಟು ಗಿಟ್ಟಿಸಿಕೊಳ್ಳುವ ಕೆಲಸ ಮಾಡಬೇಡಿ. ಮೊದಲು ನಗರದಲ್ಲಿ 60 ಸ್ಲಂಗಳು ಮಾತ್ರ ಇತ್ತು. ಈಗ 160 ಸ್ಲಂಗಳಾಗಿವೆ. ಇದನ್ನು ಇಂಪ್ರೂವ್‌ಮೆಂಟ್ ಮಾಡುತ್ತೇವೆ ಉದ್ಧಾರ ಮಾಡುತ್ತೇವೆ ಎಂದು ಹೇಳುತ್ತಾ ಸ್ಲಂಗಳ ಸಂಖ್ಯೆಯನ್ನು ಬೆಳೆಸಿಕೊಂಡುಹೋಗುತ್ತಾ ಇದ್ದರೆ ದೇಶಕ್ಕೆ ಖಾಡಿತವಾಗಿ ಒಳ್ಳೆಯದಾಗುವುದಿಲ್ಲ. ಸರ್ಕಾರದವರು ಪ್ಲಾಟ್‌ಗಳನ್ನು ಕೊಡುವ ಬಗ್ಗೆ ಒಂದು ನಿಲುವನ್ನು ತೆಗೆದುಕೊಂಡಿದ್ದಾರೆ. ಇದರಿಂದ ಹೊಸದಾಗಿ ಸ್ಲಂ ಏರ್ಪಾಟಾಗುತ್ತದೆ. ಅದರ ಬದಲು ಕಡಿಮೆ ಖರ್ಚಿನಲ್ಲಿ ಮನೆಗಳನ್ನು ಕಟ್ಟಿಕೊಟ್ಟರೆ ಒಳ್ಳೆಯದು. ನೀವು ಅವರಿಗೆ ಪ್ಲಾಟ್‌ಗಳನ್ನು ಕೊಟ್ಟು ಅವರು ಅಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದರೆ ಪ್ರಯೋಜನವಾಗುವುದಿಲ್ಲ. ಅದರ ಬದಲು ಕಡಿಮೆ ಖರ್ಚಿನಲ್ಲಿ ಮನೆಗಳನು ಕಟ್ಟಿಸಿಕೊಡಿ ನಾನು ತಮಿಳುನಾಡಿನಲ್ಲಿ ನೋಡಿದ್ದೇನೆ. ಅಲ್ಲಿ ಮಾಡಿರುವುದೆಲ್ಲಾ ಮೆಚ್ಚುಗೆಯಾಗಿದೆ ಎಂದು ನಾನು ಹೇಳುವುದಿಲ್ಲ. ಕೆಲವು ಚೆನ್ನಾಗಿವೆ. ಅವರ ಮೆತಡ್ ಅನುಸರಿಸದೇ ಹೋದರೂ ನಾಲ್ಕು ಗೋಡೆ ಹಾಕಿ ಅಸ್ಬೆಸ್ಟಾಸ್ ಷೀಟ್ ಹಾಕಿ ಚೊಕ್ಕಟವಾಗಿ ಇಟ್ಟುಕೊಳ್ಳುವಹಾಗೆ ಮನೆ ಕಟ್ಟಿಕೊಡುವುದಕ್ಕೆ ಪ್ಲಾನ್ ಹಾಕಿ. ಇದನ್ನು ಯಾರೂ ಬದಲಾವಣೆ ಮಾಡುವುದಕ್ಕೆ ಆಗದಂತೆ ಪ್ಲಾನ್ ಹಾಕಿ. ಅವರಿಗೆ ನೀವು ಅನುಕೂಲ ಮಾಡಿಕೊಡುವಾಗ ಒಂದು ಪೀನಲ್ ಕ್ಲಾಸ್ ಹಾಕಿ ಅವ್ಯವಸ್ಥೆ ಯಾರಾದರೂ ಮಾಡಿದರೆ ಅದಕ್ಕೆ ದಂಡ ಕೊಡಬೇಕಾಗುತ್ತದೆ ಎಂದು ಹೇಳಿದರೆ ಒಳ್ಳೆಯದು. ಎರಡನೇ ಪಂಚವಾರ್ಷಿಕ ಯೋಜನೆಯಿಂದ ಐದನೇ ಪಂಚವಾರ್ಷಿಕ ಯೋಜನೆಯವರೆಗೂ ಕಾರ್ಪೊರೇಷನ್ನಿನವರು, ಸರ್ಕಾರದವರು ಸ್ಲಂಗಳಿಗೆ ಖರ್ಚು ಮಾಡಿರುವುದು ಎರಡೂವರೆ ಕೋಟಿ ರೂಪಾಯಿ. ಇಷ್ಟು ಖರ್ಚಾದರೂ ಕೂಡ ಬೆಂಗಳೂರಿನಲ್ಲಿ ಸ್ಲಂ ಇಂಪ್ರೂವ್‌ಮೆಂಟ್ ಮಾಡಿರುವುದು, ಷಿಫ್ಟ್ ಮಾಡಿರತಕ್ಕದ್ದು ಕೇವಲ ಐದು ಮಾತ್ರ. ಐದು ಸ್ಲಂ ಮಾತ್ರ ಅಭಿವೃದ್ಧಿಯಾಗಿದೆ. ಇನ್ನೂ 60 ಸ್ಲಂಗಳನ್ನು ಅಭಿವೃದ್ಧಿ ಮಾಡುವುದು ಯಾವ ಕಾಲಕ್ಕೆ? ಯಾವಾಗಲೂ ಜನಗಳಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಯೋಚನೆ ಮಾಡಬೇಕು. ತಾತ್ಕಾಲಿಕವಾಗಿ ಅನುಕೂಲವಾಗುವ ಹಾಗೆ ಮಾಡಿದರೆ ಅದು ಸರಿಯಾಗಿರುವುದಿಲ್ಲ. ಸ್ಲಂ ಕ್ಲಿಯರೆನ್ಸ್ ಬೋರ್ಡಿನ ಅಧ್ಯಕ್ಷರು ಮಾನ್ಯ ಮುಖ್ಯಮಂತ್ರಿಯವರ ಅಳಿಯ ಶ್ರೀಮಾನ್ ನಟರಾಜ್ ಅವರ ಜೊತೆ ಹೋಗಿ ನಿಮಗೆ ಜಾಗ ಕೊಡಿಸುತ್ತೇವೆ, ನೀವು ನಮಗೆ ಓಟು ಕೊಡಿ ಎಂದು ಹೇಳಿದ್ದಾರೆ. ನಾನೂ ಕೂಡ ಸ್ಲಂ ಏರಿಯಾದಲ್ಲೇ ಹೇಳಿದ್ದೆ. ಎಲೆಕ್ಷನ್ನಿಗೆ ಮುಂಚೆ ನಿಮಗೇನಾದರೂ ಸೈಟು ಕೊಡುವುದಾದರೆ ಅಥವಾ ಕೊಟ್ಟರೆ ನೀವು ದಯವಿಟ್ಟು ಕಾಂಗ್ರೆಸ್ಸಿಗೇ

ಓಟು ಹಾಕಿ ಎಂದು ಕೈಮುಗಿದು ಕೇಳಿಕೊಂಡಿದ್ದೆ. ನೀವು ಎಲೆಕ್ಷನ್ ಟೈಂನಲ್ಲಿ ಹೋಗಿ ಸೈಟು ಕೊಡುತ್ತೇವೆ ಅಥವಾ ಇನ್ನೇನಾದರೂ ಹೇಳಿ ಕೆಲಸ ಮಾಡುವ ಬದಲು ಶಾಶ್ವತವಾದ ಒಂದು ಕೆಲಸ ಮಾಡಬೇಕು. ಚುನಾವಣೆ ಸಮಯದಲ್ಲಿ ಉದ್ಧಾರ ಮಾಡುತ್ತೇವೆ ಎಂದು ಘೋಷಣೆ ಮಾಡುವುದು ಬೇಡ. ಖಂಡಿತವಾಗಿ, ನಿಜವಾಗಿ, ಬಡವರನ್ನು ಉದ್ಧಾರ ಮಾಡಬೇಕು ಎಂಬ ಮನೋಭಾವದಿಂದ ಕೆಲಸಗಳನ್ನು ಮಾಡಿದರೆ ನೀವು ಮಾಡಿದ ಕೆಲಸಕ್ಕೆ ನಾವೂ ಕೂಡ ಶಹಬಾಸ್‌ಗಿರಿಯನ್ನು ಕೊಡುತ್ತೇವೆ.

ಶ್ರೀ **ಬಿ.** ಪುಟ್ಟಸ್ವಾಮಯ್ಯ.—ಆಗ ದೇವಸ್ಥಾನದಲ್ಲಿ ವಿಗ್ರಹಗಳನ್ನು ತೆಗೆದು ಇವರನ್ನೇ ಇಟ್ಟುಬಿಡಬಹುದು.

ಶ್ರೀ ಟಿ. ಆರ್. ಶಾಮಣ್ಣ.—ದಯಮಾಡಿ ಸಾರ್ವಜನಿಕರ ಹಣವನ್ನು ಖರ್ಚು ಮಾಡುವಾಗ ರಾಜ್ಯಕ್ಕೆ ಮತ್ತು ರಾಜ್ಯದ ಜನತೆಗೆ ಉಪಕಾರ ಆಗುವ ಹಾಗೆ ಮಾಡಬೇಕು ಎಂದು ಹೇಳಿ ಜನರ ಕಣ್ಣಿಗೆ ಮಣ್ಣೆರಚತಕ್ಕ ಪ್ರವೃತ್ತಿ ಹೋಗಬೇಕು ಎಂದು ಮತ್ತೊಮ್ಮೆ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ **ಬಿ.** ವಿ. ಕಕ್ಕಿಲಾಯ (ಬಂಟವಾಳ).—ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಮಣ್ಣನವರು ಎರಡು ಪ್ರಶ್ನೆಗಳನ್ನು ಎತ್ತಿದರು. ಮೊದಲನೆಯದು ಕಾರ್ಮಿಕರಿಗೆ ಬೋನಸ್ ಕೊಡುವ ವಿಚಾರ ಮತ್ತು ಕಾರ್ಮಿಕರಿಂದ ಹಿಡಿದಿಟ್ಟಿರತಕ್ಕಂಥ ಕಡ್ಡಾಯ ಠೇವಣಿ ಕೊಡುವ ವಿಚಾರ. ಕಾರ್ಮಿಕರಿಂದ ಸುಮಾರು ಒಂದು ಸಾವಿರ ಕೋಟಿ ರೂಪಾಯಿನಷ್ಟು ಕಡ್ಡಾಯ ಠೇವಣಿಯ ರೂಪದಲ್ಲಿ ಕೇಂದ್ರ ಸರ್ಕಾರದವರು ವಸೂಲು ಮಾಡಿದ್ದಾರೆ. ಈ ಬಗ್ಗೆ ನಮ್ಮ ಸರ್ಕಾರದವರು ಕೇಂದ್ರದವರಿಗೆ ಒತ್ತಾಯ ತಂದು ಈ ಕಡ್ಡಾಯ ಠೇವಣಾತಿ ಹಣವನ್ನು ಒಂದೇ ಕಂತಿನಲ್ಲಿ ವಾಪಸ್ ಕೊಡುವ ಹಾಗೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಬೋನಸ್ ಕಾಯಿದೆ ತಿದ್ದುಪಡಿಯಾಗಿ ಎಲ್ಲ ಸಂದರ್ಭದಲ್ಲಿ ಕನಿಷ್ಟ ಬೋನಸ್ ಕೊಡುವುದಕ್ಕೆ ಪಾರ್ಲಿಮೆಂಟಿನಲ್ಲಿ ಏನು ಹಿಂದೆ ಶಾಸನ ಆಗಿತ್ತು ಅದನ್ನು ತುರ್ತು ಪರಿಸ್ಥಿತಿ ಕಾಲದಲ್ಲಿ ರದ್ದು ಮಾಡಿದ್ದರಿಂದ ಬೋನಸ್ ಕಾಯಿದೆ ಕಿಡೇರದಹಾಗಾಗಿದೆ. ಇದನ್ನು ಬದಲಾವಣೆ ಮಾಡಿ ಕಾರ್ಮಿಕರಿಗೆ ಎಲ್ಲ ಸಂದರ್ಭದಲ್ಲೂ ಕೂಡ ಬೋನಸ್ ಸಿಗುವ ಹಾಗೆ ಕಾಯಿದೆಯನ್ನು ಪುನರ್‌ಜೀವಗೊಳಿಸಬೇಕು. ಅದಕ್ಕೆ ನಮ್ಮ ರಾಜ್ಯಸರ್ಕಾರದವರು ಶಿಫಾರಸು ಮಾಡಬೇಕು ಎಂದೂ ಕೂಡ ಶಾಮಣ್ಣನವರು ಹೇಳಿದ್ದಾರೆ. ಈ ಮಾತನ್ನು ಶ್ರೀಮಾನ್ ಶಾಮಣ್ಣನವರು ಹೇಳಿರುವುದರಿಂದ ಬಹುಶಃ ಕೇಂದ್ರ ಸರ್ಕಾರದವರು ಈ ಬೇಡಿಕೆಯನ್ನು ಮನ್ನಿಸಬಹುದು ಎಂದು ಭಾವಿಸಬಹುದು. ಇದನ್ನು ರಾಜ್ಯಸರ್ಕಾರದವರೇ ಮಾಡುವುದಕ್ಕೆ ಬರುವುದಿಲ್ಲ. ಕೇಂದ್ರ ಸರ್ಕಾರದವರ ಮೇಲೆ ಒತ್ತಾಯ ತಂದು ಮಾಡಬೇಕು. ಆ ರೀತಿ ಮಾಡಿದರೆ ಈ ಸಭೆ ಸಂಪೂರ್ಣವಾಗಿ ಅದಕ್ಕೆ ಬೆಂಬಲ ಕೊಡುತ್ತದೆ ಎಂದು ಹೇಳುತ್ತೇನೆ.

ಎರಡನೆಯದಾಗಿ, ಭೂಸುಧಾರಣೆಯ ವಿಚಾರದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಈಗ ನಮ್ಮ ರಾಷ್ಟ್ರದಲ್ಲಿ ಸುಮಾರು 105 ಭೂಸುಧಾರಣಾ ಶಾಸನಗಳು ಮತ್ತು ಎಸ್ಟೇಟ್ ಅಬಾಲಿಷನ್ ಆಕ್ಟ್‌ಗಳನ್ನು 9ನೇ ಪರಿಶಿಷ್ಟದಲ್ಲಿ ಸೇರಿದ್ದಾರೆ. ಈ 9ನೇ ಪರಿಚ್ಛೇದವನ್ನು ಕಿತ್ತು ಹಾಕಬೇಕೆಂಬ ಮಾತನ್ನು ಅನೇಕ ಸಂದರ್ಭದಲ್ಲಿ ನಮ್ಮ ಈಗಿನ ಪ್ರಧಾನಿಯವರು ಹಿಂದೆ ಬಹಿರಂಗವಾಗಿ ಘೋಷಿಸಿದ್ದರು, ಅದಕ್ಕೆ ಕೇರಳದಲ್ಲಿ ಮಾಜಿ ಮುಖ್ಯಮಂತ್ರಿಗಳು ಸಹ ಬೆಂಬಲ ಕೊಟ್ಟು ಮಾತನಾಡಿದ್ದಾರೆ. ಹೀಗಿರುವಾಗ ಕೇಂದ್ರಸರ್ಕಾರದವರು 9ನೇ ಪರಿಚ್ಛೇದವನ್ನು ಬದಲಾವಣೆ ಮಾಡಿದರೆ ಅಥವಾ ಕಿತ್ತು ಹಾಕಿದರೆ ಅದರಿಂದ ಭೂಸುಧಾರಣಾ ಶಾಸನಗಳನ್ನು ಊರ್ಜಿತವಾಗಿ ಇಟ್ಟುಕೊಳ್ಳುವುದಕ್ಕೆ ಮತ್ತು ಅನುಷ್ಠಾನಕ್ಕೆ ತರುವುದಕ್ಕೆ ತೊಂದರೆಯಾಗಬಹುದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ತುರ್ತು ಪರಿಸ್ಥಿತಿಯ ಕಾಲದಲ್ಲಿ ಆದ ಕೆಲವು ಅನಾವಶ್ಯಕ ಶಾಸನಗಳನ್ನು ಕೂಡ 9ನೇ ಪರಿಚ್ಛೇದದಲ್ಲಿ ಸೇರಿಸಿದ್ದಾರೆ. ಅಂಥ ಶಾಸನಗಳನ್ನು 9ನೇ ಪರಿಚ್ಛೇದದಿಂದ ತೆಗೆದುಹಾಕುವ ಬಗ್ಗೆ ಸೂಚನೆಗಳು ಬಂದರೆ ಅದಕ್ಕೆ ಎಲ್ಲ ಕಡೆಯೂ ಬೆಂಬಲ ಸಿಗಬಹುದೆಂದು ಭಾವಿಸುತ್ತೇನೆ. ನಮ್ಮ ಸಂವಿಧಾನದಲ್ಲಿ ಯಾವ ಕಾನೂನುಗಳಾಗಿವೆ, ಅವುಗಳನ್ನೆಲ್ಲ 9ನೇ ಪರಿಚ್ಛೇದದಲ್ಲಿ ಸೇರಿಸಿದ್ದಾರೆ. ಆದಕಾರಣ ಅದಕ್ಕೆ ಯಾವ ವಿಧವಾದ ಧಕ್ಕೆಯೂ ಬರಬಾರದೆಂಬ ನಮ್ಮ ಸರ್ಕಾರದ ಅಭಿಪ್ರಾಯವನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಈಗಾಗಲೇ ಹಲವಾರು ಕಾರ್ಖಾನೆಗಳು ಮುಚ್ಚಿ ಸಾವಿರಾರು ಮಂದಿ ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ದಾವಣಗೆರೆಯಲ್ಲಿ ಶಂಕರ್ ಟೆಕ್ಸ್‌ಟೈಲ್ ಎಂಬ ಮಿಲ್ಲನ್ನು ಒಂದೂವರೆ ವರ್ಷಗಳಿಂದ ಮುಚ್ಚಿದ್ದಾರೆ. ಬೆಂಗಳೂರಿನ ಸುತ್ತಮುತ್ತಲೂ ಸಹ ಅನೇಕ ಸಣ್ಣ ಸಣ್ಣ ವರ್ಕ್‌ಷಾಪ್‌ಗಳು, ಗಿರಣಿಗಳು ಮುಚ್ಚಲ್ಪಟ್ಟಿವೆ. ಈ ನಿರುದ್ಯೋಗ ಸಮಸ್ಯೆ ನಿವಾರಣೆಯಾಗಬೇಕಾದರೆ ಮೊದಲು ಮುಚ್ಚಿರುವ ಕಾರ್ಖಾನೆಗಳನ್ನು ತೆರೆಯುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಈ ಬಗ್ಗೆ ಮಾನ್ಯ ಕಾರ್ಮಿಕ ಸಚಿವರು ಕಳೆದ ಬಜೆಟ್ ಅಧಿವೇಶನದಲ್ಲಿ ಶಂಕರ್ ಟೆಕ್ಸ್‌ಟೈಲ್ ಮಿಲ್ಲನ್ನು ನ್ಯಾಶನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್ನಿನವರು ತೆಗೆದುಕೊಳ್ಳುವಂತೆ ಶಿಫಾರಸ್ಸು ಮಾಡುತ್ತೇವೆಂದು ಭರವಸೆ ನೀಡಿದ್ದಾರೆ. ಈಗ ಬಂದಿರುವ ಸರ್ಕಾರದವರು ಬಹುಶಃ ನಿಮ್ಮ ಮಾತಿಗೆ ಹೆಚ್ಚು ಬೆಲೆ ಕೊಡಬಹುದೆಂದು ತಿಳಿದುಕೊಂಡಿದ್ದೇನೆ. ಆ ಸರ್ಕಾರಕ್ಕೆ ಅದನ್ನು ಕಾರ್ಯಗತ ಮಾಡುವುದಕ್ಕೆ ಆಗಲಿಲ್ಲ, ಹಿಂದೆ ಯಾವ ಆಶ್ವಾಸನೆಯನ್ನು ನೀಡಿದ್ದರೋ ಅದನ್ನು ಕಾರ್ಯಗತಗೊಳಿಸುವುದಕ್ಕೆ, ಮುಚ್ಚಿರುವ ಗಿರಣಿಗಳನ್ನು ತೆಗೆಯುವುದಕ್ಕೆ ಮತ್ತು ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್ನಿನ ಮೂಲಕ ಕಾರ್ಮಿಕರೆಲ್ಲರಿಗೂ ಕೂಡ ಉದ್ಯೋಗವಕಾಶವನ್ನು ಕೊಡಿಸುವುದಕ್ಕೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ತಮ್ಮ ಸಪ್ಲಿಮೆಂಟರಿ ಎಸ್ಟಿಮೇಟಿನ ಹಲವು ಅಂಶಗಳನ್ನು ನೋಡಿದರೆ, 20 ಅಂಶಗಳ ಕಾರ್ಯಕ್ರಮವನ್ನು ಜಾರಿಗೊಳಿಸುವುದಕ್ಕೆ ಖರ್ಚುಗಳು ಜಾಸ್ತಿಯಾಗಿದೆ ಎಂದು ಭಾಸವಾಗುತ್ತದೆ. ಆರ್ಥಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದಕ್ಕೆ ಹೆಚ್ಚು ವೆಚ್ಚ ತಗಲಿದೆ ಎಂದು ಎಕ್ಸಪ್ಲನೇಟರಿ ನೋಟುಗಳಲ್ಲಿ ಹೇಳಿದ್ದೀರಿ. 20 ಅಂಶಗಳ ಕಾರ್ಯಕ್ರಮ ಆರಂಭವಾದ 2-3 ತಿಂಗಳುಗಳ ಕಾಲ ಮಾತ್ರ ಅದಕ್ಕೆ ಗಮನ ಕೊಟ್ಟಂತೆ ಕಾಣುತ್ತದೆ. ಆಮೇಲೆ ಅದು ಎಲ್ಲರಿಗೂ ಮರತೇ ಹೋಯಿತು. ಆ 20 ಅಂಶಗಳ ಕಾರ್ಯಕ್ರಮದಲ್ಲಿ ಬೆಲೆಗಳನ್ನು ಹತೋಟಿಗೆ ತರುವುದು ಅದರಲ್ಲಿ ಒಂದು ಅಂಶ. ನಮ್ಮ ರಾಜ್ಯದಲ್ಲಿ ಇವತ್ತಿನ ಪರಿಸ್ಥಿತಿಯನ್ನು ನೋಡಿದರೆ ಹಲವು ನಿತ್ಯ ಉಪಯೋಗದ ಬಹಳ ಅವಶ್ಯ ವಸ್ತುಗಳ ಬೆಲೆ ಈಗಾಗಲೇ ಏರುವುದಕ್ಕೆ ಆರಂಭವಾಗಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಇತ್ತೀಚಿನ ಕೆಲವು ದಿನಗಳಲ್ಲಿ ಒಂದು ಕ್ವಿಂಟಾಲ್ ಅಕ್ಕಿಗೆ 20 ರೂಪಾಯಿ ಬೆಲೆ ಜಾಸ್ತಿಯಾಗಿದೆ ಎಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ಖಾದ್ಯ ತೈಲಗಳ ಬೆಲೆ ಹೆಚ್ಚಾಗಿರುವುದನ್ನು ತಾವು ಕೂಡ ಒಪ್ಪಿಕೊಂಡಿದ್ದೀರಿ. ಈ ಏರು ಬೆಲೆಗಳನ್ನು ಹತೋಟಿಗೆ ತರಬೇಕಾದರೆ ಮೂಲಭೂತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಮುಖ್ಯವಾಗಿ ಆಹಾರ ಧಾನ್ಯಗಳನ್ನು ಉತ್ಪಾದಿಸುವ ರೈತನಿಗೆ ನ್ಯಾಯವಾದ ಬೆಲೆ ದೊರೆಯುವಂತೆ ವ್ಯವಸ್ಥೆ ಮಾಡಬೇಕು. ಕಬ್ಬು ಬೆಳೆದಂತಹ ರೈತನಿಗೆ ಸರಿಯಾದ ಬೆಲೆ ಸಿಗುವುದಿಲ್ಲ ಆದರೆ ಸಕ್ಕರೆಯ ಬೆಲೆ ಮಾತ್ರ ವಿಪರೀತವಾಗಿ ಏರುತ್ತಿದೆ. ಈ ವಿಪರ್ಯಾಸಗಳನ್ನು ತೊಡೆದು ಹಾಕುವ ದೃಷ್ಟಿಯಿಂದ ರೈತನ ಮತ್ತು ಗ್ರಾಹಕರ ಹಿತದೃಷ್ಟಿಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು. ಬಡವರಿಗೆ, ಮಧ್ಯಮ ವರ್ಗದವರಿಗೆ, ಉದ್ಯೋಗಸ್ಥರಿಗೆ ಮತ್ತು ಕಾರ್ಮಿಕರಿಗೆ ನ್ಯಾಯವಾದ ಬೆಲೆಯಲ್ಲಿ ಅವರಿಗೆ ಆವಶ್ಯಕವಾಗಿ ಬೇಕಾದ ಸಾಮಾನುಗಳು ದೊರೆಯುವಂತೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಬಗ್ಗೆ ರಾಜ್ಯ ಸರ್ಕಾರಕ್ಕೆ ಎಷ್ಟು ಸಾಧ್ಯವೋ ಅಷ್ಟನ್ನು ಮಾಡಿ ಉಳಿದ ವಿಚಾರಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಬೇಕೆಂದು ಹೇಳಬಯಸುತ್ತೇನೆ. ಈ ಬೆಲೆ ಏರಿಕೆಯನ್ನು ಹತೋಟಿಗೆ ತರುವುದರ ಜೊತೆಗೆ ಕಡಿಮೆ ಬಡ್ಡಿ ದರದಲ್ಲಿ ಎಲ್ಲ ದುರ್ಬಲ ವರ್ಗದ ಜನರಿಗೆ ಸಾಲ ಕೊಡುವ ವಿಚಾರವನ್ನು ಸಹ ಕಾರ್ಯರೂಪಕ್ಕೆ ತರಬೇಕು. ಇವತ್ತು ನಾವು ಗಮನಿಸಬೇಕಾದ ಅಂಶವೇನೆಂದರೆ ಕಡಿಮೆ ಬಡ್ಡಿಯಲ್ಲಿ ಸಾಲ ಕೇವಲ ಕೆಲವೇ ದುರ್ಬಲ ವರ್ಗದವರಿಗೆ ಮಾತ್ರ ದೊರೆಯುತ್ತಿದೆ. ಆದರೆ ಯಾರು ನಿಜವಾಗಿ ದುರ್ಬಲವಾಗಿ ಹಳ್ಳಿಗಾಡಿನಲ್ಲಿ ತನ್ನ ಕೆಲಸ ಕಾರ್ಯಗಳ ತೊಡಗಿರುತ್ತಾನೋ ಅಂಥವರಿಗೆ ದೊರೆಯುತ್ತಿಲ್ಲ, ಹಳ್ಳಿಗಾಡಿನ ಕೆಲವು ದುರ್ಬಲ ವರ್ಗದ ಜನರಿಗೆ ಭೂಸುಧಾರಣೆಯಿಂದಾಗಿ ಜಮೀನು ದೊರೆತಿದೆ. ಆದರೆ ಅವರಿಗೆ ಆ ಜಮೀನನ್ನು ಅಭಿವೃದ್ಧಿಪಡಿಸಿ ಬೆಳೆ ತೆಗೆಯುವುದಕ್ಕೆ ಇವತ್ತಿಗೂ ಕೂಡ ಕಡಿಮೆ ಬಡ್ಡಿಯಲ್ಲಿ ಸಾಲ ಸಿಕ್ಕುತ್ತಿಲ್ಲ. ಅದಕ್ಕೆ ಬೇಕಾದ ವ್ಯವಸ್ಥೆಯನ್ನು ರಾಜ್ಯ ಸರ್ಕಾರದವರೇ ಮಾಡಬೇಕಾಗಿದೆಯೆಂದು ಕಾಣಿಸುತ್ತದೆ. ಉದಾಹರಣೆಗೆ ಒಬ್ಬ ರೈತನಿಗೆ ಅಲ್ಪಾವಧಿ ಮತ್ತು

ಮಧ್ಯಮಾವಧಿ ಸಾಲ ಸಿಕ್ಕ ಬೇಕಾದರೂ ಅವನು ಕನಿಷ್ಟ 10-11 ಪರ್ಸೆಂಟ್ ಬಡ್ಡಿಯನ್ನು ತೆರಬೇಕಾಗಿದೆ. ಅದು ಬಹಳ ದುಬಾರಿಯಾದ ಬಡ್ಡಿಯೆಂದು ಹೇಳಬಯಸುತ್ತೇನೆ. ಸಣ್ಣ ಸಣ್ಣ ಕೈಗಾರಿಕೋದ್ಯಮಿಗಳಿಗೆ 4 ಪರ್ಸೆಂಟ್ ಬಡ್ಡಿ ದರದಲ್ಲಿ ಕನ್‌ಸಂಪ್ಷನ್ ಲೋನ್ ಎಂದು ಕೊಡಲಾಗುತ್ತಿದೆ. ಆದರೆ ಆ ಸವಲತ್ತು ಕೂಡ ನಿಜವಾಗಿಯೂ ನಮ್ಮ ದೇಶದ ಆಹಾರ ಪದಾರ್ಥಗಳನ್ನು ಉತ್ಪಾದಿಸುವ ರೈತನಿಗೆ ಸಿಕ್ಕುತ್ತಿಲ್ಲ. ಆ ಸವಲತ್ತು ರೈತನಿಗೆ ಸಿಕ್ಕಿದರೆ ಅವನಿಗೆ ಹಿಂತಿರುಗಿಸಲು ಅನುಕೂಲವಾಗುತ್ತದೆ ಮತ್ತು ಖಂಡಿತವಾಗಿಯೂ ಹಿಂತಿರುಗಿಸುತ್ತಾನೆ. ಈ ರೀತಿ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವ ವ್ಯವಸ್ಥೆಯನ್ನು ರೈತನಿಗೂ ಸಹ ಅನ್ವಯಿಸುವಂತೆ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಡಿಮ್ಯಾಂಟ್ ನಂ. 2ರಲ್ಲಿ ಗವರ್ನರ್, ಮಿನಿಸ್ಟರ್ಸ್, ಪಬ್ಲಿಕ್ ಸರ್ವೀಸ್ ಕಮಿಷನ್ ಇತ್ಯಾದಿಗಳಿಗೆ ಐದೂವರೆ ಲಕ್ಷ ರೂಪಾಯಿಗಳ ತಮ್ಮ ಬೇಡಿಕೆಯನ್ನು ಇಟ್ಟಿದ್ದೀರಿ. ಹಿಂದಿನದೆಲ್ಲ ಸೇರಿ ಟೆಲಿಫೋನ್ ವೆಚ್ಚ 5 ಲಕ್ಷ ರೂಪಾಯಿ ಎಂದು ನಮೂದಿಸಿದ್ದೀರಿ. ಇದು ಪ್ರತಿ ವರ್ಷ ಬಜೆಟ್ಟನ್ನು ಮಂಡಿಸುವಾಗ ತಿಳಿದುಬರುವಂತಹ ಖರ್ಚು, ಆದರೆ ಇದನ್ನೇಕೆ ಆಗ ತೆಗೆದುಕೊಳ್ಳಲಿಲ್ಲ ? ಈ ಬಗ್ಗೆ ವಿವರಣೆ ಕೊಡಬೇಕೆಂದು ಕೇಳಬಯಸುತ್ತೇನೆ. ಜಿಲ್ಲಾಧಿಕಾರಿಗಳಿಗೆ ಕೊಡುವಂತಹ ಗ್ರಾಂಟುಗಳನ್ನು ಕೂಡ ಕೂಲಂಕಷವಾಗಿ ಪರಿಶೀಲಿಸಿದರೆ, 1.7 ಲಕ್ಷ ರೂಪಾಯಿ ಪ್ರಯಾಣ ವೆಚ್ಚ, 2 ಲಕ್ಷ ರೂಪಾಯಿ ಕಛೇರಿ ವೆಚ್ಚ, ಮತ್ತು 2.5 ಲಕ್ಷ ರೂಪಾಯಿ ಇತರೆ ವೆಚ್ಚಗಳು ಎಂದು ಇದೆ ಇದೆಲ್ಲ ಏನು ಏಕೆ ಎಂದು ಸರಿಯಾಗಿ ಅರ್ಥವಾಗುವುದಿಲ್ಲ. ಡಿಮ್ಯಾಂಡ್ ನಂ. 12ರಲ್ಲಿ ಬೆಂಗಳೂರು ಡಿವಿಜನ್ನಿನ ಕಛೇರಿ ವೆಚ್ಚ 0,16 ಲಕ್ಷ ರೂಪಾಯಿ ಪ್ರಯಾಣ ಭತ್ಯ 1.7 ಲಕ್ಷ ರೂಪಾಯಿ ಕಛೇರಿ ವೆಚ್ಚ ಮೈಸೂರು ಡಿವಿಜನ್ನಿನಲ್ಲಿ 2 ಲಕ್ಷ ರೂಪಾಯಿ, ಬೆಳಗಾಂ ಡಿವಿಜನ್ನಿನಲ್ಲಿ 2.5 ಲಕ್ಷ ರೂಪಾಯಿ, ಗುಲ್ಬರ್ಗ್ ಡಿವಿಜನ್ನಿನಲ್ಲಿ 8 ಸಾವಿರ ರೂಪಾಯಿಗಳು ಎಂದು ಇದೆ. ಈ ಕಛೇರಿಗಳ ಖರ್ಚು ಕೂಡ ಏಕೆ ಇಷ್ಟು ಲಕ್ಷಗಟ್ಟಲೆ ರೂಪಾಯಿಗಳು ಜಾಸ್ತಿ ಆಯಿತೆಂಬ ಬಗ್ಗೆ ವಿವರಣೆ ಕೊಡಬೇಕೆಂದು ಕೇಳಬಯಸುತ್ತೇನೆ.

ಚುನಾವಣೆಗಿಂತ ಸ್ವಲ್ಪ ಸಮಯದ ಹಿಂದೆ ಮಾನ್ಯ ಸಂಜಯಗಾಂಧಿಯವರು ಗುಲ್ಬರ್ಗಕ್ಕೆ ದಯಮಾಡಿಸಿದರು. ಅವರು ಬೆಂಗಳೂರಿಗೂ ಬಂದಿದ್ದರು, ಬೀದರ್‌ಗೂ ಬಂದಿದ್ದರು, ಹಲವು ಕಡೆಗಳಲ್ಲಿ ಅವರು ಪ್ರವಾಸ ಮಾಡಿದಾಗ ಯಾರು ಏನೇನು ಮಾಡಿದರೋ ಅದೆಲ್ಲಾ ನಮಗೆ ಗೊತ್ತಿಲ್ಲ. ಅಂಥವರು ಬಂದು ಹೋದಲ್ಲಿ ಬೇಕಾದಷ್ಟು ಅವಾಂತರಗಳು ಆಗಿರುವುದು ಮಾತ್ರ ಖಂಡಿತವಾದ ವಿಷಯ. ಗುಲ್ಬರ್ಗದ ಜನ ಅವರನ್ನು ಮುಖ ನೋಡಿ ಅಷ್ಟಕ್ಕೆ ಬಿಟ್ಟರು. ಇಷ್ಟಕ್ಕೆ ನಾವು ಸಂತೋಷ ಪಡುವುದು. ಅವರು ನಮ್ಮ ರಾಜ್ಯಕ್ಕೆ ಬಂದಂಥ ಕಾಲದಲ್ಲಿ ಬಹಳಷ್ಟು ಹಣ ಖರ್ಚಾಗಿದೆ. ಆಗ ಸರ್ಕಾರ, ರಸ್ತೆಗಳನ್ನು ದುರಸ್ತಿ ಮಾಡುವುದರಲ್ಲಿ ಸರ್ಕಾರದ ವಾಹನಗಳನ್ನು ಉಪಯೋಗ ಮಾಡುವುದರಲ್ಲಿ: ಸಿಬ್ಬಂದಿಯನ್ನು ಉಪಯೋಗ ಮಾಡುವುದರಲ್ಲಿ, ಎಲ್ಲಾ ರೀತಿಯಲ್ಲಿಯೂ ಕೂಡ ಆ ಒಂದು ಸಂದರ್ಭದಲ್ಲಿ ಲಕ್ಷಾಂತರ ರೂಪಾಯಿಗಳು ಖರ್ಚಾಗಿವೆ. ಅದನ್ನು ತಾವು ಯಾವುದರಲ್ಲಿ ಸೇರಿಸಿದ್ದೀರಿ ? ಯಾವ ರೀತಿಯಲ್ಲಿ ಅದರ ಬಗ್ಗೆ ತಾವು ಲೆಕ್ಕ ಕೊಡುತ್ತೀರಿ ಎನ್ನುವುದನ್ನು ಸ್ವಲ್ಪ ತಿಳಿಸಬೇಕು. ಏಕೆಂದರೆ, ಅದರ ಎಕ್ಸ್‌ಪೆನ್ಸಸ್‌ನಲ್ಲಿ, ಆಫೀಸ್ ಎಕ್ಸ್‌ಪೆಂಡೀಚರ್ ಲಕ್ಷಾಂತರ ರೂಪಾಯಿಗಳು ಎಂದು ನಾವು ನೋಡಿದಾಗ ಯಾವುದಾದರೂ ಒಂದರಲ್ಲಿ ಈ ಎಕ್ಸ್‌ಪೆಂಡೀಚರ್ ಸೇರಿಕೊಂಡುಬಿಟ್ಟಿದೆ ಎಂದು ನಮಗೆ ಅರ್ಥವಾಗುತ್ತದೆ ಸರ್ಕಾರದವರು 20 ಅಂಶಗಳ ಕಾರ್ಯಕ್ರಮಗಳ ಬಗ್ಗೆ, ಬೆಲೆ ಏರಿಕೆಯ ಬಗ್ಗೆ, ರೈತರಿಗೆ ಸಾಲ ವಿಮುಕ್ತರಾಗಿ ಮಾಡುವ ಬಗ್ಗೆ ನಾನು ಹಿಂದೆಯೇ ಹೇಳಿದ್ದೇನೆ. ವ್ಯವಸಾಯವನ್ನು ಅಭಿವೃದ್ಧಿಪಡಿಸುವಂಥ ವಿಷಯವನ್ನು 20 ಅಂಶಗಳ ಕಾರ್ಯಕ್ರಮದಲ್ಲಿ ಹೇಳಿದ್ದಾರೆ. ಇದಕ್ಕೆ ನಾವು ವಿಶೇಷ ಗಮನವನ್ನು ಕೊಡಬೇಕು. ಆದರೆ ರಾಜ್ಯಪಾಲರ ಭಾಷಣದಲ್ಲಿ 25 ಅಂಶಗಳ ಕಾರ್ಯಕ್ರಮದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರ ವಿಚಾರದಲ್ಲಿ ನಾನು ಒಂದು ಮಾತನು ಹೇಳಬೇಕಾಗಿದೆ. 25 ಅಂಶಗಳಲ್ಲಿ ಒಂದು ಅಂಶ ನಮ್ಮ ರಾಜ್ಯದಲ್ಲಿ ವಿಶೇಷವಾಗಿ ನಡೆಯದಿದ್ದರೂ ಕೂಡ ಒಂದೆರಡು ಕಡೆಗಳಲ್ಲಿ ಆದಂಥ ಘಟನೆಯ ಬಗ್ಗೆ ಹೇಳಬೇಕಾಗಿದೆ. ಈ ಯೋಜನೆಯಿಂದ ಭೀತರಾಗಿದ್ದ ರೈತರುಗಳನ್ನು ನಮ್ಮ ಪಕ್ಷದ ಪ್ರತಿನಿಧಿಗಳು ಮಾನ್ಯ ಸಚಿವರಲ್ಲಿ ಮಧ್ಯ ರಾತ್ರಿಯಲ್ಲಿ ಕರೆದುಕೊಂಡು ಹೋದದ್ದು ನೆನಪಿರಬಹುದು, ಆದ್ದರಿಂದ ನಾನು ತಮ್ಮ ಕಳಕಳಿಯಿಂದ ಪ್ರಾರ್ಥನೆ

ಮಾಡಿಕೊಳ್ಳುವುದು ಏನೆಂದರೆ, ಇಂಥ ಅವಾಂತರಗಳು ಇನ್ನು ಮುಂದೆ ಆಗಬಾರದು, ಇದರ ಪರಿಣಾಮ ಏನಾಗಿದೆ ಎಂದು ತಮಗೂ ಗೊತ್ತಿದೆ. ಇದರ ಬಗ್ಗೆ ತಾವು ಒಂದು ಸರ್ಕ್ಯೂಲರ್ ಅನ್ನು ಕಳುಹಿಸಿ ಯಾರೂ ಇದರ ಬಗ್ಗೆ ಒತ್ತಡ ಮಾಡಬಾರದು ಎಂದು ತಿಳಿಸಬೇಕು. ತಾವು ಒತ್ತಾಯ ಮಾಡದಿದ್ದರೆ ಯಾವ ಕೆಲಸವಾಗುವುದಿಲ್ಲ ಎಂದು ಹೇಳುತ್ತಿದ್ದೀರಿ; ಈ ರೀತಿ ಮಾಡದೆ, ಇದರ ಬಗ್ಗೆ ಯಾವ ರೀತಿಯ ನಿರ್ಬಂಧವನ್ನು ಹಾಕದೆ, ಈ ಯೋಜನೆಯನ್ನು ಜಾರಿಗೆ ತರುವುದಕ್ಕೆ ಸ್ಪಷ್ಟವಾದಂಥ ನಿರ್ದೇಶನವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ಜನರಿಗೆ ಸರಿಯಾದ ತಿಳುವಳಿಕೆ ಕೊಟ್ಟು ಇದರ ಬಗ್ಗೆ ಕೆಲಸ ಮಾಡುತ್ತಿದ್ದೇವೆ. ತಾವು ಒಂದು ಸಾರಿ ಅದರ ಬಗ್ಗೆ ನಾವು ಯಾವ ರೀತಿ ಕೆಲಸ ಮಾಡಬೇಕು ಎಂದು ಮಾಡಿ ತೋರಿಸಿದರೆ ಅದನ್ನು ನಾವು ಅನುಸರಣೆ ಮಾಡುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಇನ್ನು ಮಾಡಿ ತೋರಿಸುತ್ತೇವೆ.

ಶ್ರೀ ಬಿ. ವಿ. ಕಕ್ಕಿಲಾಯ.—ತಾವುಗಳು ನಮಗೆ ಇರುವುದು ಜನತೆಯ ಬೆಂಬಲ ಎನ್ನುವುದನ್ನು ಮರೆಯಬೇಡಿ. ತಾವು ಅವರ ಮನ ನೋಯಿಸುವಂಥ ಕೆಲಸವನ್ನು ಮಾತ್ರ ಮಾಡಬೇಡಿ ಎನ್ನುವುದನ್ನು ನಾನು ಹೇಳಬೇಕಾಗಿದೆ.

SRI H. M. CHANNABASAPPA.—It is not the intention of the Government to do family planning forcibly but to do it by way of persuasion and making the people understand the need for it, the usefulness of it and all that kind of thing. If you call it 'forcible', I cannot help it.

ಶ್ರೀ ಬಿ. ವಿ. ಕಕ್ಕಿಲಾಯ.—ಇದರ ಬಗ್ಗೆ ನಾನು ಒಂದು ಉದಾಹರಣೆಯನ್ನು ಹೇಳುವುದಾದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ಅವರು ಒಬ್ಬ ಡಾಕ್ಟರನ್ನು ಕರೆದು I must have your resignation letter on my table if you are not able to complete this target, ಎಂದು ಈ ರೀತಿಯಲ್ಲಿ ಹೇಳಿ ಒತ್ತಾಯ ನಡೆಸಿರುವುದು ನಮ್ಮ ಗಮನಕ್ಕೆ ಬಂದಿದೆ. ಇಂಥಾದ್ದು ಆಗದಹಾಗೆ ಮಾಡಿ ಎಂದು ನಾನು ಹೇಳುತ್ತೇನೆ. ಇದರ ಬಗ್ಗೆ ತಾವು ನಿಗ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಸ್ಲಂ ಕ್ಲಿಯರೆನ್ಸ್ ವಿಚಾರದಲ್ಲಿ ಈಗಲೇ ನಾನು ಒಂದು ಎಚ್ಚರಿಕೆಯನ್ನು ಕೊಡಬೇಕಾಗಿದೆ. ನಗರಗಳನ್ನು ಬಹಳ ಸೌಂದರ್ಯವೃದ್ಧಿಯಾಗಿ ಮಾಡುವ ದೃಷ್ಟಿಯಿಂದ ಈ ಕೆಲಸವನ್ನು ಮಾಡಬೇಕಾಗಿದೆ. ಆದರೆ ಸ್ಲಂ ಕ್ಲಿಯರ್ ಮಾಡುವ ಸಂದರ್ಭದಲ್ಲಿ ಯಾರು ಬಡ ಜನ ಇದ್ದಾರೆ, ಅವರಿಗೆ ಬೇರೆ ಕಡೆ ನಿವೇಶನಗಳನ್ನು ಕೊಡದೆ ಈ ಕೆಲಸಕ್ಕೆ ತಾವು ಕೈ ಹಾಕಬಾರದು. ಇದರ ಬಗ್ಗೆ ನಾನು ಅನೇಕ ಉದಾಹರಣೆಗಳನ್ನು ನಾನು ಕೊಡಬಲ್ಲೆ. ಇಂಥ ಅನಾಹುತಗಳು ಇನ್ನು ಮುಂದೆ ಆಗದ ಹಾಗೆ ಹೆಚ್ಚಿನ ಗಮನ ಕೊಡಬೇಕು, ಮತ್ತು ಈ ಎಲ್ಲಾ ವಿಚಾರಗಳನ್ನು ತಾವು ಪರಿಶೀಲನೆ ಮಾಡಬೇಕು ಎಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ತಾವು ಕೇಳಿದ್ದರಲ್ಲಿ ಭೂ ಸುಧಾರಣ ಶಾಸನವನ್ನು ಜಾರಿಗೆ ತರುವುದಕ್ಕೆ ಬೇಕಾದಂಥ ಆರ್ಥಿಕ ಅವಕಾಶಕ್ಕೆ ಇದರಲ್ಲಿ ಹಣವನ್ನು ಒದಗಿಸಿಲ್ಲ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರಬೇಕಾಗಿದೆ. ಬಡ್ಜೆಟ್ ಅಧಿವೇಶನದಲ್ಲಿಯೂ ಕೂಡ ನಾನು ಹಿಂದೆ ಹೇಳಿದ್ದೆನು, ಆಗ ಇದಕ್ಕೆ ಬೇಕಾದಂಥ ಹಣವನ್ನು ಖರ್ಚು ಮಾಡಲಿಕ್ಕೆ ಹಣದ ಕೊರತೆ ಬೀಳುವುದಿಲ್ಲ ಎಂದು ಮಂತ್ರಿಗಳು ಹೇಳಿದ್ದರು. ನಾನು ಹೇಳುತ್ತೇನೆ, ಹಣದ ಕೊರತೆಯಿಂದಾಗಿ ಅನೇಕ ಟ್ರಿಬ್ಯೂನಲ್‌ಗಳ ಕಾರ್ಯ ಚಟುವಟಿಕೆಗಳು ಸ್ಥಗಿತವಾಗಿವೆ ಎಂದು ನಾನು ಖಂಡಿತವಾಗಿ ಹೇಳುತ್ತೇನೆ. ಇದಕ್ಕೆ ಬೇಕಾದಂಥ ಸರ್ವೆಯರ್‌ಗಳು ಇಲ್ಲ, ಸಿಬ್ಬಂದಿ ಇಲ್ಲ. ಈ ರೀತಿಯಾದರೆ ಟ್ರಿಬ್ಯೂನಲ್‌ಗಳು ಹೇಗೆ ಕೆಲಸ ಮಾಡಬೇಕು ? ನಮ್ಮ ಟ್ರಿಬ್ಯೂನಲ್‌ನಲ್ಲಿ ಒಬ್ಬ ಎಫ್.ಡಿ.ಸಿ. ಇರುವುದು. ಇದ್ದ ಕೆಲವರನ್ನು ಬೇರೆ ಕಡೆಗೆ ವರ್ಗ ಮಾಡಿದ್ದಾರೆ. ಸಿಬ್ಬಂದಿ ಇಲ್ಲದಿದ್ದರೆ ನಾವು

ಹೇಗೆ ಕೇಸ್‌ಗಳನ್ನು ತನಿಖೆ ಮಾಡಬೇಕು, ಯಾವ ರೀತಿಯ ಕೆಲಸವಾಗುತ್ತದೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು ? ಭೂಸುಧಾರಣಾ ಕಾಯಿದೆಯನ್ನು ಜಾರಿಗೆ ತರುವುದಕ್ಕೆ ಹಣದ ಕೊರತೆ ಅಡ್ಡಿ ಬಾರದ ರೀತಿಯಲ್ಲಿ ವಿಶೇಷವಾದಂಥ ಗಮನಕೊಡಬೇಕು ಎಂದು ನಾನು ತಮ್ಮಲ್ಲಿ ಕಳಕಳಿಯ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಇಷ್ಟು ಹೇಳುವುದಕ್ಕೆ ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಿಳಿಗಿರಿ) — ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ಮಂಡಿಸಿರುವಂಥ ಹೆಚ್ಚುವರಿ ಬೇಡಿಕೆಗಳನ್ನು ವಿರೋಧಿಸಿ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಹೆಚ್ಚುವರಿ ಬೇಡಿಕೆಗಳನ್ನು ನೋಡಿದರೆ, ನಮ್ಮ ಮನಸ್ಸಿಗೆ ಬಹಳ ಬೇಜಾರು ಆಗುತ್ತದೆ. ಡಿಮ್ಯಾಂಡ್ ನಂ 27ರಲ್ಲಿ ಕುಡಿಯುವ ನೀರಿನ ಬಾವಿಗಳಿಗೋಸ್ಕರ ಬೋರ್‌ವೆಲ್‌ಗಳನ್ನು ಹಾಕುವುದಕ್ಕೋಸ್ಕರ ಸುಮಾರು 3 ಕೋಟಿ ಚಿಲ್ಲರೆ ರೂಪಾಯಿಗಳನ್ನು ಕೇಳಿದ್ದಾರೆ. ನಿಜವಾಗಿಯೂ ನೀವು ಅಧಿಕಾರಕ್ಕೆ ಬಂದು ಐದು ವರ್ಷಗಳಾದರೂ ಮತ್ತು ನಿಮ್ಮ ಅಧಿಕಾರ ಅಸ್ತಮಯವಾಗುವ ಕಾಲ ಬಂದಿದ್ದರೂ ಕೂಡ ಈ ಒಂದು ಸಣ್ಣ ಸಮಸ್ಯೆಯನ್ನು ನೀವು ಬಗೆಹರಿಸಲಿಲ್ಲ. ಇದರೂ ನೀವು ಅಧಿಕಾರದಲ್ಲಿ ಹೇಗೆ ಮುಂದುವರಿಯುತ್ತಿದ್ದೀರೋ ಎಂದು ನನಗೆ ಆಶ್ಚರ್ಯವಾಗುತ್ತದೆ. ಈಗ ಚಂದ್ರಲೋಕಕ್ಕೆ ಹೋಗುವ ಸಮಯ ಬಂದಿದ್ದರೂ ಸಹ ನಮ್ಮ ದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಇನ್ನು ಬಗೆಹರಿದಿಲ್ಲ ಎಂದು ಹೇಳಿದರೆ ಶೋಚನೀಯ ಎಂದು ವಿಷಾದದಿಂದ ಹೇಳಬೇಕಾಗಿದೆ.

ಇನ್ನೂ ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ಹೋಗಿ ನೋಡಿದರೆ ನಿಜವಾಗಿಯೂ ಕುಡಿಯುವ ನೀರೇ ಇಲ್ಲ ಬೋರ್‌ವೆಲ್ಸ್ ಹಾಕಿದ್ದೀರಿ, ನೀರೇ ಬರುತ್ತಾ ಇಲ್ಲ ಪಂಪ್‌ಸೆಟ್ಸ್‌ಗಳು ಕಟ್ಟು ಎಷ್ಟೋ ಕಡೆ 3 ತಿಂಗಳು 6 ತಿಂಗಳಾಗಿದೆ. ಅದರಲ್ಲಿ ಎಷ್ಟೋ ಕೆಟ್ಟುಹೋಗಿದೆ, ಹೇಳುವವರೂ ಇಲ್ಲ, ಕೇಳುವವರೂ ಇಲ್ಲ. ಈ ಸಮಸ್ಯೆಯನ್ನು ಯಾವ ರೀತಿ ಬಗೆಹರಿಸುತ್ತಿರೋ ದೇವರಿಗೆ ಗೊತ್ತು.

3–30 P.M.

ಇನ್ನು ಇದರಲ್ಲಿ ಹೆಚ್ಚುವರಿ ಬೇಡಿಕೆಗಳನ್ನು ನೋಡಿದರೆ ದೇಶದ ಮುಖ್ಯ ಸಮಸ್ಯೆಗಳ ಕಡೆಯೇ ಗಮನ ಕೊಟ್ಟಿಲ್ಲ ಅನ್ನುವುದನ್ನು ನಾನು ವಿಷಾದದಿಂದ ಹೇಳಬೇಕಾಗಿದೆ. ಈಗ ಪ್ರತಿಯೊಂದು ಸರ್ಕಾರದ ಡಿಪಾರ್ಟ್‌ಮೆಂಟ್‌ಗಳಲ್ಲಿ ಹೋಗಿ ನೋಡಿದರೆ ಲಂಚರುಷುವತ್ತುಗಳು ಜಾಸ್ತಿಯಾಗಿದೆ ಅದನ್ನು ಬಗೆಹರಿಸುವುದಕ್ಕೆ ನೀವು ಏನೂ ಮಾಡುತ್ತಾ ಇಲ್ಲ.

ಇನ್ನು ನಿರುದ್ಯೋಗದ ಸಮಸ್ಯೆ ಬಗ್ಗೆ ಹೇಳುವುದಾದರೆ ಈ ಒಂದು ಬೃಹದಾಕಾರವಾದ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನೀವು ಯಾವ ಕಾರ್ಯಕ್ರಮಗಳನ್ನೂ ಕೂಡ ಹಾಕಿಕೊಂಡಿಲ್ಲ ಅನ್ನುವುದು ಈ ಡಿಮ್ಯಾಂಡ್‌ನಲ್ಲಿ ನೋಡಿದರೆ ಗೊತ್ತಾಗುತ್ತದೆ.

ಇನ್ನು ಕುಟುಂಬ ಯೋಜನೆ ಬಗ್ಗೆ ಹೇಳುವುದಾದರೆ ಇದು ನಮ್ಮ ದೇಶದ ಒಂದು ದೊಡ್ಡ ಸಮಸ್ಯೆಯಾಗಿದೆ. ಈ ಸಮಸ್ಯೆ ಚುನಾವಣೆಯಲ್ಲಿ ಬೃಹದಾಕಾರವಾದ ಸಮಸ್ಯೆಯಾಗಿ ಬೆಳೆಯಿತು. ಈ ಬಗ್ಗೆ ಈ ಡಿಮ್ಯಾಂಡ್‌ನಲ್ಲಿ ಯಾವರೀತಿಯಾದ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ ಅನ್ನುವುದನ್ನು ನಾನು ವಿಷಾದದಿಂದ ಹೇಳಬೇಕಾಗಿದೆ.

ಇನ್ನು ಭೂಸುಧಾರಣೆ ಬಗ್ಗೆ ಹೇಳುವುದಾದರೆ ಜಮೀನನ್ನು ಕಳೆದುಕೊಂಡಿರತಕ್ಕಂಥ ಅನೇಕ ಭೂಮಾಲೀಕರಿಗೆ ಇನ್ನೂ ಕೂಡ ಇವರಿಗೆ ಯಾವ ತರಹವಾದ ಕಾಂಪನ್ಸೇಷನ್ ಸಹ ಕೊಡುವ ಕಾರ್ಯಕ್ರಮವನ್ನು ಇದರಲ್ಲಿ ಹಾಕಿಕೊಂಡಿಲ್ಲ. ಈವೊತ್ತಿನ ದಿವಸ ಅನೇಕ ಬಡ ಸಂಸಾರಸ್ಥರು ಇದರ ಬಗ್ಗೆ ಹೇಳಿಕೊಳ್ಳುವ ಸ್ಥಿತಿಯಲ್ಲಿ ಇಲ್ಲದವರಾಗಿದ್ದಾರೆ.

ಇನ್ನು ಡೆಟ್ ರಿಲೀಫ್ ಬಗ್ಗೆ ಹೇಳುವುದಾದರೆ ಅನೇಕ ಜನರಿಗೆ ಹಳ್ಳಿಗಳಲ್ಲಿ ಸಾಲ ಸಿಕ್ಕದೆ ಬಹಳ ತೊಂದರೆ ಪಡುತ್ತಿದ್ದಾರೆ. ಈ ಬಗ್ಗೆ ಬಗೆಹರಿಸುವಂಥಾ, ಕಾರ್ಯಕ್ರಮ ಈ ಹೆಚ್ಚುವರಿ ಬೇಡಿಕೆಗಳಲ್ಲಿ ಹಾಕಿಕೊಂಡಿರುವಂತೆ ಕಾಣುತ್ತಾ ಇಲ್ಲ ನೀವು ಈ ಹೆಚ್ಚುವರಿ ಬೇಡಿಕೆಗಳಲ್ಲಿ ಮುಖ್ಯವಾದ ಸಮಸ್ಯೆಗಳ ಬಗ್ಗೆ ಗಮನ ಕೊಡುತ್ತಾ ಇಲ್ಲ, ಲಕ್ಷುರಿ ಬಗ್ಗೆ ಹೆಚ್ಚುವರಿ ಬೇಡಿಕೆಯನ್ನು ನಮ್ಮ ಮುಂದೆ ಇಟ್ಟಿದ್ದೀರಿ. ಆದ್ದರಿಂದ ನಾನು ಇದನ್ನು ವಿರೋಧಿಸಬೇಕಾಗಿದೆ.

ಇನ್ನು ಡಿಮ್ಯಾಂಡ್ ನಂಬರ್ 2೩ರ ಬಗ್ಗೆ ಹೌಸಿಂಗ್ ಬೋರ್ಡ್ ಬಗ್ಗೆ ಹೇಳುವುದಾದರೆ ಎಷ್ಟೋ ಕಷ್ಟ ಇದರ ಕೊರತೆ ಬಹಳ ಇದೆ ಎಂದು ಕೇಳಿದ್ದೇನೆ. ಈ ಹೌಸಿಂಗ್ ಪ್ರಾಬ್ಲಮ್ ಜನಗಳಿಗೆ ಮನೆ ಕೊಡತಕ್ಕಂಥಾ ಕಾರ್ಯಕ್ರಮ ಯಾವ ಕಾಲಕ್ಕೆ ಮುಗಿಯುತ್ತೋ ನನಗೆ ಗೊತ್ತಿಲ್ಲ. ನಗರಗಳಲ್ಲಿ ಪಟ್ಟಣಗಳಲ್ಲಿ ಅನೇಕ ಜನರನ್ನು ನಾವು ನೋಡುತ್ತಾ ಇದ್ದೇವೆ ಎಷ್ಟೋ ಜನ ಶೈಪ್‌ಗಳಲ್ಲಿ ಅಂಗಡಿ ಬಾಗಿಲಿನಲ್ಲಿ ವಾಸ ಮಾಡುತ್ತಾ ಇರುವುದನ್ನು ನಾವು ನೋಡುತ್ತಾ ಇದ್ದೇವೆ. ಇದಕ್ಕೆ ಇಟ್ಟಿರತಕ್ಕಂಥಾ ಹಣ ನೋಡಿದರೆ ಬಹಳ ಅಲ್ಪ ಹಣ ಈ ಒಂದು ಬೃಹದಾಕಾರವಾಗಿರತಕ್ಕಂಥಾ ಸಮಸ್ಯೆಯನ್ನು ಯಾವ ರೀತಿ ಬಗೆಹರಿಸುತ್ತಿರೋ ನನಗೆ ಗೊತ್ತಿಲ್ಲ.

ಇನ್ನು ಡಿಮ್ಯಾಂಡ್ ನಂಬರ್ 35ರ ಬಗ್ಗೆ. ಓಲ್ಡ್ ಏಜ್ ಪೆನ್‌ಷನ್ ಬಗ್ಗೆ ಹೇಳುವುದಾದರೆ ಇದಕ್ಕೆ ಕೆಲವು ಕೋಟಿ ರೂಪಾಯಿಗಳನ್ನು ಕೇಳುತ್ತಾ ಇದ್ದೀರಿ. ನಿಜವಾಗಿಯೂ ಈ ಯೋಚನೆ ಬಹಳ ಒಳ್ಳೆಯದು ಆದರೆ ಇದರಲ್ಲಿ ಎಷ್ಟೋ ಜನಕ್ಕೆ ಸಿಕ್ಕುತ್ತಾ ಇಲ್ಲ. ಈ ಹಣವನ್ನು ತೆಗೆದುಕೊಳ್ಳಬೇಕಾದರೆ ಅವನು ಬಹಳ ಹಣ ಖರ್ಚು ಮಾಡಬೇಕಾಗುತ್ತದೆ. ರೆವಿನ್ಯೂ ಇನ್‌ಸ್ಪೆಕ್ಟರಿಗೆ ಕೊಡಬೇಕಾಗುತ್ತದೆ ಅಲ್ಲದೆ ಇದಕ್ಕೆ ಬೇಕಾದ ಒಂದು ಸರ್ಟಿಫಿಕೇಟನ್ನು ಡಾಕ್ಟರ್‌ರವರಿಂದ ತೆಗೆದುಕೊಳ್ಳಬೇಕಾದರೂ ಕೂಡ ಬಹಳ ಹಣ ಖರ್ಚು ಮಾಡಬೇಕಾಗಿದೆ. ಇದಕ್ಕೆ ಕೇಳಿರತಕ್ಕಂಥಾ ಹಣ ಬಹಳ ಅಲ್ಪ. ಅವರು ಸತ್ತಮೇಲೆ ಸ್ಯಾಂಕ್ಷನ್ ಮಾಡೋಣ ಎಂದು ಸ್ವಲ್ಪ ಹಣ ಕೇಳಿದ್ದೀರಾ? ಈ ಬಗ್ಗೆ ನಾನು ಕೇಳುವುದು ಇಷ್ಟೆ ಈ ಓಲ್ಡ್ ಏಜ್ ಪೆನ್‌ಷನ್‌ಗೆ ಎಷ್ಟು ಅಪ್ಲಿಕೇಷನ್ಸ್ ಬಂದಿದೆ? ಅದರ ವಿವರ ತರಿಸಿಕೊಂಡು ಇವರಲ್ಲಿ ಕೊಡಬೇಕಾದ್ದು ಎಷ್ಟು ಜನರಿಗೆ ಬಾಕಿ ಇದೆ. ಆ ವಿವರಗಳನ್ನೆಲ್ಲಾ ಕೊಟ್ಟರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ.

ಇನ್ನು ಡಿಮ್ಯಾಂಡ್ 37ರ ಬಗ್ಗೆ ರಿಲಿಜಿಯಸ್ ಅಂಡ್ ಛಾರಿಟಬಲ್ ಇನ್ಸ್ಟಿಟ್ಯೂಷನ್ಸ್ ಬಗ್ಗೆ ಹೇಳುವುದಾದರೆ ಇದಕ್ಕೆ ಸ್ವಲ್ಪ ಹಣ ಮಾತ್ರ ಕೇಳಿದ್ದೀರಿ. ಇದು ಸಾಲದು ಅನೇಕ ಮುಜರಾಯಿ ದೇವಸ್ಥಾನಗಳು ಇಂಪ್ರೂ ಆಗಬೇಕಾಗಿದೆ ಇದಕ್ಕೆ ಹೆಚ್ಚು ಹಣ ಕೊಟ್ಟಿದ್ದರೆ ಬಹಳ ಒಳ್ಳೆಯದು ಎಂದು ನನ್ನ ಅಭಿಪ್ರಾಯ.

ಇನ್ನು ಡಿಮ್ಯಾಂಡ್ 3೮ರ ಬಗ್ಗೆ ಹೇಳುವುದಾದರೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಷೇರ್‌ಗಳಿಗೆ ಕೆಲವು ಕೋಟಿ ರೂಪಾಯಿಗಳನ್ನು ಕೇಳುತ್ತಾ ಇದ್ದೀರಿ ಈ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಸರಿಯಾಗಿ ಹಣ ಜನಗಳಿಗೆ ಸಿಕ್ಕುತ್ತಾ ಇದ್ದರೆ ಅದರಿಂದ ಅನುಕೂಲವಾಗುತ್ತಿತ್ತು. ರಾಜ್ಯದಲ್ಲಿ ಫ್ಯಾಮಿನ್ ಕಂಡೀಷನ್ಸ್ ಇರುವಾಗ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ತೆಗೆದುಕೊಳ್ಳಬಹುದು ಎಂದು ಹೇಳಿದಿರಿ ಆದರೆ ಅದರಿಂದ ಜನಗಳಿಗೆ ಹಣ ಸಿಕ್ಕುತ್ತಾ ಇರಲಿಲ್ಲ ಕಾರಣ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಬರಬೇಕಾದಂಥಾ ರಿಟರ್ನ್ ಬರದೆ ಇದ್ದುದರಿಂದ ಜನಗಳಿಗೆ ದುಡ್ಡು ಸಿಕ್ಕುತ್ತಾ ಇರಲಿಲ್ಲ, ಅವರಿಗೆ ದುಡ್ಡು ಸಿಕ್ಕಲು ಬಹಳ ಕಷ್ಟವಾಗುತ್ತಿತ್ತು.

ಇನ್ನು ಡಿಮ್ಯಾಂಡ್‌ನಂಬರ್ 41ರ ಬಗ್ಗೆ ಮೈನರ್ ಇರಿಗೇಷನ್ ಬಗ್ಗೆ ಹೇಳುವುದಾದರೆ ಇದಕ್ಕೆ ಸ್ವಲ್ಪ ಹಣ ಕೇಳಿದ್ದೀರಿ ಇದಕ್ಕೆ ಹೆಚ್ಚು ಹಣ ಒದಗಿಸಿದ್ದರೆ ಚೆನ್ನಾಗಿತ್ತು ಈವೊತ್ತಿನ ದಿವಸ ಮೈನರ್ ಇರ್ರಿಗೇಷನ್ ಬಹಳ ಮುಖ್ಯವಾದದ್ದು ಈವೊತ್ತಿನ ದಿವಸ ದೇಶದಲ್ಲಿ ಆಹಾರದ ಸಮಸ್ಯೆ ಬಹಳ ಬೃಹದಾಕಾರವಾಗಿ ಬೆಳೆದಿದೆ ಇದನ್ನು ಬಗೆಹರಿಸಬೇಕಾದರೆ ಮೈನರ್ ಇರ್ರಿಗೇಷನ್ ಅನ್ನು ಇಂಪ್ರೂ ಮಾಡಬೇಕು ಅಂಥಾದ್ದರಲ್ಲಿ ಕೆಲಸಕ್ಕೆ ಬಾರದೇ ಇರುವ ಡಿಮ್ಯಾಂಡ್‌ಗಳಿಗೆ ಜಾಸ್ತಿ ಹಣ ಕೊಟ್ಟು ಮುಖ್ಯವಾದ ಡಿಮ್ಯಾಂಡ್‌ಗಳಿಗೆ ಕಡಿಮೆ ಹಣ ಒದಗಿಸಿರುವುದು ಅತ್ಯಂತ ವಿಷಾದ ಎಂದು ಹೇಳಬೇಕಾಗಿದೆ. ನಿಮಗೆ ಉದಾಹರಣೆ ಹೇಳುವುದಾದರೆ ಸಾಯಿಲ್ ಕನ್‌ಸರ್ವೇಷನ್‌ಗೆ ಕಡಿಮೆ ಹಣ ಒದಗಿಸಬಹುದಾಗಿತ್ತು. ಹಳ್ಳಿಗಳಲ್ಲಿ ಹೋಗಿ ಕೆಲವು ಜಮೀನುಗಳನ್ನು ನೋಡಿದರೆ ಆ ರೈತರು 4 ವರ್ಷದ ಹಿಂದೆ ಏನು ಒಂದು ಬಂಡೆ ಕೆಲಸಗಳನ್ನು ಮಾಡಿದ್ದರೋ ಅದನ್ನು ಹೋಗಿ ನೋಡಿದರೆ ಆ ಜಮೀನಿನಲ್ಲಿ ಈವೊತ್ತಿನ ದಿವಸ ಯಾವ ಬಂಡೆ ಕೆಲಸಗಳೂ ಇಲ್ಲ. ಅದು ಹೇಗೆ ಇತ್ತೋ ಹಾಗೆಯೇ ಇದೆ ಹೀಗಾಗಿ ಸಾಯಿಲ್ ಕನ್‌ಸರ್ವೇಷನ್‌ಗೆ ಕೊಟ್ಟಿರತಕ್ಕಂಥಾ ಹಣ ಬಹಳ ವೇಸ್ಟ್ ಆಗಿದೆ.

ಇನ್ನು ನಿರುದ್ಯೋಗದ ಸಮಸ್ಯೆ ಬಗ್ಗೆ ಹೇಳುವುದಾದರೆ ಕೂಲಿಗಾರರಿಗೆ ತಕ್ಷಣ ಕೆಲಸ ಒದಗಿಸಿಕೊಡಬೇಕೇ ವಿನಾ ಇಲ್ಲದೇಹೋದರೆ ನಿಜವಾಗಿಯೂ ರೈತರಿಗೆ ಯಾವ ವಿಧವಾದ ಅನುಕೂಲವು ಆಗುವುದಿಲ್ಲ ಎಂದು ಹೇಳುತ್ತೇನೆ.

ಇನ್ನು 44ರ ಡಿಮ್ಯಾಂಡ್ ಬಗ್ಗೆ ಹೇಳುವುದಾದರೆ ಗೋಡೌನ್ ಕಟ್ಟುವುದಕ್ಕೆ ಹಣ ಕೇಳಿದ್ದೀರಿ ದವಸಧಾನ್ಯಗಳನ್ನು ಸ್ಟಾಕ್ ಇಡುವುದಕ್ಕೆ ಒಂದು ದೊಡ್ಡ ಗೋಡೌನ್ ಕಟ್ಟಿದರೆ ಅಲ್ಲಿ ಎಲ್ಲವನ್ನು ಸ್ಟಾಕ್ ಮಾಡಿ ಹಂಚುವುದಕ್ಕೆ ಅನುಕೂಲವಾಗುತ್ತದೆ. ಅದೇ ರೀತಿ ತಾಲ್ಲೂಕುಗಳಲ್ಲಿ ಪಟ್ಟಣಗಳಲ್ಲೂ ಕೂಡ ಒಂದು ದೊಡ್ಡ ಗೋಡೌನ್ ಕಟ್ಟಿ ದವಸಧಾನ್ಯಗಳನ್ನು ಸ್ಟಾಕ್ ಮಾಡಿ ಅದರ ಮುಖಾಂತರ ದವಸಧಾನ್ಯಗಳನ್ನು ಹಂಚಿದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ,

ಇನ್ನು ಡಿಮ್ಯಾಂಡ್ ನಂಬರ್ 49ರ ಬಗ್ಗೆ ಹೇಳುವುದಾದರೆ ಗೋಬಾರ್ ಗ್ಯಾಸ್ ಪ್ಲಾಂಟ್ ಗೋಸ್ಕರ ಖಾದಿ ವಿಲೇಜ್ ಇಂಡಸ್ಟ್ರೀಸ್ ಬೋರ್ಡ್‌ಗೆ ಏನು ಹಣ ಕೇಳಿದ್ದೀರಿ ಅದು ಬಹಳ ಒಳ್ಳೆಯದು ಎಂದು ನನ್ನ ಅಭಿಪ್ರಾಯ.

ಇನ್ನು ಸೌದೆ ಪ್ರಾಬ್ಲೆಮ್ಸ್ ಬಗ್ಗೆ ಹೇಳುವುದಾದರೆ ಹಳ್ಳಿಗಳ ಕಡೆ ಇದು ಬಹಳ ದೊಡ್ಡ ಸಮಸ್ಯೆಯಾಗಿ ಬಿಟ್ಟಿದೆ. ಈ ಗೋಬಾರ್ ಗ್ಯಾಸ್ ಪ್ಲಾಂಟ್ ಬಗ್ಗೆ ಹಳ್ಳಿಗಳ ಕಡೆ ಪ್ರಚಾರ ಆಷ್ಟಾಗಿ ಸಾಲದು, ಇದಕ್ಕೆ ಹೆಚ್ಚು ಪ್ರಚಾರವಾಗಬೇಕು ಎಂದು ನನ್ನ ಅಭಿಪ್ರಾಯ

ಇನ್ನು ಡಿಮ್ಯಾಂಡ್ ನಂ 51ರ ಬಗ್ಗೆ ರೇಷ್ಮೆ ಕೈಗಾರಿಕೆ ಬಗ್ಗೆ ಹೇಳುವುದಾದರೆ ಕೆಲವು ಡಿಸ್ಟ್ರಿಕ್ಟ್‌ಗಳಲ್ಲಿ ಈ ರೇಷ್ಮೆ ಕೈಗಾರಿಕೆ ಇಲ್ಲದೇ ಹೋದರೆ ಬಹಳ ಕಷ್ಟ. ಎಷ್ಟೋ ಜನ ಈ ರೇಷ್ಮೆ ಕೈಗಾರಿಕೆಯಿಂದ ಜೀವನ ನಡೆಸುತ್ತಿದ್ದಾರೆ ಆದುದರಿಂದ ಈ ಕೈಗಾರಿಕೆಗೆ ಇನ್ನೂ ಹೆಚ್ಚುವರಿ ಹಣ ಕೊಟ್ಟು ಈ ರೇಷ್ಮೆ ಕೈಗಾರಿಕೆಯನ್ನು ಹೆಚ್ಚು ಪ್ರೋತ್ಸಾಹ ಮಾಡಿದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ ಎಷ್ಟೋ ಜನ ರೋಗರಹಿತವಾದ ಮೊಟ್ಟೆ ಮಾರುವುದಕ್ಕೆ ಮತ್ತು ಬೋರ್‌ವೆಲ್ಸ್ ಹಾಕಿಸುವುದಕ್ಕೆ ಹೆಚ್ಚು ಹಣ ಕೇಳುತ್ತಾ ಇದ್ದಾರೆ ಆದುದರಿಂದ ಇದನ್ನು ಇಂಪ್ರೂ ಮಾಡಲು ಸಾಕಷ್ಟು ಹಣವನ್ನು ಈ ವ್ಯವಸಾಯಕ್ಕೆ ಒದಗಿಸಿದರೆ ರೈತರಿಗೆ ಹೆಚ್ಚು ಅನುಕೂಲ ಮಾಡಿಕೊಟ್ಟ ಹಾಗೆ ಆಗುತ್ತದೆ ಹಾಗೆ ಮಾಡಿದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ.

ಇನ್ನು ರೋಡ್ಸ್ ಅಂಡ್ ಬ್ರಿಡ್ಜಸ್ ಬಗ್ಗೆ ಹೇಳುವುದಾದರೆ ಇದಕ್ಕೆ 1 ಕೋಟಿ ಚಿಲ್ಲರೆ ಕೇಳಿದ್ದೀರಿ ಅನೇಕ ಹಳ್ಳಿಗಳಲ್ಲಿ ರಸ್ತೆಗಳೇ ಇಲ್ಲ ಆ ಹಳ್ಳಿಗಳಲ್ಲಿ ಗಾಡಿಗಳು ಹೋಗುವುದಕ್ಕೇ ಕಷ್ಟವಾಗಿದೆ ಈ ರೂರಲ್ ಕಮ್ಯೂನಿಕೇಷನ್ ರೋಡ್ಸ್‌ಗೆ ಇನ್ನು ಹೆಚ್ಚಾಗಿ ಹಣವನ್ನು ಒದಗಿಸಬೇಕು ಎಂದು ಹೇಳುತ್ತೇನೆ ಈಗ ಈ ರೂರಲ್ ಕಮ್ಯೂನಿಕೇಷನ್ ರೋಡ್ಸ್‌ಗೆ 16 ಲಕ್ಷ ರೂಪಾಯಿ ಹೆಚ್ಚುವರಿ ಹಣ ಏನು ಕೇಳುತ್ತಿದ್ದೀರೋ ಅದಕ್ಕೆ ನನ್ನ ಒಪ್ಪಿಗೆ ಇದ್ದರೂ ಕೂಡ ಇದನ್ನು ಹಂಚುವಾಗ ಈ ಡಿಮ್ಯಾಂಡ್‌ನಂತೆ ಸರಿಯಾಗಿ ಹಂಚಿಕೆಯಾಗುತ್ತಾ ಇಲ್ಲ ಅದಕ್ಕೋಸ್ಕರವಾಗಿ ಈ ಬೇಡಿಕೆಗಳನ್ನು ವಿರೋಧಿಸಿ ನನಗೆ ಮಾತನಾಡಲು ಅಧ್ಯಕ್ಷರು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI B. B. SAYANAK (Belgaum) —Mr. Chairman; I rise to oppose this Supplementary Estimates. The Hon'ble Finance Minister has placed the budget which is deficit to the tune of Rs 32 crores. Again he has asked for Rs. 31 crores by way of this supplementary estimates I do not know why he is asking like this every year.

A sum of Rs. 50,000 has been provided for office expenses under the head ' Council of Ministers'' whereas the telephone charges comes to the tune of Rs. 5 lakhs. In this connection, I want to know, who are those that are using these phones? Are they your office people or private citizens? The Hon'ble Minister must bear in mind that public money must be utilised properly They should use locks to telephones and not allow others to use the phones. Persons who come from their constituencies must not be allowed to use the Government phones.

Regarding the T. A. of officers of the Public Service Commission, the officers have spent Rs. 6,000 where as the Secretariat has spent Rs. 15,000. I do not know how many persons they are taking along with them on tour. The Officers of the PSC must taken into account and see that they do not take more staff with them.

Regarding administration of justice, according to me there are two vacancies of the High Court Judges in Karnataka High Court. These posts have remained unfilled for the last three years. At present I am told that a large number of writ petitions are pending in the High Court. I cannot understand why the Government of Karnataka is not taking the initiative to fill up these two posts. I request the Hon'ble. Finance Minister to take up this issue with the Central Government and see that two more judges are appointed to the High Court.

Regarding administration of justice in the Border areas, there were boards for Marathi and English. Now it has been changed only in Kannada and English. I had requested the Chief Secretary and the Law Secretary to change these boards in three languages viz., Marathi, Kannada and English; but the boards are not changed yet. Some of the Judges are delivering judgements in Kannada. I had requested that in the border areas the judgements should be delivered in English. When we had met the Chief Justice he was good enough to direct the concerned judges to deliver the Judgements in English. The deposition of the Marathi people were recorded in Kannada. We had also requested not to do so. When the border dispute is pending, they must record the deposition of the Marathi people in Marathi and the Kannada peoples deposition must be recorded in Kannada. But it is not so up-till-now.

Regarding the Entertainment tax, in Belgaum City, everyday the Marati dramas are enacted The Police Officers and the Revenue Officers demand 50 tickets from the proprietors of the dramas every day. This is a sort of harassment which should be avoided. One can understand if the officers ask for one or two passes. We had requested the Deputy Commissioner, the Divisional Commissioner, the DIG and the SP to stop this harassment but so far no action has been taken to stop this sort of thing.

As regards Demand No. 12, the Minister has stated that the increase is due to purchase of vehicles for the Revenue Officers. The Central Ministers are visiting to Belgaum. I do not object to their using the Government vehicles but their sons and daughters are using the government vehicles. Such things are going on but nobody takes care of these things. They should take action to curb such expenditure.

Regarding Demand No. 17, our Finance Minister has asked for Rs. 11.26 lakhs. Whenever we approach the Police Officers and the Primary Schools, we are told to bring papers and the stationery articles. When you have asked for so much money you must take action to supply the stationery to the schools and the Police.

According to the 20 point programme, the Government wanted to give free legal aid to the poor. Consequently they have constituted several committees. I would like to know from the Government where these committees are functioning and whether they are rendering legal aid to the needy people. In Belgaum City, we have a committee but where that committee is functioning I do not know.

Regarding the payment of pension, I have noticed several old persons are not getting the oldage pension and some of the government officials who have retired are not getting their pension for the last two years I request the Finance Minister that whenever an official retires, he must get the pension immediately.

As regards Public Health Government is collecting 3 per cent cess for the beggars. I have noticed that lepers are troubling the public and they are even touching the public. When they are collecting the amount by way of cess from the public, they should take action to send the lepers to the leprasium.

With regard to Demand No. 38, some amount has been earmarked for the Co-operative Societies Some of the Societies have gone to the High Court and have obtained stay orders. There is thus deadlock. The people are not getting loan from the Societies. I request the Government to do some justice to the people who are not getting loan from the societies which have obtained stay orders from the High Court.

When emergency was proclaimed on 25th June 1975, the then Central Government and the State Governments had assured the public that they will supply all the essential commodities to the public at reasonable prices. This year the prices of essential commodities are rising. Take for example the edible oil. The prices have been very high. To quote another example, take tea. Last year the price of tea was Rs. 15 to Rs. 18 per K. G. but this year the price has gone upto Rs. 28 to Rs. 30 per K G. The price of onions was 40 paise per K.G, last year, whereas today it is Rs. 1 40 per K.G. How can the poor people survive with these higher prices? Is this justice that the country is giving to the poor people?

The Government of Karnataka has totally neglected the improvement of border roads. Even in Belgaum city the roads are not good. At the time of the Lok Sabha elections I had an opportunity to visit

some of the villages. As the road leading to Kadoli from Poona-Bangalore road was not good. The bus service had to be diverted on a longer route and the passengers had to pay Rs. 1-50 whereas on the shorter routes the bus fare was only 0-50 Paise. I would like to mention that the following roads in Belgaum area are in a very bad condition:—

1. Belgaum-Kadoli.
2. Poona-Bangalore Road to Kadoli.
3. Tilakwadi-Mandoli-Hangarage.
4. Belgundi-Belavathi-Badas.
5. Mache-Waghavade.
6. Maeche-Santibastawad
7. Kinaye-Karle.
8. Desur-Rajhansagad-Nandihalli.
9. Belgaum-Kudremani.
10. Uchagaon-Bekinkere-Kownd.
11. Vadgaon-Yallur-Sulage.
12. Uchagaon-Kallehol Road.
13. Belgaum-Benakanhalli-Bokanoor.

When the Government is spending huge amounts for improvment of roads in other areas, I feel that justice is not being done in the border areas.

Coming to electricity, in Belgaum there is interruption of electricity for an hour or two every day. If the nation has to prosper the Industries will have to prosper for which the Government should help the industrialists in supplying electricity without interruption.

With these words, I thank the Chair.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಸಭಾಧ್ಯಕ್ಷರೇ ನಮ್ಮ ಮಾನ್ಯ ಅರ್ಥ ಸಚಿವರು ೧೯೭೭-೭೮ನೇ ಸಾಲಿನ ಹೆಚ್ಚುವರಿ ಬೇಡಿಕೆಯನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ ಅದನ್ನು ವಿರೋಧಿಸಿ ನಾನು ನಾಲ್ಕು ಮಾತುಗಳನ್ನು ಆಡುವುದಕ್ಕೆ ಅಪೇಕ್ಷೆ ಪಡುತ್ತೇನೆ. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಇದುವರೆಗೂ ಕೂಡ ಯಾವುದೇ ಒಂದು ಮೂಲಭೂತವಾದ ಸಮಸ್ಯೆಯನ್ನು ಜನಸಾಮಾನ್ಯರ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಬಡವರ ಹೆಸರನ್ನು ಹೇಳಿ ಅವರ ಜೀವನದ ಮೂಲಭೂತವಾದ ಸಮಸ್ಯೆಯನ್ನು ಬಡತನದ ಸಮಸ್ಯೆಯನ್ನು ಹೋಗಲಾಡಿಸುವುದರ ಬದಲು ಕೇವಲ ಅಲ್ಪಸ್ವಲ್ಪ ಸಾಲಸೌಲಭ್ಯಗಳನ್ನು ಕೊಡಿಸುವುದರ ಮೂಲಕ ತೇಪೆ ಹಾಕುವ ಕೆಲಸ ಮಾಡಿದ್ದಾರೆ ಆದ್ದರಿಂದ ನಿಜಕ್ಕೂ ಬಡತನ ನಿರ್ಮೂಲನ ಯಾವ ದೃಷ್ಟಿಯಿಂದಲೂ ಆಗಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಳ್ಳಬಹುದು. ನಮ್ಮ ಹಿರಿಯ ಸದಸ್ಯರಾದ ಶ್ರೀಮಾನ್ ಕಕ್ಕಿಲಾಯರು ಅವರು ಮಾತನಾಡುವಾಗ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ರಾಜ್ಯದ ಹಾಗೂ ಇತರ ರಾಜ್ಯಗಳ ಅನೇಕ ಭೂಸುಧಾರಣಾ ಶಾಸನಗಳಲ್ಲಿ ೯ನೇ ಪರಿಚ್ಛೇದವನ್ನು ಏನು ಸೇರಿಸಲಾಗಿದೆ ಅದನ್ನು ತೆಗೆಯತಕ್ಕ

ರೀತಿಯಲ್ಲಿ ಇಂದಿನ ನಮ್ಮ ಪ್ರಧಾನಿಗಳಾದ ಶ್ರೀ ಮೊರಾರ್ಜಿ ದೇಸಾಯಿ ಅವರು ಹೇಳಿದ್ದಾರೆ, ಅದ್ದರಿಂದ ಮುಂದೆ ಜನಗಳಿಗೆ ತೊಂದರೆ ಆದೀತು ಎನ್ನುವ ಶಂಕೆಯನ್ನು ಶ್ರೀಮಾನ್ ಕಕ್ಕಿಲಾಯ ಅವರು ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ನನಗೆ ತಿಳಿದಿದ್ದನ್ನು ಹೇಳುವುದಾದರೆ ಇಂದಿನ ಪ್ರಧಾನಿಗಳಾದ ಶ್ರೀ ಮೊರಾರ್ಜಿ ದೇಸಾಯಿ ಅವರು ಹಿಂದೆ ಮುಂಬೈ ಪ್ರಾಂತ್ಯದ ಮುಖ್ಯ ಮಂತ್ರಿಗಳಾಗಿದ್ದಾಗ ನಮ್ಮ ಇಂದಿನ ಭೂಸುಧಾರಣಾ ಶಾಸನ ಏನಿದೆ ಇದಕ್ಕಿಂತಲೂ ಒಂದು ಕ್ರಾಂತಿಕಾರಕವಾದ ಶಾಸನವನ್ನು ತಂದಿದ್ದರು. ಇದು ಮುಂಬೈ ಪ್ರಾಂತ್ಯದಿಂದ ಬಂದಿರತಕ್ಕ ಮಾನ್ಯ ಸದಸ್ಯರಿಗೂ ಹಾಗೂ ಎಲ್ಲಾ ಜನತೆಗೂ ಗೊತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಈ ಬಗ್ಗೆ ಮಾನ್ಯ ಹಿರಿಯ ಸದಸ್ಯರಾದ ಶ್ರೀಮಾನ್ ಕಕ್ಕಿಲಾಯ ಅವರು ಏನು ಶಂಕೆಯನ್ನು ವ್ಯಕ್ತಪಡಿಸಿದ್ದಾರೆ ಆ ರೀತಿ ಅವರು ಶಂಕೆಯನ್ನು ಇಟ್ಟುಕೊಳ್ಳಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಭೂಸುಧಾರಣಾ ಕಾನೂನಿನಲ್ಲಿ 9ನೇ ಷಡ್ಯೂಲನ್ನು ಕಿತ್ತುಹಾಕುತ್ತೇವೆ ಎಂದು ಶ್ರೀಮಾನ್ ಕೆ. ಎಸ್. ಹೆಗ್ಗಡೆಯವರು ತಮ್ಮ ಚುನಾವಣಾ ಭಾಷಣದಲ್ಲಿ ಹೇಳಿದ್ದಾರೆ. ಹಾಗೆಯೇ ಜನತಾ ಪಕ್ಷದ ನಾಯಕರೂ ಸಹ 9ನೇ ಷೆಡ್ಯೂಲನ್ನು ತೆಗೆದುಹಾಕುತ್ತೇವೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ.—ಈಗ ಇಲ್ಲಿ ಸಪ್ಲಿಮೆಂಟರಿ ಬಡ್ಜೆಟ್ಟಿಗೂ ಭೂಸುಧಾರಣಾ ಕಾನೂನಿನ ವಿಷಯಕ್ಕೂ ಸಂಬಂಧವಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಶ್ರೀಮಾನ್ ಕಕ್ಕಿಲಾಯ ಅವರು ಭೂಸುಧಾರಣಾ ಕಾನೂನಿನ 9ನೇ ಪರಿಚ್ಛೇದದ ಬಗ್ಗೆ ಏನು ಶಂಕೆಯನ್ನು ವ್ಯಕ್ತಪಡಿಸಿದ್ದಾರೆ ಆ ರೀತಿ ಅವರು ಶಂಕೆ ಪಡಬೇಕಾದ ಅವಶ್ಯಕತೆ ಇಲ್ಲ. ಯಾವುದೇ ಕಾಯಿದೆಯ ಬಗ್ಗೆಯಾಗಲೀ ಜನಸಾಮಾನ್ಯರಿಗೆ, ರೈತರಿಗೆ, ಕಾರ್ಮಿಕರಿಗೆ ಹಾಗೂ ಬಡವರ ಹಿತಕ್ಕೆ ಧಕ್ಕೆ ಬರತಕ್ಕ ಯಾವುದೇ ಕ್ರಮವನ್ನು ಕೇಂದ್ರ ಸರ್ಕಾರ ಕೈಗೊಳ್ಳುವುದಿಲ್ಲ ಎಂದು ನಾನು ಮಾನ್ಯ ಸದಸ್ಯರಾದ ಶ್ರೀಮಾನ್ ಕಕ್ಕಿಲಾಯ ಅವರಿಗೆ ಆಶ್ವಾಸನೆ ಕೊಡುತ್ತೇನೆ. ಅವರ ಹಿತಕ್ಕೆ ಈವರೆಗೆ ಇದ್ದಂಥ, ಅಧಿಕಾರ ನಡೆಸಿದಂಥ ಆಡಳಿತ ಕಾಂಗ್ರೆಸ್ಸಿನ ಶ್ರೀಮತಿ ಇಂದಿರಾ ಗಾಂಧಿಯವರ ಸರ್ಕಾರ ಏನೇನು ಅಡ್ಡಿ ಆತಂಕಗಳನ್ನು ತಂದೊಡ್ಡಿತ್ತೋ, ಮತ್ತು ಯಾವ ಯಾವ ಅಪಾಯಗಳನ್ನು ತಂದೊಡ್ಡಿತ್ತೋ ಅವುಗಳನ್ನು ಸಂಪೂರ್ಣವಾಗಿ ತೊಡೆದುಹಾಕಿ, ಅವುಗಳನ್ನು ನಿವಾರಿಸಿ, ಬಡ ಜನರನ್ನು ಮೇಲಕ್ಕೆ ಎತ್ತಲು ಕಂಕಣಬದ್ಧವಾಗಿದೆ ಕೇಂದ್ರದ ಜನತಾ ಸರ್ಕಾರ.

4-00 P. M.

ಮಾನ್ಯ ಅಧ್ಯಕ್ಷರೇ, ಈ ಹೆಚ್ಚುವರಿ ಬೇಡಿಕೆಯಲ್ಲಿ 20 ಅಂಶಗಳ ಕಾರ್ಯಕ್ರಮವನ್ನು ಕಾರ್ಯಗತಗೊಳಿಸುವುದರ ಬಗ್ಗೆ ಖರ್ಚು ಮಾಡಿದ್ದೇವೆ ಎಂದು ಮಾನ್ಯ ಅರ್ಥ ಸಚಿವರು ಅಲ್ಲಲ್ಲಿ ಟಿಪ್ಪಣಿ ಕೊಡಿಸಿದ್ದಾರೆ ಈ 20 ಅಂಶಗಳ ಕಾರ್ಯಕ್ರಮದ ಬಗ್ಗೆ ಹೆಚ್ಚಿಗೆ ಹೇಳಬೇಕಾದ ಅವಶ್ಯಕತೆ ಇಲ್ಲ. ಅದಕ್ಕೆ ಇಡೀ ದೇಶವೇ ಉತ್ತರ ಕೊಟ್ಟಿದೆ. ನನ್ನ ಅನಿಸಿಕೆ ಪ್ರಕಾರ, ಈ 20 ಅಂಶಗಳಿಗಿಂತ ಹೆಚ್ಚಿಗೆ ನಮ್ಮ ಸರ್ಕಾರ ಖರ್ಚು ಮಾಡಿರುವುದು 5 ಅಂಶಗಳಿಗೆ. ಪ್ರಧಾನಿಯವರ ಸುಪುತ್ರ ಸಂಜಯಗಾಂಧಿಯವರ 5 ಅಂಶಗಳ ಕಾರ್ಯಕ್ರಮಗಳಿಗೆ ಹೆಚ್ಚು ಖರ್ಚು ಮಾಡಿದ್ದಾರೆ. ಅವರನ್ನು ಇಲ್ಲಿಗೆ ಕರೆತಂದು ಮಾಡಿದ ಮೆರವಣಿಗೆಗಳು ಅವರಿಗೋಸ್ಕರ ಇಲ್ಲಿಂದ ಹೋದಂಥ ತಂಡ, ಸರ್ಕಾರಿ ಯಂತ್ರದ ದುರುಪಯೋಗ ಇದೆಲ್ಲದರ ಖರ್ಚನ್ನು ತಾವು ಒಟ್ಟು ಜಮಾ ವಾಡಿ ತಿಳಿಸಿದರೆ ಬಹಳ ಉಪಕಾರವಾಗುತ್ತದೆ. ಆದರೆ ಯಾರೋ ಒಬ್ಬ ವ್ಯಕ್ತಿಯ ಬಗ್ಗೆ, ಯಾವುದೂ ಅಲ್ಲದೇ ಇರತಕ್ಕ ವ್ಯಕ್ತಿಯ ಅನಾವಿಷ್ಕರಣ ಬಗ್ಗೆ ಈ ರೀತಿ ನಮ್ಮ ರಾಜ್ಯ ಸರ್ಕಾರ ವೆಚ್ಚ ಮಾಡುವುದು ಸಮರ್ಥನೀಯವಾಗಿದೆಯೇ ಎನ್ನುವುದರ ಬಗ್ಗೆ ತನಿಖೆ ಆಗಬೇಕಾದ ಅವಶ್ಯಕತೆ ಇದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಆರೋಗ್ಯ ಸಚಿವರು ಕುಟುಂಬಯೋಜನೆ ಬಗ್ಗೆ ನಮ್ಮದು ಒತ್ತಾಯ ಇಲ್ಲ ಎಂದು ಹೇಳಿದ್ದಾರೆ. ಕಳೆದ ಅಧಿವೇಶನದಲ್ಲಿ ಕೃಷ್ಣನ್‌ರವರು ಕುಟುಂಬ ಯೋಜನೆ ಬಗ್ಗೆ ಅನೇಕ ಘಟನೆಗಳನ್ನು ಹೇಳಿದ್ದಾರೆ. ಕೇಂದ್ರದಲ್ಲಿ ಹೆಲ್ತ್ ಅಂಡ್ ಫ್ಯಾಮಿಲಿ ಪ್ಲಾನಿಂಗ್ ಖಾತೆಗೆ ನೂತನವಾಗಿ ಬಂದಿರತಕ್ಕ ಸಚಿವರು ಯಾರಿದ್ದಾರೋ ಅವರು ಇವರಿಗೆ ಒಳ್ಳೆಯ ರೀತಿಯಲ್ಲಿ ಆರೋಗ್ಯದ ಪಾಠವನ್ನು ಕಲಿಸುತ್ತಾರೆ ಎನ್ನುವುದರಲ್ಲಿ ಶಂಕೆ ಇಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ನನ್ನಿಂದ ಪಾಠ ಕಲಿತುಕೊಳ್ಳಲಿ.

ಶ್ರೀ ಕೋಣಂದೂರು ಲಿಂಗಪ್ಪ.—ಕೇಂದ್ರದ ಆರೋಗ್ಯ ಮತ್ತು ಕುಟುಂಬಯೋಜನೆ ಖಾತೆಯ ಮಂತ್ರಿಗಳಾದ ಮಾನ್ಯ ರಾಜ್‌ನಾರಾಯಣ್ ಅವರನ್ನು ಅಭಿನಂದಿಸಿ, ಅವರ ಮೂಲಕ ನಮ್ಮ ಆರೋಗ್ಯ ಸಚಿವರಿಗೆ ಆರೋಗ್ಯ ಇಲಾಖೆಯಲ್ಲಿ ಹೆಚ್ಚಿನ ತಿಳಿವಳಿಕೆ ಬರುತ್ತದೆ ಎನ್ನುವ ವಿಶ್ವಾಸವನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ನನ್ನಿಂದ ತಿಳಿವಳಿಕೆ ತೆಗೆದುಕೊಂಡುಹೋಗಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ನಾವು ನಿಮ್ಮಿಂದ ಕಲಿತುಕೊಳ್ಳಬೇಕಾದ ಪಾಠ ಬಹಳ ಇವೆ. ನಮಗೆ ಗೊತ್ತಿಲ್ಲದೇ ಇರುವುದೆಲ್ಲಾ ನಿಮಗೆ ಗೊತ್ತು.

ಮಾನ್ಯ ಅಧ್ಯಕ್ಷರೇ, ಓಟ್ ಆನ್ ಅಕೌಂಟಿನಲ್ಲಿ 1 ಕೋಟಿ 10 ಲಕ್ಷ ರೂಪಾಯಿಗಳನ್ನು ಸ್ಟೇಟ್ ಲೆಜಿಸ್ಲೇಚರ್ ಮತ್ತು ಎಲೆಕ್ಷನ್ ಸಲುವಾಗಿ ಕೇಳಿದ್ದಾರೆ. ನಾವು ಕಳೆದ 3 ವರ್ಷಗಳಿಂದ ನಮ್ಮ ಸ್ಟೇಟ್ ಲೆಜಿಸ್ಲೇಚರ್ ಏನಿದೆ ಇದನ್ನು ಸ್ವಾಯತ್ತಮಾಡಿ, ಇದಕ್ಕೆ ಕೊಡಬೇಕಾದ ಸೌಲಭ್ಯಗಳನ್ನು ಕೊಡಿ ಎಂದು ಕೇಳಿಕೊಂಡು ಬರುತ್ತಾ ಇದ್ದೇವೆ. ನಮ್ಮ ಘನ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಇನ್ನೂ ಕೊಟ್ಟಿಲ್ಲ, ಯಾವ ದುರುದ್ದೇಶದಿಂದ ಕೊಟ್ಟಿಲ್ಲ ಎನ್ನುವುದು ನಮಗೆ ಗೊತ್ತಿಲ್ಲ. ಆದರೆ ನಮ್ಮ ಪಾರ್ಲಿಮೆಂಟರಿ ವ್ಯವಹಾರಗಳ ಸಚಿವರು 2-3 ಸಾರಿ ಇದರ ಬಗ್ಗೆ ಭರವಸೆಯನ್ನು ಕೊಟ್ಟಿದ್ದಾರೆ. ಆ ಭರವಸೆಯು ಕೇವಲ ಭರವಸೆಯಾಗಿಯೇ ಉಳಿದಿದೆ. 1 ಕೋಟಿ 10 ಲಕ್ಷ ರೂಪಾಯಿಗಳನ್ನು ಮಾನ್ಯ ಅರ್ಥ ಸಚಿವರು ಸ್ಟೇಟ್ ಲೆಜಿಸ್ಲೇಚರ್ ಅಂಡ್ ಎಲೆಕ್ಷನ್ ಸಲುವಾಗಿ ಕೇಳಿದ್ದಾರೆ. ಇದರಲ್ಲಿ ಎಲೆಕ್ಷನ್ ಎಂದು ಹೇಳಿದ್ದಾರೆ. ಯಾವುದರ ಎಲೆಕ್ಷನ್? ಈಗ ಲೋಕಸಭೆ ಚುನಾವಣೆ ನಡೆಯಿತು ದೇಶದ ಅದೃಷ್ಟದಿಂದ, ದೇಶದ ಜನರ ಪುಣ್ಯದ ಫಲದಿಂದ ಈ ಚುನಾವಣೆಯು ನಡೆಯಿತು. ಆದರೆ ನಮ್ಮ ರಾಜ್ಯದಲ್ಲಿ ಯಾವ ಚುನಾವಣೆ ನಡೆದಿದೆ? ಗ್ರಾಮ ಪಂಚಾಯಿತಿ ಚುನಾವಣೆ ನಡೆಸಿದ್ದೀರಾ? ತಾಲ್ಲೂಕ್‌ಬೋರ್ಡ್ ಚುನಾವಣೆ ನಡೆಸಿದ್ದೀರಾ? ಅಥವ ಸೊಸೈಟಿಗಳ ಚುನಾವಣೆ ನಡೆಸಿದ್ದೀರಾ? ಕೊನೇ ಪಕ್ಷ ಶಾಲಾಕಾಲೇಜುಗಳ ವಿದ್ಯಾರ್ಥಿಗಳ ಸಂಘದಲ್ಲಿ ಚುನಾವಣೆಗಳನ್ನು ಮಾಡಿಕೊಳ್ಳುವುದಕ್ಕೂ ಬಿಟ್ಟಿಲ್ಲ. ಈ ತಿಂಗಳ 25ನೇ ತಾರೀಖಿನವರೆಗೆ ಅಂದರೆ 33 ತಿಂಗಳ ಕಾಲ ಸತತವಾಗಿ ಎಲ್ಲಾ ಚುನಾವಣೆಗಳನ್ನೂ ದಮನಮಾಡಿ ಸರ್ವಾಧಿಕಾರದ ತಾಂಡವ ನೃತ್ಯವನ್ನು ಆಡಿರತಕ್ಕ ನಿಮಗೆ ಚುನಾವಣೆ ಶಬ್ದವನ್ನು ಎತ್ತುವುದಕ್ಕೆ ಯಾವ ನೈತಿಕ ಹಕ್ಕಿದೆ ಎಂದು ನಾನು ಪ್ರಶ್ನೆ ಮಾಡುತ್ತೇನೆ ಜನರ ಕಣ್ಣಿಗೆ ಮಣ್ಣನ್ನು ಎರಚತಕ್ಕ ಸಲುವಾಗಿ ಸುಳ್ಳು, ಮೋಸ, ವಂಚನೆ ಹಾಗೂ ಅಪಪ್ರಚಾರ ಇವುಗಳನ್ನೇ ತಮ್ಮ ಪ್ರಾಣ, ಅಸ್ತಿಯನ್ನಾಗಿ ಮಾಡಿಕೊಂಡು ಸುಳ್ಳನ್ನು ಮನೆ ದೇವತೆಯಾಗಿ ಆರಾಧ್ಯ ದೇವತೆಯನ್ನಾಗಿ ಮಾಡಿಕೊಂಡು ಇದುವರೆಗೆ ಜನತೆಯ ಕಣ್ಣಿಗೆ ಮಣ್ಣನ್ನು ಎರಚತಕ್ಕ ಸಾಹಸ ಏನು ಮಾಡುತ್ತಿದ್ದಿರಿ. ಅದು ಇನ್ನು ಮುಂದೆ ನಡೆಯುವುದಿಲ್ಲ ಎಂದು ನೆನಪು ಇಟ್ಟುಕೊಳ್ಳಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಡಿಮ್ಯಾಂಡ್ ನಂ. 5ರಲ್ಲಿ ಲ್ಯಾಂಡ್ ರೆವಿನ್ಯೂ ಬಗ್ಗೆ ಒಂದು ಬೇಡಿಕೆಯನ್ನು ಸರ್ಕಾರದವರು ಇಟ್ಟಿದ್ದಾರೆ. ಬಹಳ ಕಾಲದಿಂದ ನಾವು ಕೇಳಿಕೊಂಡು ಬರುತ್ತಲೇ ಇದ್ದೇವೆ. ಇವತ್ತು ನನ್ನ ಸ್ನೇಹಿತರಾದಂಥ ಶ್ರೀ ಕಾಗೋಡು ತಿಮ್ಮಪ್ಪನವರು ಅದರ ಬಗ್ಗೆ ವಿಶದವಾಗಿ ಹೇಳುತ್ತಾರೆ. ಒಂದು ಮಾತು, ಇವತ್ತು ನೀವು ಲ್ಯಾಂಡ್ ರೆವಿನ್ಯೂ ಎಂದು ಏನು ವಿಧಿಸಿದ್ದೀರೋ ಅದು ಭೂ ಕಂದಾಯ, ವಾಟರ್ ಸೆಸ್ ಇತ್ಯಾದಿ ಮೂಲಕ ರೈತರ ಮೇಲೆ ಬೀಳುತ್ತದೆ. ಅದರ ಬಗ್ಗೆ ಪುನಃ ಪರಿಶೀಲನೆ ಮಾಡಬೇಕೆಂದು ನಾವು ಸತತವಾಗಿ ಹೋರಾಟ ಮಾಡಿಕೊಂಡು ಬರುತ್ತಿದ್ದೇವೆ; ಕೇಳುತ್ತಲೂ ಬಂದಿದ್ದೇವೆ, ಅದು ಆಗುತ್ತದೆ. ನೀವು ಮಾಡಬೇಕು 6 ಎಕರೆಗಳಿಗಿಂತಲೂ ಕಡಿಮೆ ಯಾರಿಗೆ ಹಿಡುವಳಿ ಇದೆಯೋ ಅಂತಹವರ ಮೇಲೆ ಯಾವುದೇ ತೆರಿಗೆ ವಿಧಿಸತಕ್ಕದ್ದಲ್ಲ. ಇದು ನಮ್ಮ ಒಂದು ಬೇಡಿಕೆ. ಅಷ್ಟೇ ಅಲ್ಲ ಅದು ನಮ್ಮ ಕಾರ್ಯಕ್ರಮ ನಾವು ಅಂದರೆ ನಮ್ಮ ಜನತಾ ಪಕ್ಷದ ಕಾರ್ಯಕ್ರಮವಾಗಿದೆ. ಅದನ್ನು ಮಾಡುವುದಕ್ಕೆ ಇದುವರೆಗೂ ಬರಿ ಆಶ್ವಾಸನೆಯನ್ನು ಮಾತ್ರ ನೀವು ಕೊಟ್ಟುಕೊಂಡು ಬಂದಿದ್ದೀರಿ. ಸೋಷಿಯಲಿಷ್ಟ್ ಪಕ್ಷದ ಸಿದ್ಧಾಂತದ ಅಂಶವಾಗಿರುವ ಜನತಾ ಪಕ್ಷ ಬೇರೆಯಲ್ಲ, ಸೋಷಿಯಲಿಸ್ಟ್ ಪಕ್ಷ ಬೇರೆಯಲ್ಲ ಎಲ್ಲಾ ಒಂದೇ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸೋಷಲಿಸ್ಟ್ ಪಕ್ಷ ವಿಸರ್ಜನೆಯಾಗಿದೆಯಲ್ಲಾ ;

ಶ್ರೀ ಕೋಣಂದೂರು ಲಿಂಗಪ್ಪ.—ನಾಲ್ಕು ಪಕ್ಷಗಳು ಒಗ್ಗಟ್ಟಾಗಿ ಐಕ್ಯವಾಗಿವೆ,

ಶ್ರೀ ಕೆ. ಎಚ್. ರಂಗನಾಥ್.—ಕೋಣಂದೂರು ಲಿಂಗಪ್ಪನವರು ಕನ್ನಡ ಪಂಡಿತರು. ಅವರಿಗೆ ವಿಸರ್ಜನೆ ಎಂಬುದಕ್ಕೆ ಅರ್ಥಗೊತ್ತಿದೆಯೇ ? ಅದಕ್ಕೆ ಒಗ್ಗಟ್ಟು ಎಂದು ಅರ್ಥವೇ ?

ಶ್ರೀ ಕೋಣಂದೂರು ಲಿಂಗಪ್ಪ.—ನಾವು ಐಕ್ಯವಾಗಿದ್ದೇವೆ. ನಾಲ್ಕು ಪಕ್ಷಗಳೂ ಕೂಡಿ ಒಬ್ಬರಿಗೊಬ್ಬರು ಐಕ್ಯರಾಗಿದ್ದೇವೆ.

ಇನ್ನೂ ಜೈಲುಗಳ ಬಗ್ಗೆ 60 ಲಕ್ಷ ರೂಪಾಯಿಗಳ ಬೇಡಿಕೆ ಇಟ್ಟಿದ್ದಾರೆ; ನಾನು ಬಹಳ ನಮ್ರತೆಯಿಂದ ಗೌರವಪೂರ್ಣವಾಗಿ ಹಿರಿಯರಾದಂತಹ ಚನ್ನಬಸಪ್ಪನವರಲ್ಲಿ ಪ್ರಾರ್ಥನೆ ಮಾಡುತ್ತೇನೆ ನಿಮ್ಮ ಜೈಲುಗಳನ್ನು ಈಗಲೇ ಚೆನ್ನಾಗಿ ನೋಡಿಕೊಳ್ಳಿ ಎಂದು. ಕಾರಣ ಇಷ್ಟೆ ಇನ್ನು ವಿಚಾರಣಾಪರ್ವ ಪ್ರಾರಂಭವಾಗುತ್ತದೆ. ಅದ್ದರಿಂದ ನಾವು ನಿಮ್ಮ ಹಾಗೆ ವಿಚಾರಣೆ ಇಲ್ಲದೆ ಜೈಲಿಗೆ ಹಾಕುವುದಿಲ್ಲ ವಿಚಾರಣೆ ಮಾಡಿ ಜನರಿಗೆ ಮನದಟ್ಟು ಮಾಡಿ ಆಮೇಲೆ ನಿಮ್ಮನ್ನು ಜೈಲಿಗೆ ಕಳುಹಿಸುತ್ತೇವೆ. ಶ್ರೀ ಬಿ ಬಾಸ್ಕರ ಶೆಟ್ಟಿಯವರಿಗೆ ಒಂದು ಮಾತನ್ನು ಹೇಳುತ್ತೇನೆ. ಅವರು ಇಲ್ಲಿದ್ದವರು ಅವರು ಇಲ್ಲಿ ಸಲ್ಲುವುದಿಲ್ಲ ಅಲ್ಲಿಯೂ ಸಲ್ಲುವುದಿಲ್ಲ, ಅವರಿಗೆ ತ್ರಿಶಂಕು ಸ್ವರ್ಗವಾಗುತ್ತದೆಂಬುದು ನಿಜ. ಆದ್ಧರಿಂದ ಈಗಲೂ ಪರವಾಗಿಲ್ಲ ನಮ್ಮ ಕಡೆ ಬಂದರೆ ಬನ್ನಿ. ಇನ್ನೂ ಜೈಲುಗಳಲ್ಲಿ ನಡೆಯತಕ್ಕಂಥ ವಿಚಾರಗಳ ಬಗ್ಗೆ ಹೇಳುವುದಾದರೆ, ಅಲ್ಲಿನ ಆಡಳಿತ ಹೆಚ್ಚಿಗೆ ದೌರ್ಜನ್ಯ, ದಬ್ಬಾಳಿಕೆಯಿಂದ ಕೂಡಿದೆ. ಕಳೆದ 33 ತಿಂಗಳಲ್ಲಿ ನಮಗೆ ಆದಂತಹ ಅನುಭವವನ್ನು ನೋಡುವುದಾದರೆ ಕೇವಲ ರಾಜಕೀಯ ಕಾರಣಕೋಸ್ಕರವೇ ಜೈಲನಲ್ಲಿ ನಮ್ಮನ್ನು ಇಟ್ಟಿದ್ದೀರಿ ಎಂಬುದು ಗೊತ್ತಾಗುತ್ತದೆ. ಜೈಲಿನಲ್ಲಿ ಇದ್ದಂತಹ ಅನುಭವ ನನಗೆ ಹೆಚ್ಚಾಗಿ ಇಲ್ಲದಿದ್ದರೂ ಅಲ್ಲಿ ನಡೆದಿರತಕ್ಕಂಥ ಒಂದು ಘಟನೆಯನ್ನು ಇಲ್ಲಿ ಹೇಳಿದರೆ ಬಹುಶಃ ಜೈಲಿನಲ್ಲಿ ಯಾರ್ಯಾರು ಇದ್ದಾರೋ ಅಂತಹವರಿಗೆ ಅದು ಅರ್ಥವಾದೀತು. ಈ ಸಾರಿಯ ಸಾರ್ವತ್ರಿಕ ಚುನಾವಣೆ ಸಮಯದಲ್ಲಿ ಸುಮಾರು 9 ತಿಂಗಳ ಕಾಲ ಕ್ಷುಲ್ಲಕವಾಗಿ ಯಾವುದೇ ಕಾರಣ ಇಲ್ಲದೆ ದುರುದ್ದೇಶದಿಂದ ಶ್ರೀಮತಿ ಸ್ನೇಹಲತಾ ರೆಡ್ಡಿಯವರನ್ನು ಜೈಲಿನಲ್ಲಿ ಇಟ್ಟಿದ್ದರು ಅವರು ಈ ರಾಷ್ಟ್ರದ ವಿಖ್ಯಾತ ಕಲಾವಿದೆಯರು. ಅಷ್ಟೇ ಅಲ್ಲ ಅಂತರರಾಷ್ಟ್ರೀಯ ಮಟ್ಟದಲ್ಲಿ ಕಲಾ ಕ್ಷೇತ್ರದಲ್ಲಿ ಹೆಸರಾಂತಿಯಾದ ಶ್ರೇಷ್ಟ ನರ್ತಕಿ ನಮ್ಮ ಕನ್ನಡ ನಾಡಿನ ಚಲನಚಿತ್ರದ ಜಾಣ್ಮೆಯನ್ನು ದೊರಕಿಸಿಕೊಂಡ ಸುಸಂಸ್ಕೃತ ನಾಯಕಿ. ಅವರು ನಮ್ಮ ನಾಯಕರಾದ ಡಾ|| ಲೋಹಿಯಾರವರ ಪರಿಚಿತರು. ಹಾಗೂ ಈಗ ಕೇಂದ್ರದ ಸಂಪರ್ಕ ಶಾಖಾ ಸಚಿವರಾಗಿರುವ ಜಾರ್ಜ್ ಫರ್ನಾಂಡಿಸ್ ಅವರ ಪರಿಚಿತರು ಎನ್ನುವ ಒಂದು ಕಾರಣಕ್ಕಾಗಿ ಯಾವುದೇ ವಿಚಾರಣೆಯೂ ಇಲ್ಲದೆ 9 ತಿಂಗಳ ಕಾಲ ಇದೇ ಸೆಂಟ್ರಲ್ ಜೈಲನಲ್ಲಿಟ್ಟಿದ್ದರು. ಶ್ರೀಮತಿ ಸ್ನೇಹಲತಾ ರೆಡ್ಡಿಯವರು ಅಸ್ತಮಾ ರೋಗಿ. ಆದರೂ ನವಂಬರ್ - ಡಿಸೆಂಬರ್—ಜನವರಿ ತಿಂಗಳಿನಲ್ಲಿ ಜೈಲಿನಲ್ಲಿ ಅವರಿಗೆ ಸರಿಯಾದ ಶುಶ್ರೂಷೆಯನ್ನು ಕೊಟ್ಟಿಲ್ಲ. ನಾನೇ ಸ್ವತಃ ಸರ್ಕಾರಿ ಅಧಿಕಾರಿಗಳು, ಗೃಹಖಾತೆಗೆ ಸಂಬಂಧಪಟ್ಟವರನ್ನು ಬೇಡಿಕೊಂಡರೂ ಕೂಡ ಶ್ರೀಮತಿ ಸ್ನೇಹಲತಾರೆಡ್ಡಿಯವರಿಗೆ ಶುಶ್ರೂಷೆ ಕೊಟ್ಟಿಲ್ಲ. ಡಾಕ್ಟರ್ ಸಾಕಷ್ಟು ಇಂಜಕ್ಷನ್ ಸಹ ಕೊಟ್ಟಿಲ್ಲ. ಈ ವಿಚಾರದಲ್ಲಿ ನಾನೇ ಸ್ವತಃ ಸಂಬಂಧಪಟ್ಟ ಮಂತ್ರಿಗಳನ್ನು ಮತ್ತು ಗೃಹಖಾತೆಗೆ ಸಂಬಂಧಪಟ್ಟವರನ್ನು ಭೇಟಿಯಾಗಿದ್ದೆ. ಅದರೆ 8 ತಿಂಗಳ ಮೇಲೆ ಹೊರಗಡೆ ಪೆರೋಲ್ ಮೇಲೆ ಬಿಟ್ಟರು. ಯಾವತ್ತು ಅವರಿಗೆ ಬಿಡುಗಡೆ ಆರ್ಡರ್ ಬಂತೋ ಅಂದೇ ಅವರು ಇಹಲೋಕದಿಂದಲೇ ಬಿಡುಗಡೆಯಾದರು. ಇದೇ ರೀತಿ ಅನೇಕ ಕಡೆಗಳಲ್ಲಿ 148 ಸಾವುಗಳಾಗಿವೆ. ಇವತ್ತು ಜೈಲಿನಲ್ಲಿರುವ ಅಧಿಕಾರಿಗಳಿಂದ ಬಡವರ ಪರಿಸ್ಥಿತಿ ಉತ್ತಮವಾಗಿದೆಯೆಂದು ಹೇಳಿದರೆ ಅದು ಸರಿಯಲ್ಲ. ಅವರಿಗೆ ಅಲ್ಲಿ ಹಾಕತಕ್ಕಂಥ ಕೂಳು ಅಥವಾ ಮುದ್ದೆ, ಅವರು ಅವರನ್ನು ನೋಡಿಕೊಳ್ಳುವ ರೀತಿ ನೋಡಿದರೆ, ಅದಕ್ಕೆ ಸ್ವಲ್ಪ ಮಾನವೀಯತೆ ಬೇಡವೇ ಎಂದು ನಾನು ಕೇಳುತ್ತೇನೆ. ಜೈಲಿನಲ್ಲಿ ಕೊಡತಕ್ಕಂಥ ಆಹಾರ ಏನಿದೆಯೋ ಅದನ್ನು ನಮ್ಮ ಮಂತ್ರಿಗಳ ಮನೆಯವರು ಯಾರು ಇದ್ದಾರೋ ಅವರು ಅವರ ಮನೆಗಳಲ್ಲಿ ಇರತಕ್ಕಂಥ ನಾಯಿಗಳಿಗೂ ಹಾಕಲಾರರು ಎಂದು ಹೇಳುತ್ತೇನೆ. ಮಾನವೀಯತೆ ಇಲ್ಲದೆ ಇರುವ ರೀತಿಯಲ್ಲಿ ಅಲ್ಲಿ ನಡೆದುಕೊಳ್ಳುವ ಕ್ರಮ ಏನಿದೆಯೋ ಅದು ಖಂಡನೀಯ ಜೈಲಿನ ಪೋಲೀಸಿನವರ ಬಗ್ಗೆ ಒಂದು ಮಾತು, ಅವರು ಇನ್ನೂ ಅರ್ಥ ಚಡ್ಡಿ ಬಿಟ್ಟಿಲ್ಲ. ಪೂರ್ತಿ ಚಡ್ಡಿ ಕೊಟ್ಟಿಲ್ಲ. ಅಲ್ಲಿನ ಸೊಳ್ಳೆ, ನೊಣ

ನೋಡಿದರೆ ಜೈಲಿನಲ್ಲಿರುವವರು ಖೈದಿಗಳೇ ಅಥವಾ ಯಾರೋ ಎಂಬುದೇ ಅರ್ಥವಾಗುವುದಿಲ್ಲ. ಅಂತಹವರು ಈ ರಾಜ್ಯದಲ್ಲಿ ಒಂದು ಸಾವಿರ ಇರಬಹುದು ಅವರೆಲ್ಲರಿಗೂ ಪೂರ್ತಾ ಚಡ್ಡಿಯನ್ನಾದರೂ ಕೊಡಬೇಕೆಂದು ಹೇಳುತ್ತೇನೆ ಅವರ ಬಗ್ಗೆ ಯಾವ ಕನಿಕರವನ್ನು ತೋರಿಲ್ಲ. ಆದ್ದರಿಂದ ಜೈಲುಗಳ ಬಗ್ಗೆ ವಿಶೇಷವಾಗಿ ಗಮನವನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಷಯವನ್ನು ಹೇಳಿ ನನ್ನ ಭಾಷಣವನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅದು ರಿಹ್ಯಾಬಿಲಿಟೇಷನ್ ಸ್ಕೀಂ ವಿಷಯ ಇದು ಡಿಮ್ಯಾಂಡ್ ನಂ. 33ರಲ್ಲಿ ನಮೂದಿಸಿದೆ. ಇದರ ಬಗ್ಗೆ ನಾನು ಮೊದಲಿನಿಂದಲೂ ಹೇಳುತ್ತಲೇ ಬಂದಿದ್ದೇನೆ. ಇದರಲ್ಲಿ ಪುನರ್ವಸತಿ ವಿಷಯ ಹಾಗೂ ಪವರಿಗೆ ಸಂಬಂಧಪಟ್ಟ ವಿಷಯ ಬಹು ಮುಖ್ಯವಾದುದ್ದು ವರಾಹಿ ಮತ್ತು ಚಕ್ರ ಈ ಎರಡು ಪ್ರಾಜೆಕ್ಟುಗಳನ್ನು ತೆಗೆದುಕೊಂಡಿದ್ದಿರಿ ಆದರೆ ಇವತ್ತು ಚಕ್ರ ಮತ್ತು ಸಾವೆಹೊಕ್ಕಲು ಪ್ರಾಜೆಕ್ಟುಗಳನ್ನು ಕೆಲಸಗಳನ್ನು ಶುರುಮಾಡಿದ್ದೀರಿ. ಆದರೆ ಮಾನ್ಯ ಅಧ್ಯಕ್ಷರೆ, ರೈತರಿಗೆ ಯಾವ ಪೂರ್ವಭಾವಿ ಸೂಚನೆಯನ್ನು ಕೊಡದೆ ಚಾನಲ್‌ಗಳನ್ನು ತೆಗೆದು ಬೆಳೆ ಬಂದಂಥ ಗದ್ದೆಗಳ ಮೇಲೆ ಮಣ್ಣನ್ನು ಹಾಕಿರುವುದು ಮಾತ್ರವಲ್ಲದೆ ಮನೆಗಳನ್ನು ಮುಚ್ಚುವವರೆಗೆ ತುಂಬಿದ್ದಾರೆ. ರೈತರ ಹತ್ತಿರ ಅಲ್ಲಿರತಕ್ಕ ಅಧಿಕಾರಿಗಳು ಯಾವುದೋ ಹಿಂದಿನ ತಾರೀಖು ಹಾಕಿ ಇಂಗ್ಲೀಷಿನಲ್ಲಿ ನೋಟೀಸ್ ಕೊಟ್ಟು ಹೆಬ್ಬೆಟ್ಟು ಒತ್ತಿಸಿಕೊಂಡು ಹೋಗಿದ್ದಾರೆ. ಈಗ ಕಾನೂನು ಬದ್ಧವಾಗಿ ಅದನ್ನು ರುಜುವಾತು ಮಾಡುವುದಕ್ಕೆ ಸಾಧ್ಯವಿಲ್ಲ ಒಂದು ಕುಟುಂಬದಲ್ಲಿ ಸುಮಾರು 70 ಜನ ವಾಸವಾಗಿದ್ದಾರೆ. ನಾನು ನಾಲ್ಕಾರು ಸಾರಿ ಅಲ್ಲಿ ಹೋಗಿ ನೋಡಿಕೊಂಡು ಬಂದು ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಮಾತನಾಡಿ ಬಂದಿದ್ದೇನೆ. ಈ ಪ್ರಾಜೆಕ್ಟ್ ಪ್ರಾರಂಭವಾಗುವುದಕ್ಕಿಂತ ಮುಂಚೆ ಯಾರು ಅನುಕೂಲವಾಗಿದ್ದುಕೊಂಡು ತಮ್ಮ ಮಕ್ಕಳುಮರಿಗಳನ್ನು ನೋಡಿಕೊಂಡು ಅಕ್ಕಪಕ್ಕದವರಿಗೂ ಸಹಾಯ ಮಾಡಿಕೊಂಡಿದ್ದರೋ ಅಂತಹವರೂ ಕೂಡ ಒಂದು ತುತ್ತು ಕೂಳಿಗೆ ಕಣ್ಣೀರಿಡುತ್ತಿದ್ದಾರೆ. ಆದ್ದರಿಂದ ರಿಹಾಬಿಲಿಟೇಷನ್ ಮಾಡದೆ ಯಾವುದೇ ಸ್ಕೀಂಗಳನ್ನೇ ಆಗಲಿ ತೆಗೆದುಕೊಳ್ಳಬಾರದು. ಕಾಳಿ, ವರಾಹಿ, ಚಕ್ರ, ಸಾವೇಹೊಕ್ಕಲು, ಯಾವುವೇ ಆದರೂ ಕೂಡ ಅಂದಾಜು ಮಾಡಿ ಯಾರು ಯಾರು ಮುಳುಗಡೆಯಾಗುತ್ತಾರೆ, ಯಾರುಯಾರು ನಿರ್ವಸಿತರಾಗುತ್ತಾರೆ ಅಂತಹವರ ಬಗ್ಗೆ ನೋಡಿ ಪುನರ್ವಸತಿ ಯೋಜನೆಯನ್ನು ಕಾರ್ಯಗತಗೊಳಿಸಿ ಅನಂತರ ತಮ್ಮ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕು ಎಂದು ಆಗ್ರಹಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

ಕಡೆಯದಾಗಿ ಎಲ್ಲರಿಗೂ ಅಪ್ಯಾಯಮಾನವಾದ ಕಾಡಿನ ಬಗ್ಗೆ ಒಂದೆರಡು ಮಾತಗಳನ್ನು ಹೇಳುತ್ತೇನೆ. ಈ ಇಲಾಖೆಗೆ 6 ಕೋಟಿ 20 ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಇದರ ಬಗ್ಗೆ ಹೇಳಬೇಕಾದರೆ ಈ ಇಲಾಖೆಗೆ ಬಹಳ ಹಣ ಕೇಳುತ್ತಿದ್ದಾರೆ. ಎಂಪ್ಲಾಯಿಮೆಂಟ್ ಕೊಡುತ್ತಾರಂತೆ, ಅಫೋರ್‌ಸ್ಟೇಷನ್ ಮಾಡುತ್ತಾರಂತೆ. ಒಳ್ಳೆಸೇವೆ ಮಾಡುತ್ತಿದ್ದಾರೆ ಸರ್ವೆ ಮಾಡುವುದಕ್ಕೆ ಕೂಡ ದುಡ್ಡು ಕೇಳಿದ್ದಾರೆ. ಇವತ್ತು ಮಾನ್ಯರಂಗನಾಥ್ ಅವರಾಗಲೀ ಯಾರೇ ಆಗಲಿ ಬಂದರೆ ಕರೆದುಕೊಂಡುಹೋಗಿ ತೋರಿಸುತ್ತೇನೆ, ನಮ್ಮ ತಾಲ್ಲೂಕಿನಲ್ಲಿ ಏನಾಗಿದೆ ಎಂಬುದನ್ನು ಇವತ್ತು ಹಳ್ಳಿಗಳಲ್ಲಿ ಹಿತ್ತಲು ಮತ್ತು ಬಚ್ಚಲುಮನೆಯವರೆಗೆ ಫಾರೆಸ್ಟ್ ಇಲಾಖೆಯವರು ಫಾರೆಸ್ಟ್ ಎಂದು ಗೂಟ ಹೊಡೆದಿದ್ದಾರೆ. ಅದು ನಮ್ಮ ಹಳ್ಳಿಯ ಜನರ ಎದೆಯ ಮೇಲೆ ಗೂಟ ಹೊಡೆದಹಾಗೆ ಕಾಣುತ್ತದೆ ಎಂದು ಬಹಳ ದುಃಖದಿಂದ ಹೇಳಬೇಕಾಗಿದೆ. ದನಕರುಗಳನ್ನು ಹಿತ್ತಲಗೆ ಬಿಡುವಹಾಗಿಲ್ಲ. ಮಲೆನಾಡಿನಲ್ಲಿ ಮನೆ ಮುರಿದು ಹೋದರೆ ಕಂಬ ಹಾಕುವುದಕ್ಕೆ ಆಗುತ್ತಿಲ್ಲ; ಕಚ್ಚಿಗೆ ತರುವುದಕ್ಕೆ ಆಗುತ್ತಿಲ್ಲ ಈ ರೀತಿ ಹಳ್ಳಿಯ ಜನರಿಗೆ ಚಿತ್ರಹಿಂಸೆಗಳನ್ನು ಕೊಡುತ್ತಿದ್ದಾರೆ. ಈ ತುರ್ತುಪರಿಸ್ಥಿತಿ ಸಮಯದಲ್ಲಿ ಬಹುಶಃ ಈ ಫಾರೆಸ್ಟು, ಪೋಲೀಸು ಕಾಂಗ್ರೆಸ್ಸು, ಈ ಮೂರು ಮಾಡಿದಷ್ಟು ದೌರ್ಜನ್ಯ ಯಾರೂ ಮಾಡಿಲ್ಲ. ಈ ದೇಶದ ಜನರ ಮೇಲೆ, ಈ ರಾಜ್ಯದ ಜನರ ಮೇಲೆ ಮಾಡಿರುವ ದೌರ್ಜನ್ಯವನ್ನು ಯಾರೂ ಬಾಯಿಬಿಟ್ಟು ಹೇಳುವಹಾಗಿಲ್ಲ ಜನರಲ್ಲಿ ಭೀತಿಯ ಬೀಜ ಬಿತ್ತಿ ಮುಗ್ಧರನ್ನಾಗಿ ಮಾಡಿ ಮೌನ, ಮುಗ್ಧತೆಯ ಮೇಲೆ ತಾಂಡವನೃತ್ಯ ಆಡತಕ್ಕ ಜನ ಇವರು ಇವತ್ತು ಹಣ ಕೇಳುತ್ತಿದ್ದಾರೆ. ಇವತ್ತು ಏನು ಖರ್ಚು ಮಾಡಲಿಕ್ಕೆ ಹೆಚ್ಚುವರಿ ಬೇಡಿಕೆಗೆ ಹಣ ಕೇಳುತ್ತಿದ್ದಾರೆ ಇದರಲ್ಲಿ ಬಹುಭಾಗ ಹಣ ದುರುಪಯೋಗವಾಗುತ್ತದೆ ಎಂಬುದರಲ್ಲಿ ಯಾವ ಶಂಕೆಯೂ ಇಲ್ಲ. ಇವರಿಗೆ ಒಂದು

ಕೋಟಿ ಅಲ್ಲ, ಒಂದು ಚಿಕ್ಕ ಕಾಸು, ಒಂದು ಪೈಸೆಯನ್ನೂ ಕೂಡ ಒಳ್ಳೆಯದನ್ನು ಮಾಡುತ್ತಾರೆ ಎಂದು ನಂಬಿಕೊಂಡು ಕೊಡುವಹಾಗಿಲ್ಲ ಒಂದು ವೇಳೆ ಕೊಡಬೇಕಾದ ಸಂದರ್ಭ ಬಂದರೆ ಇದುವರೆಗೆ ಏನೇನು ಅನ್ಯಾಯಗಳನ್ನು ಇವರು ಮಾಡಿದ್ದಾರೋ ಆ ಬಗ್ಗೆ ನಿಷ್ಪಕ್ಷಪಾತವಾದ ವಿಚಾರಣೆಯಾಗಿ, ಪ್ರತಿಯೊಂದು ಕಾಸನ್ನು ಹೇಗೆ ಉಪಯೋಗಿಸಿದ್ದಾರೆ. ಹೇಗೆ ದುರುಪಯೋಗಿಸಿದ್ದಾರೆ ಎಂಬುದನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ಆಮೇಲೆ ಕೊಡುವುದಕ್ಕೆ ಒಪ್ಪಬಹುದೇ ಹೊರತು ಅಲ್ಲಿಯವರೆಗೆ ಇವರಿಗೆ ಒಂದು ಬಿಡುಗಾಸನ್ನೂ ಕೂಡ ಕೊಡುವುದಕ್ಕೆ ಸಾಧ್ಯವಿಲ್ಲ ಮತ್ತು ಇವರಿಗೆ ಕೇಳುವುದಕ್ಕೆ ಅರ್ಹತೆಯೂ ಇಲ್ಲ ಎಂದು ಹೇಳುತ್ತೇನೆ.

†ಶ್ರೀ ಕೆ. ಪ್ರಭಾಕರ ರೆಡ್ಡಿ ;(ಚಾಮರಾಜಪೇಟೆ (— ಮಾನ್ಯಅಧ್ಯಕ್ಷರೆ, ಮಾನ್ಯ ಅರ್ಥಸಚಿವರು ಮಂಡಿಸಿರತಕ್ಕ ಹೆಚ್ಚುವರಿ ಬೇಡಿಕೆಯನ್ನು ವಿರೋಧಿಸಿ ನಾನು ಮಾತನಾಡುತ್ತೇನೆ. ಇವತ್ತು ನಮ್ಮ ಮಂತ್ರಿಗಳ ಟೆಲಿಫೋನ್ ಚಾರ್ಜಿಗೆ ಐದು ಲಕ್ಷ ರೂಪಾಯಿ ಕೇಳಿದ್ದಾರೆ. ಇವತ್ತು ಮಂತ್ರಿಗಳು ಮಿತವ್ಯಯ ಮಾಡಿ ಎಂದು ಹೇಳುತ್ತಾರೆ. ಇವರು ಬರೀ ಟೆಲಿಫೋನ್‌ಗೆ ಐದು ಲಕ್ಷ ರೂಪಾಯಿ ಬೇಕು ಎಂದರೆ ಎಷ್ಟರಮಟ್ಟಿಗೆ ಮಿತವ್ಯಯ ಮಾಡುತ್ತಿದ್ದಾರೆ ಎಂಬುದನ್ನು ಕೇಳಬೇಕಾಗಿದೆ. ನಮ್ಮಲ್ಲಿ ಸ್ಲಂ ಕ್ಲಿಯರ್‌ನ್ಸ್ ಬೋರ್ಡ್ ಇದೆ. ಇದರಿಂದ ಏನೂ ಪ್ರಯೋಜನವಾಗಿಲ್ಲ. ಇವತ್ತು ಬೆಂಗಳೂರಿನಲ್ಲಿ ಹಿಂದೆ ಎಷ್ಟು ಸ್ಲಂಗಳು ಇತ್ತೋ ಅದರ ಮೂರರಷ್ಟು ಸ್ಲಂಗಳು ಹೆಚ್ಚಾಗಿವೆ ಚುನಾವಣೆಗೋಸ್ಕರವಾಗಿ ಈ ಸ್ಲಂಗಳ ನಿರ್ಮಾಣ ಮಾಡುತ್ತಿರುವಹಾಗೆ ಕಾಣುತ್ತಿದೆ. ಈ ಸ್ಲಂ ಕ್ಲಿಯರೆನ್ಸ್ ಬೋರ್ಡಿನವರು ಸ್ಲಂ ಡಸಲಪ್‌ಮೆಂಟ್ ಮಾಡಿದ್ದಾರೆ. ಸರಿಯಾದ ರೀತಿಯಲ್ಲಿ ಈ ಬೋರ್ಡಿನಲ್ಲಿ ಹಣ ಉಪಯೋಗವಾಗುತ್ತಾ ಇಲ್ಲ ನನ್ನ ಕ್ಷೇತ್ರದಲ್ಲಿ ಕೆಲವು ಸ್ಲಂಗಳು 15–20 ವರ್ಷದಿಂದ ಹಾಗೆಯೇ ಇವೆ. ಅದನ್ನು ಬೋರ್ಡಿನವ್ಯಾಪ್ತಿಗೆ ಸೇರಿಸಿಲ್ಲ. ಹಿಂದೆ ನಡೆದಂತಹ ವಿಧಾನ ಸಭಾ ಚುನಾವಣೆ ಸಮಯದಲ್ಲಿ ಸ್ಲಂನಲ್ಲಿ ವಾಸಮಾಡುತ್ತಿರುವವರಿಗೆ ಸೈಟುಗಳನ್ನು ಕೊಡುತ್ತೇವೆ, ನಲ್ಲಿ ಹಾಕಿಸುತ್ತೇವೆ ಎಂದು ಹೇಳಿದ್ದರು. ಏನನ್ನೂ ಮಾಡಿಲ್ಲ, ಮತ್ತೆ ಈಗ ಲೋಕಸಭಾ ಚುನಾವಣೆ ಸಮಯದಲ್ಲೂ ಅದೇ ಮಾತನ್ನು ಹೇಳಿದ್ದಾರೆ. ನೀವು ನಮಗೆ ಓಟು ಕೊಟ್ಟರೆ ಸೈಟು ಕೊಡುತ್ತೇವೆ, ಇಲ್ಲದೇ ಇದ್ದರೆ ಕೊಡುವುದಿಲ್ಲ ಎಂದು ಕೆಲವು ಕಡೆ ಹೇಳಿದ್ದಾರೆ. ಈ ಸ್ಲಂ ಕ್ಲಿಯರೆನ್ಸ್ ಬೋರ್ಡ್ ಕೇವಲ ಒಂದು ಪಾರ್ಟಿ ಗೋಸ್ಕರ ಇದೆಯೇ ಹೊರತು ಇದರಿಂದ ಸಾಮಾನ್ಯ ಜನರಿಗೆ ಅನುಕೂಲವಾಗುತ್ತಿಲ್ಲ. ಸ್ಲಂಗಳಿಗೆ ಮಂತ್ರಿಗಳ ಹೆಸರನ್ನು ಇಟ್ಟಿದ್ದಾರೆ. ಇಂದಿರಾ ನಗರ, ದೇವರಾಜ ನಗರ ಎಂದು ಹೆಸರುಗಳನ್ನು ಇಟ್ಟಿದ್ದಾರೆ. ತಿಮ್ಮೇನಹಳ್ಳಿ ಗ್ರಾಮದಲ್ಲಿ ಸ್ಲಂ ಕ್ಲಿಯರೆನ್ಸ್ ಬೋರ್ಡ್ ಛೇರ್ಮನ್ನರು ಹೋಗಿ ನೀವು ಏನಾದರೂ ಕಾಂಗ್ರೆಸ್ಸಿಗೆ ಓಟು ಕೊಡದೇ ಇದ್ದರೆ ನಿಮ್ಮ ಗುಡಿಸಲುಗಳನ್ನು ತೆಗೆಸುತ್ತೇವೆ ಎಂದು ಹೇಳಿದ್ದಾರೆ.

ವೃದ್ಧಾಪ್ಯ ವೇತನದ ವಿಷಯ ಹೇಳುವುದಾದರೆ, ಎಷ್ಟೋ ಜನರಿಗೆ ಇದರ ಪ್ರಯೋಜನ ಸಿಗುತ್ತಿಲ್ಲ. ಈ ವೃದ್ಧಾಪ್ಯ ವೇತನ ಪಡೆಯಲು ಅರ್ಜಿ ಹಾಕಿ ತಾಲ್ಲೂಕು ಆಫೀಸಿಗೂ ಮನೆಗೂ ತಿರುಗುವಷ್ಟರಲ್ಲಿ ಎಷ್ಟೋ ಜನ ಪ್ರಾಣವನ್ನು ಕಳೆದುಕೊಂಡಿದ್ದಾರೆ. ಈ ರೀತಿ ವೃದ್ಧಾಪ್ಯ ವೇತನದ ವಿತರಣೆ ಕಾರ್ಯ ನಡೆಯುತ್ತಿದೆ. ಇದಕ್ಕಿಂತ ನಾಚಿಕೆಗೇಡಿನ ವಿಚಾರ ಯಾವುದೂ ಇಲ್ಲ.

ತುರ್ತುಪರಿಸ್ಥಿತಿ ಸಮಯದಲ್ಲಿ ಕಾರ್ಮಿಕರಿಗೆ ನೀಡಬೇಕಾದ ಬೋನಸ್ಸನ್ನು ಕೊಟ್ಟಿಲ್ಲ. ಎಷ್ಟೋ ಕಾರ್ಮಿಕರು ತುರ್ತುಪರಿಸ್ಥಿತಿ ಸಮಯದಲ್ಲಿ ನಿರುದ್ಯೋಗಿಗಳಾಗಿದ್ದಾರೆ, ಮತ್ತು ಬೋನಸ್ ಕೇಳಿದಾಗ ತುರ್ತುಪರಿಸ್ಥಿತಿ ನೆಪದಲ್ಲಿ ಕಾಂಗ್ರೆಸ ಸರ್ಕಾರ ಕಾರ್ಮಿಕರಿಗೆ ಲಾಟಿ ಏಟು ಹೊಡೆಸಿದೆ.

ಇವತ್ತು ನಮ್ಮ ಸರ್ಕಾರದವರು ಇಂಡಸ್ಟ್ರಿಗಳ ಬಗ್ಗೆ ಮಾಡುತ್ತಿರುವ ವೆಚ್ಚದಿಂದ ಯಾವ ಕಾರ್ಮಿಕರಿಗೂ ಅನುಕೂಲವಾಗುತ್ತಿಲ್ಲ ಕಾರ್ಮಿಕರಿಗೆ ಬಹಳ ಅನ್ಯಾಯ ಮಾಡಿದ್ದಾರೆಂಬುದನ್ನು ಇದೇ ಬೆಂಗಳೂರಿನಲ್ಲಿ ಮೊನ್ನೆ ನಡೆದ ಚುನಾವಣೆಯಲ್ಲಿ ತೋರಿಸಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಕಾರ್ಮಿಕರು ಇವತ್ತು ಚನ್ನಾಗಿ ಬುದ್ಧಿ ಕಲಿಸಿದ್ದಾರೆ.

4-30 P. M.

ಇನ್ನು ಇನ್‌ಫಾರ್ಮೇಷನ್ ಮತ್ತು ಪಬ್ಲಿಸಿಟಿ ಬಗ್ಗೆ ಹೇಳುವುದಾದರೆ, ಇದು ಸಾಮಾನ್ಯ ಜನತೆಗೆ ಅಲ್ಲ. ಇದು ಒಂದು ಪಕ್ಷದ ಪ್ರಚಾರಕ್ಕಾಗಿ, ತಮ್ಮ ಒಂದು ಖಾತೆಯ ಪ್ರಚಾರಕ್ಕಾಗಿ ಇದೆಯೇ ಹೊರತು ಸಾಮಾನ್ಯ ಜನತೆಯ ಅಥವಾ ದೇಶದ ಹಿತದೃಷ್ಟಿಯಿಂದ ಅಲ್ಲ. ಹಿಂದೆ ಇದ್ದಂತಹ ವಾರ್ತಾ ಸಚಿವರು ಎಷ್ಟು ಜಾಹಿರಾತುಗಳನ್ನು ನೀಡಿದ್ದರು. ಇವತ್ತು ಅದರ ಬಜೆಟ್ ಏನಾಗಿದೆ ಎಂಬುದನ್ನು ಯೋಚನೆ ಮಾಡಿ ನೋಡಬೇಕು. ಇವತ್ತು ಕಾಂಗ್ರೆಸ್ಸಿನ ಪ್ರಚಾರಕ್ಕಾಗಿ ಯಾವ ಕಾರ್ಯಕ್ರಮವನ್ನೇ ಮಾಡಲಿ ಅದಕ್ಕೆ ವಾರ್ತಾ ಇಲಾಖೆ ಸಿದ್ಧವಾಗಿ ಇರುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಗರೀಬಿ ಹಠಾವೋಗೆ ಎಷ್ಟು ಹಣ ಕೊಟ್ಟಿದ್ದಾರೆ ?

ಶ್ರೀ ಕೆ. ಪ್ರಭಾಕರ ರೆಡ್ಡಿ.—ವಾರ್ತಾ ಇಲಾಖೆಯಲ್ಲಿ ಬಜೆಟ್ ಇಲ್ಲದಿದ್ದರೂ ಸಹ ಹಿಂದೆ ಇದ್ದಂತಹ ಸಚಿವರು ಬಹಳಷ್ಟು ಜಾಹಿರಾತುಗಳನ್ನು ಕೊಟ್ಟಿದ್ದಾರೆ. ಯುವಕ ಕಾಂಗ್ರೆಸ್ ಎಂಬುದು ವಾರ್ತಾ ಇಲಾಖೆಯ ಸ್ವತ್ತಾಗಿದೆ. ಈ ರೀತಿಯಾಗಿ ತಮ್ಮ ಪಕ್ಷದ ಪ್ರಚಾರಕ್ಕಾಗಿ ವಾರ್ತಾ ಇಲಾಖೆಯನ್ನು ಉಪಯೋಗಿಸಿದ್ದಾರೆ. ಆದಕಾರಣ ಈ ಬಗ್ಗೆ ಹೆಚ್ಚಿನ ಬಜೆಟ್ ಕೊಟ್ಟಿರುವುದನ್ನು ನಾನು ಖಂಡಿಸುತ್ತೇನೆ. ಚುನಾವಣಾ ಸಂದರ್ಭದಲ್ಲಿ ಸರ್ಕಾರಿ ವಾಹನಗಳನ್ನು ಮತ್ತು ಸರ್ಕಾರಿ ಸ್ವತ್ತುಗಳನ್ನು ಉಪಯೋಗ ಮಾಡಿಕೊಂಡಿದ್ದಾರೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಯಾವ ವಿಚಾರವನ್ನಾದರೂ ಹೇಳಬೇಕಾದರೆ ಜವಾಬ್ದಾರಿಯುತವಾಗಿ ನಿರ್ದಿಷ್ಟ ನಿದರ್ಶನಗಳನ್ನು ಕೊಟ್ಟು ಇಂಥಿಂಥ ಕೆಲಸಗಳನ್ನು ಮಾಡಿದ್ದಾರೆ ಎಂದು ಹೇಳಬೇಕೇ ಹೊರತು ಸುಮ್ಮಸುಮ್ಮನೆ ಸುಬ್ಬರಾಯನ ಕೆರೆಯಲ್ಲಿ ನಿಂತು ಭಾಷಣ ಮಾಡಿದ ಹಾಗೆ ಮಾಡುವುದು ಸೂಕ್ತವಲ್ಲ. ಒಂದು ವೇಳೆ ಸ್ಪಷ್ಟವಾದ ನಿದರ್ಶನಗಳನ್ನು ನೀಡಿದರೆ ಅದನ್ನು ಸರ್ಕಾರ ಸಂತೋಷದಿಂದ ಅಂಗೀಕರಿಸಿ ಖಂಡಿತ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತದೆ. ಆದಕಾರಣ ಯಾವ ಆಧಾರಗಳೂ ಇಲ್ಲದೆ ಅನವಶ್ಯಕವಾದ ಮಾತುಗಳನ್ನು ಈ ಸಭೆಯಲ್ಲಿ ಮಾತನಾಡುವುದನ್ನು ಕಡಿಮೆ ಮಾಡಿ ಎಂದು ಹೇಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಮ್ಮ ತಂದೆಯ ವಯಸ್ಸಾಗಿರತಕ್ಕ ಮಾನ್ಯ ಚನ್ನಬಸಪ್ಪನವರು ಸುಬ್ಬರಾಯನ ಕೆರೆಯಲ್ಲಿ ಭಾಷಣ ಮಾಡಿದ ಹಾಗೆ ಮಾಡಬಾರದೆಂಬ ಒಂದು ಮಾತನ್ನು ಹೇಳಿದರು. ಅಂದಾಗ ಅವರ ಅಭಿಪ್ರಾಯದಲ್ಲಿ ವಿರೋಧಪಕ್ಷದವರ ಭಾಷಣ ವೆಂದರೆ ಸುಬ್ಬರಾಯನ ಕೆರೆ ಭಾಷಣ ಎನ್ನುವುದಾದರೆ ಯಾವ ರೀತಿ ಭಾಷಣ ಮಾಡಬೇಕೆಂದ ಟೇಪ್ ರೆಕಾರ್ಡ್ ಮಾಡಿ ಅಧ್ಯಕ್ಷರ ಮೂಲಕ ತಿಳುವಳಿಕೆ ಕೊಡಬೇಕೆಂದು ಅಧ್ಯಕ್ಷರ ಮುಖಾಂತರ ಕೇಳ ಬಯಸುತ್ತೇನೆ. ಅವರು ಆ ಮಾತನ್ನು ಖಂಡಿತವಾಗಿ ವಾಪಸ್ಸು ತೆಗೆದುಕೊಳ್ಳಬೇಕು. ಆ ಮಾತು ಕೇವಲ ಒಬ್ಬ ವ್ಯಕ್ತಿಗೆ ಅಲ್ಲ, ವಿರೋಧ ಪಕ್ಷಕ್ಕೆ ಅವಮಾನಕರವಾದದ್ದು. ಇಂಥ ತೀಕ್ಷ್ಣವಾದ ಮಾತನ್ನು ಸಭೆಯಲ್ಲಿ ಉಪಯೋಗಿಸಿದರೆ ನಾವುಗಳು ಅದನ್ನು ಸಹಿಸುವುದಕ್ಕೆ ಆಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಚನ್ನಬಸಪ್ಪನವರು ಮೈಸೂರಿನ ಸುಬ್ಬರಾಯನ ಕೆರೆಯಲ್ಲಿ ಭಾಷಣ ಮಾಡಿ ಇಲ್ಲಿಗೆ ಬಂದ ಪಕ್ಷದವರು ಅಂತ ಕಾಣುತ್ತದೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ವಿರೋಧ ಪಕ್ಷಗಳ ಶಕ್ತಿ ಸಾಮರ್ಥ್ಯಗಳಿಂದಲೇ ನಮ್ಮ ಶಕ್ತಿ ಬೆಳೆಯುವುದು. ವಿರೋಧ ಪಕ್ಷ ಇಲ್ಲದಿದ್ದರೆ ನಮ್ಮ ಶಕ್ತಿ ಪ್ರದರ್ಶನವಾಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಯಾವಾಗ ಅರ್ಥವಾಯಿತು ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—5 ತಿಂಗಳ ಹಿಂದೆ, 2 ವರ್ಷದ ಹಿಂದೆ ಹೇಳಿದ್ದೇನೆ. ಅದನ್ನು ಜ್ಞಾಪಕ ಮಾಡಿಕೊಳ್ಳಿ. ನೀವು ಎಷ್ಟು ಶಕ್ತಿ ಪ್ರದರ್ಶನ ಮಾಡುತ್ತೀರೋ ಅದರ ಮೇಲೆ ನಮ್ಮ ಶಕ್ತಿಯು ಪ್ರದರ್ಶನವಾಗುತ್ತದೆ ಆದುದರಿಂದ ವಿರೋಧ ಪಕ್ಷವನ್ನು ಅಲ್ಲಗಳೆಯಬೇಕೆಂಬ ಉದ್ದೇಶ ಹಿಂದೆಯೂ ಇರಲಿಲ್ಲ, ಮುಂದೆಯೂ ಇರುವುದಿಲ್ಲ. ವಿರೋಧ ಪಕ್ಷಗಳು ಇರಬೇಕು, ಚೆನ್ನಾಗಿ ಕೆಲಸ ಮಾಡಬೇಕು ಮತ್ತು ಹೆಚ್ಚು ಪ್ರತಿಭಾವಂತವಾಗಿ ಬೆಳೆಯಬೇಕೆಂಬುದೇ ನಮ್ಮ ಉದ್ದೇಶ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ವಿರೋಧ ಪಕ್ಷದ..........

ಅಧ್ಯಕ್ಷರು.—ಅವರು ಒಳ್ಳೆಯ ಭಾವನೆಯನ್ನಿಟ್ಟುಕೊಂಡು ಹೇಳಿದ್ದಾರೆಂದರೆ ಆಯಿತು ತಾವು ಕುಳಿತುಕೊಳ್ಳಬೇಕು.

ಶ್ರೀ ಕೆ. ಪ್ರಭಾಕರ ರೆಡ್ಡಿ.—ಅಧ್ಯಕ್ಷರೆ, ಮಾನ್ಯ ಸಂಜಯಗಾಂಧಿಯವರು ಪ್ರಧಾನ ಮಂತ್ರಿಗಳಲ್ಲ, ರಾಷ್ಟ್ರಪತಿಗಳೇನು ಅಲ್ಲ. ಅವರು ಬೆಂಗಳೂರಿಗೆ ಬಂದಾಗ ಅವರ ಕಾರ್ಯ ಚಟುವಟಿಕೆಗಳನ್ನು ಚಿತ್ರಮಂದಿರದ ನ್ಯೂಸ್‌ರೀಲ್‌ಗಳಲ್ಲಿ ಪ್ರದರ್ಶನ ಮಾಡಿದ್ದಾರೆಂಬ ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಕೊಣಂದೂರು ಲಿಂಗಪ್ಪ.—ಅಂಥವುಗಳನ್ನು ಇನ್ನು ಮುಂದೆ ಈ ರಾಜ್ಯದಲ್ಲಿ ಪ್ರದರ್ಶನ ಮಾಡಬಾರದು. ಆ ನ್ಯೂಸ್ ರೀಲನ್ನು ವಾಪಸ್ಸು ತೆಗೆದುಕೊಂಡು ಬೇಕಾದರೆ ನಿಮ್ಮ ಮನೆಗಳಲ್ಲಿ ಹಾಕಿಕೊಳ್ಳಿ.

ಶ್ರೀ ಕೆ. ಪ್ರಭಾಕರ ರೆಡ್ಡಿ.—ವಾರ್ತಾ ಇಲಾಖೆಯನ್ನು ತಮ್ಮ ಪಕ್ಷದ ದೃಷ್ಟಿಯಲ್ಲಿ ಉಪಯೋಗಿಸಿಕೊಂಡಿದ್ದಾರೆಂಬುದಕ್ಕೆ ಇದು ಒಂದು ಉದಾಹರಣೆ. ಇವತ್ತು ಸಂಜಯಗಾಂಧಿ ಇಂದಿರಾಗಾಂಧಿಯ ಪುತ್ರನಾಗಿರಬಹುದು, ಆದರೆ ರಾಷ್ಟ್ರದಲ್ಲಿ ಆತನಿಗೆ ಯಾವ ಅಧಿಕಾರವೂ ಇಲ್ಲ. ಆದರೆ ಅವರು ಇಲ್ಲಿಗೆ ಬಂದಾಗ ನ್ಯೂಸ್ ರೀಲ್‌ನಲ್ಲಿ ಅವರ ಪ್ರದರ್ಶನಕ್ಕಾಗಿ ವಾರ್ತಾ ಇಲಾಖೆಯನ್ನು ದುರುಪಯೋಗಪಡಿಸಿಕೊಂಡಿದ್ದಾರೆಂದು ಹೇಳುತ್ತೇನೆ. ಸಂಜಯಗಾಂಧಿಯವರ ಜೀವನ ಚರಿತ್ರಾರ್ಹವಾದುದೆಂದು ಸೂರ್ಯ ಮತ್ತಿತರ ಪತ್ರಿಕೆಗಳಲ್ಲಿ ವಾರ್ತಾ ಇಲಾಖೆಯು ಜಾಹಿರಾತುಗಳನ್ನು ಕೊಟ್ಟಿದೆ.

ಶ್ರೀ ಕೊಣಂದೂರು ಲಿಂಗಪ್ಪ.—ಈ ಸ್ಪೆಸಿಫಿಕ್ ಚಾರ್ಜ್ ಬಗ್ಗೆ ಈ ಸರ್ಕಾರ ರಾಜೀನಾಮೆ ಕೊಡುವುದು ನ್ಯಾಯ ಅಲ್ಲವೆ ?

ಶ್ರೀ ಕೆ. ಪ್ರಭಾಕರ ರೆಡ್ಡಿ.—ಈ ರೀತಿಯಾಗಿ ವಾರ್ತಾ ಇಲಾಖೆಯನ್ನು ಒಬ್ಬ ವ್ಯಕ್ತಿಯ ದೃಷ್ಟಿಯಿಂದ ಮತ್ತು ತಮ್ಮ ಪಕ್ಷದ ದೃಷ್ಟಿಯಿಂದ ದುರುಪಯೋಗ ಪಡಿಸಿಕೊಂಡಿದ್ದಾರೆಂದು ಹೇಳಬಯಸುತ್ತೇನೆ ನಮ್ಮ ಮಾನ್ಯ ಲಿಂಗಪ್ಪನವರು ಮಾತನಾಡುತ್ತಾ ಹೇಳಿದ ಹಾಗೆ, ಈ ತುರ್ತು ಪರಿಸ್ಥಿತಿಯಲ್ಲ ಕಾಂಗ್ರೆಸ್ ಪಕ್ಷದಲ್ಲಿ ನಡೆದ ಹಾಗೆ ಅರಣ್ಯ ಇಲಾಖೆಯಲ್ಲೂ ಸಹ ಅನೇಕ ಅವ್ಯವಹಾರಗಳು ನಡೆದಿವೆ. ಆ ಬಗ್ಗೆ ಏನಾದರೂ ತನಿಖೆ ಮಾಡಿದ್ದೀರಾ ? ಅರಣ್ಯ ಇಲಾಖೆಯ ಮುಖ್ಯಾಧಿಕಾರಿಗಳು ಮಂತ್ರಿಗಳ ಮನೆಯಲ್ಲಿರುತ್ತಾರೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಅಧಿಕಾರಿಗಳು ಮಂತ್ರಿಗಳು ಮನೆಗೆ ಹೋಗಬಾರದೇ ?

ಶ್ರೀ ಕೆ. ಪ್ರಭಾಕರ ರೆಡ್ಡಿ.—ಅವರು ಹೋಗುವುದು ಯಾವುದಾದರೂ ತಮ್ಮ ಸ್ವಂತ ವಿಚಾರಕ್ಕಾಗಿಯೇ ಹೊರತು ತಮ್ಮ ಇಲಾಖೆಯ ವಿಚಾರಕ್ಕಾಗಿ ಅಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ತಮ್ಮ ಸರ್ಕಾರದ ಮೇಲೆ 99 ಆಪಾದನೆಗಳನ್ನು ಕೇಂದ್ರಕ್ಕೆ ಕಳುಹಿಸಿದ ಮೇಲೆ, ಅದನ್ನು ಬಿಚ್ಚಿನೋಡಿದರೆ ಸಾಕು ಗೊತ್ತಾಗುತ್ತದೆ, ನಮ್ಮನ್ನೇನು ಕೇಳಬೇಕಾಗಿಲ್ಲ.

ಇನ್ನು ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯ ಬಗ್ಗೆ ಹೆಚ್ಚುವರಿ ಹಣವನ್ನು ನೀಡಬೇಕು ಎಂದು ಕೇಳಿದಪ್ಪರೆ. ಇವರು ಬಡ ಜನರಿಗೆ ಸೈಟು ಕೊಡುತ್ತೇವೆಂದು ಸುಮಾರು 50 ಸಾವಿರ ಅರ್ಜಿಗಳನ್ನು ಒಂದು ಅರ್ಜಿಗೆ ಒಂದು ರೂಪಾಯಿನಂತೆ ಕೊಟ್ಟರು. ಕೊನೆಯಲ್ಲಿ ಅರ್ಜಿಗಳನ್ನು ಬ್ಲಾಕ್ ಮಾರ್ಕೆಟಿನಲಿ 3 ರೂಪಾಯಿಗಳವರೆಗೆ ಮಾರಾಟ ಮಾಡಲಾಗಿದೆ. ಇವರು ಎಷ್ಟು ಜನಕ್ಕೆ ಅರ್ಜಿಗಳನ್ನು ಕೊಟ್ಟರು ಎಷ್ಟು ಜನರಿಗೆ ಸೈಟುಗಳನ್ನು ಕೊಟ್ಟಿದ್ದಾರೆ ಎನ್ನುವುದನ್ನು ನೋಡುವುದಾದರೆ, ಬಹಳ ಕಡಿಮೆ ಜನರಿಗೆ ಸೈಟುಗಳನ್ನು ಕೊಟ್ಟಿದ್ದಾರೆ. ಇಷ್ಟು ಹೇಳುವುದಕ್ಕೆ ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.(ಸಾಗರ)— ಅಧ್ಯಕ್ಷರೇ, ಮಾನ್ಯ ಅರ್ಥಸಚಿವರು ಮಂಡಿಸಿರುವ ಹೆಚ್ಚುವರಿ ಬೇಡಿಕೆ ಮತ್ತು ಮುಂದಿನ ವರ್ಷದ ನಾಲ್ಕು ತಿಂಗಳ ಬೇಡಿಕೆ ಎರಡನ್ನು ಕೂಡ ವಿರೋಧ ಮಾಡುತ್ತಾ, ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ನಾವು ಇವತ್ತು ಒಂದು ಹೊಸ ವಾತಾವರಣದಲ್ಲಿ ಸೇರಿದ್ದೇವೆ. ನಮ್ಮ ಸರ್ಕಾರದವರು ಬಹಳ ಅಭಿವೃದ್ಧಿಯನ್ನು

ಸಾಧನೆ ಮಾಡಿದ್ದೇವೆ, ಎಂದು ಈ ಬಗ್ಗೆ ನಾವು ಬಹಳ ಹಣವನ್ನು ಖರ್ಚು ಮಾಡಿದ್ದೇವೆ ಅದಕ್ಕೆ ಸಭೆಯ ಅನುಮತಿಯನ್ನು ಕೇಳಿ ಈ ಒಂದು ಬೇಡಿಕೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ, ಇವರು ಮಾಡಿರತಕ್ಕ ಖರ್ಚುಗಳನ್ನು ನಮಗ್ರವಾಗಿ ಪರಿಶೀಲನೆ ಮಾಡಿ ನೋಡಿದರೆ ನಮಗೆ ಒಂದು ಅಂಶ ಕಂಡುಬರುತ್ತದೆ. ಏನೆಂದರೆ, ಸ್ವಲ್ಪ ದಿವಸದ ಹಿಂದೆ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಮತದಾರರನ್ನು ಒಲಿಸಿಕೊಳ್ಳತಕ್ಕ ಏಕೈಕ ದೃಷ್ಟಿಯಿಂದ ಈ ಖರ್ಚನ್ನು ಮಾಡಿದ್ದಾರೆ ಎಂದು ನಾವು ಒಟ್ಟಿನಲ್ಲಿ ಹೇಳಬಹುದು. ಅವರ ಹೆಚ್ಚುವರಿ ಬೇಡಿಕೆಗಳನ್ನು ನಾವು ಕೂಲಂಕಷವಾಗಿ ನೋಡುವುದಾದರೆ ಹೆಚ್ಚುವರಿ ಹಣ, ವರ್ಷದ ಪ್ರಾರಂಭದಲ್ಲಿ ಅವರ ಯೋಜನೆಗಳಲ್ಲಿ ಮತ್ತು ಅವರ ಯೋಜನೆಗಳಲ್ಲಿ ಮತ್ತು ಅವರ ಕಾರ್ಯಕ್ರಮಗಳಲ್ಲಿ ಅಡಕವಾಗಿರಲಿಲ್ಲ. ಚುನಾವಣೆ ಸಮೀಪದಲ್ಲಿ ಎಲ್ಲೆಲ್ಲಿ ಇವರು ಪ್ರಚಾರ ಭಾಷಣಕ್ಕೆ ಹೋಗಿದ್ದರೋ, ಹೋದಂಥ ಸಮಯದಲ್ಲಿ ಜನರಿಂದ ವೋಟನ್ನು ಪಡೆಯುವ ಒಂದು ಉತ್ಸಾಹದಿಂದ ಮತ್ತು ದಾಹದಿಂದ ಹೆಚ್ಚು ಹಣವನ್ನು ಖರ್ಚುಮಾಡತಕ್ಕ ಆಜ್ಞೆಗಳನ್ನು ಭರವಸೆಗಳನ್ನು ಜನರಿಗೆ ಕೊಟ್ಟರು. ಭರವಸೆಗಳನ್ನು ಈಡೇರಿಸಿಕೊಳ್ಳುವ ದೃಷ್ಟಿಯಿಂದ ಹೆಚ್ಚುವರಿ ಹಣವನ್ನು ಖರ್ಚುಮಾಡಬೇಕಾಯಿತು, ಮತ್ತು ಅದನ್ನು ಈಗ ಕೇಳುತ್ತಿದ್ದಾರೆ. ಇದು ಆಗಬಾರದು. ಮಾನ್ಯ ಮುಖ್ಯಮಂತ್ರಿಗಳು ಅನೇಕ ಸಭೆಗಳಲ್ಲಿ ಕೊಟ್ಟಂಥ ಭರವಸೆಗಳನ್ನು ನಾವು ಕೇಳಿದ್ದೇವೆ ಉಡುಪಿಯಲ್ಲಿ. ಸಾಗರದಲ್ಲಿ, ಶಿವಮೊಗ್ಗದಲ್ಲಿ, ಮತ್ತು ಸಿರ್ಸಿಯಲ್ಲಿ ಕೊಟ್ಟಂಥ ಭರವಸೆಗಳನ್ನು ನಾವು ಕೇಳಿದ್ದೇವೆ. ಈ ಎಲ್ಲಾ ಭರವಸೆಗಳನ್ನು ಚುನಾವಣೆಯ ಕಾಲದಲ್ಲಿ ಕೊಟ್ಟು ಜನರನ್ನು ವಂಚಿಸತಕ್ಕ ಕೆಲಸವನ್ನು ಮಾಡುವುದಾದರೆ ದೇಶದಲ್ಲಿ ಪ್ರಜಾಪ್ರಭುತ್ವ ಹೇಗೆ ನಡೆಯುವುದಕ್ಕೆ ಸಾಧ್ಯ ? ಅಧಿಕಾರದಲ್ಲಿದ್ದಂಥ ಸಂದರ್ಭದಲ್ಲಿ ಚುನಾವಣೆಗಳು ಬರುತ್ತವೆ, ಬಂದಾಗ ಇಂಥ ಭರವಸೆಗಳನ್ನು ಜನರಿಗೆ ಕೊಟ್ಟರೆ ಸ್ವಾಭಾವಿಕವಾಗಿ, ಹಿಂದುಳಿದಿರತಕ್ಕ ಜನರಲ್ಲಿ ಒಂದು ರೀತಿಯ ಆಸೆ ಉದ್ಭವವಾಗುತ್ತದೆ. ನಮ್ಮ ದೇಶದಲ್ಲಿ ಫ್ರಿ ಮತ್ತು ಫೇರ್ ಎಲೆಕ್ಷನ್ ನಡೆಯಬೇಕು ಮುಗ್ಧ ವಾತಾವರಣದಲ್ಲಿ ಚುನಾವಣೆಗಳನ್ನು ನಡೆಸಬೇಕು. ಪ್ರಜಾಪ್ರಭುತ್ವದಲ್ಲಿ ಇದು ಅತಿ ಮುಖ್ಯವಾದ ವ್ಯವಸ್ಥೆ ನೀವು ಈಗ ಅಧಿಕಾರದಲ್ಲಿದ್ದೀರಿ, ನೀವು ಹೇಳಿದಂಥ ಮಾತನ್ನು ಜನ ಕೇಳುತ್ತಾರೆ. — ಮತ್ತು ನಂಬುತ್ತಾರೆ. ಇವರು ಚುನಾವಣೆಯ ಕಾಲದಲ್ಲಿ ಆಜ್ಞೆಗಳನ್ನು ಹೊರಡಿಸಿ ಹಣವನ್ನು ಖರ್ಚು ಮಾಡುತ್ತಾರೆಂದರೆ ಇದು ನಾಚಿಕೆಗೇಡಿನ ಪ್ರಸಂಗ. ಮುಕ್ತ ವಾತಾವರಣದಲ್ಲಿ ಚುನಾವಣೆಗಳು ನಡೆಯಬೇಕು ಎಂದು ಹೇಳುತ್ತಾರೆ, ಏಕೆ ? ಅಧಿಕಾರ ಇರುವುದು ಶಾಶ್ವತವಲ್ಲ. ಜೀವವೇ ಶಾಶ್ವತವಲ್ಲ, ಅಧಿಕಾರ ಖಂಡಿವಾಗಿಯೂ ಇರುವುದಿಲ್ಲ, ತಲೆಯ ಮೇಲೆ ಹೊಯ್ದಂಥ ನೀರು ಕೆಳಗೆ ಬರಬೇಕು. ಅಧಿಕಾರದ ಮದದಲ್ಲಿ ಅಮಲಿನಲ್ಲಿ ಏನೇನೋ ಮಾಡುವುದಕ್ಕೆ ಹೋಗಬೇಡಿ ಎಂದು ನಾನು ಮೊದಲೆ ಹೇಳಿದ್ದೇನೆ. ಮಾನ್ಯ ಎಸ್. ಎಂ. ಕೃಷ್ಣ ಅವರು ಸಂಸದೀಯ ಸಚಿವರಾಗಿ ಸಂಬಂಧಪಟ್ಟ ವಿಧೇಯಕವನ್ನು ಮಂಡಿಸುವ ಕಾಲದಲ್ಲಿ ಈ ಮಾತನ್ನು ನಾನು ಹೇಳಿದ್ದೇನೆ. ನಿಮ್ಮ ಅಧಿಕಾರ ಶಾಶ್ವತವಾಗಿ ಉಳಿಯುತ್ತದೆ ಎಂದು ತಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳುವುದಕ್ಕೆ ಆತುರಾತುರವಾಗಿ ಅನೇಕ ತರಹದ ಶಾಸನಗಳನ್ನು ತರಬಾರದು ಎಂದು ಹೇಳಿದ್ದೇನೆ. ಈಗ ಕೇಂದ್ರ ಸರ್ಕಾರದಲ್ಲಿ ಕಾಂಗ್ರೆಸ್ ಸರ್ಕಾರ ತನ್ನ ಅಧಿಕಾರವನ್ನು ಕಳೆದುಕೊಂಡಿದೆ. ಶ್ರೀಮತಿ ಇಂದಿರಾಗಾಂಧಿಯವರು ಹೊಸ ಸರ್ಕಾರ ಬಂದು ತುರ್ತು ಪರಿಸ್ಥಿತಿಯನ್ನು ರದ್ದುಮಾಡುವುದಕ್ಕೆ ಮುಂಚೆ ಹಂಗಾಮಿ ಸರ್ಕಾರದಿಂದ ತುರ್ತು ಪರಿಸ್ಥಿತಿಯನ್ನು ರದ್ದುಗೊಳಿಸಿದರು. ಯಾವ ತುರ್ತು ಪರಿಸ್ಥಿತಿಯ ಕೆಳಗೆ ಯಾವ ಯಾವ ಕಾನೂನುಗಳನ್ನು ಮಾಡಿದರೋ ಆ ಕಾನೂನುಗಳಿಂದ ಈಗ ಪ್ರಧಾನ ಮಂತ್ರಿಯಾಗಿರುವ ಮೊರಾರ್ಜಿಯವರನ್ನು ಜಯಪ್ರಕಾಶ್‌ನಾರಾಯಣ್ ಅವರನ್ನು ಚಂದ್ರಶೇಖರ್ ಅವರನ್ನು ಮತ್ತು ವಾಜಪೇಯಿಯವರನ್ನು ಜೈಲಿನಲ್ಲಿ ಬಂಧನಕ್ಕೆ ಒಳಪಡಿಸಿದರು. ಅದೇ ಕಾನೂನಿಂದ ಹಳೆಯ ಪ್ರಧಾನಿಯವರನ್ನು ಮತ್ತು ಅವರ ಮಗನನ್ನು ಬಂಧನಕ್ಕೆ ಒಳಪಡಿಸುವುದಕ್ಕೆ ಸಾಧ್ಯವಿತ್ತು. ಈಗ ತುರ್ತು ಪರಿಸ್ಥಿತಿಯನ್ನು ತೆಗೆದಿದ್ದು ಕೇವಲ ದೇಶದ ದೃಷ್ಟಿಯಿಂದಲ್ಲ, ತಾವು ಸ್ವಂತ ಬಚಾವಣೆಯಾಗುವುದಕ್ಕೆ ತುರ್ತು ಪರಿಸ್ಥಿತಿಯನ್ನು ರದ್ದುಗೊಳಿಸಿದರು. ಅವರು ತುರ್ತು ಪರಿಸ್ಥಿತಿಯನ್ನು ರದ್ದುಗೊಳಿಸತಕ್ಕ ಸಂದರ್ಭ ಇರಲಿಲ್ಲ. ಅವರು ತಮ್ಮ ಹಂಗಾಮಿ ಸರ್ಕಾರದಿಂದ ಮೇಜರ್ ಪಾಲಿಸಿಗಳನ್ನು ಮಾಡತಕ್ಕ ಅಧಿಕಾರ ಇರಲಿಲ್ಲ. ಆದರೂ ಮಾಡಿದ್ದಾರೆ. ಕಾಂಗ್ರೆಸ್ ದೇಶದಲ್ಲಿ ಅಧಿಕಾರ ಬಿಟ್ಟು ಇಳಿಯುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿದು ಜನರಲ್ಲಿ ಒಂದು ರೀತಿಯ ಭಯವನ್ನು ಹುಟ್ಟಿಸಿ ತುರ್ತುಪರಿಸ್ಥಿತಿಯಲ್ಲಿ ಹೆಚ್ಚು ಕಡಿಮೆ

ಪ್ರಜಾಪ್ರಭುತ್ವ ನಾಶವಾಗುತ್ತದೆ ಎನ್ನತಕ್ಕ ಕಲ್ಪನೆಯನ್ನು ಕೆತ್ತಲನ್ನು ಉಂಟುಮಾಡಿದ್ದರು. ಇಂಥ ಸನ್ನಿವೇಶದಲ್ಲಿ ಜನ ಮತ್ತೆ ಒಂದು ಹೊಸ ಆಸೆಯನ್ನು ಎಲ್ಲರ ಮನಸ್ಸಿನಲ್ಲಿ ಉಂಟುಮಾಡಿದ್ದಾರೆ. ದೇಶದಲ್ಲಿ ಅವಿದ್ಯಾವಂತರ ಸಂಖ್ಯೆ ನೂರಕ್ಕೆ 80 ರಷ್ಟು ಇದೆ. ನಮ್ಮ ರಾಜ್ಯದಲ್ಲಿಯೂ ಕೂಡ ಅದೇ ಪರಿಸ್ಥಿತಿ ಇದೆ. ಹಿಂದುಳಿದ ಹಾಗೂ ಬಡವರು ಜಾಸ್ತಿಯಾಗಿರತಕ್ಕ ನಮ್ಮ ದೇಶದಲ್ಲಿ ಚುನಾವಣೆಗಳ ಕಾಲದಲ್ಲಿ ಯಾವ ತರಹದ ಆಸೆ ಅಮಿಷನಗಳನ್ನು ಇವರು ಉಂಟುಮಾಡಿದ್ದಾರೆ ಎನ್ನುವುದನ್ನು ನಾವು ನೋಡಿದರೆ, ನ್ಯಾಯವಾದಂಥ ರೀತಿಯಲಿ ಚುನಾವಣೆಗಳು ನಡೆಯುವುದಕ್ಕೆ ಹೇಗೆ ಸಾಧ್ಯವೆಂದು ನಮಗೆ ಗೊತ್ತಾಗುತ್ತದೆ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ, ಅಧಿಕಾರದಲ್ಲಿ ಇವತ್ತು ನಾನು ಇರಬಹುದು, ನಾಳೆ ಇನ್ನೊಬ್ಬ ಇರಬಹುದು. ಆದರೆ ಅಧಿಕಾರದಲ್ಲಿದ್ದಂಥ ಕಾಲದಲ್ಲಿ ನಾವು ಏನು ಕೆಲಸ ಮಾಡುತ್ತೇವೆ, ಹೇಗೆ ಆಡಳಿತ ನಡೆಸುತ್ತೇವೆ ಏನನ್ನು ಅನುಸರಿಸುತ್ತೇವೆ, ಎನ್ನುವ ವಿಚಾರಗಳು ಬಹಳ ಮುಖ್ಯವಾದುವು ನಾವು ನಮ್ಮ ಅಧಿಕಾರದಲ್ಲಿ ಹೇಳಿದಂಥ ಮಾತುಗಳನ್ನು ಪಾಲನೆ ಮಾತುಗಳನ್ನು ಪಾಲನೆ ಮಾಡುವುದಿಲ್ಲವೋ, ಸ್ವಚ್ಛವಾಗಿ ಕೈ, ಬಾಯಿಗಳನ್ನು ಶುದ್ಧವಾಗಿಟ್ಟುಕೊಂಡು ಕೆಲಸ ಮಾಡುವುದಿಲ್ಲವೋ ಆಗ ಜನ ಸುಮ್ಮನೆ ಇರುವುದಿಲ್ಲ. ಜನತೆ ಇದನ್ನು ಎಂದೂ ಸಹಿಸುವುದಿಲ್ಲ. ಸ್ವಾತಂತ್ರ್ಯದ ಹೋರಾಟ ಕಾಲದಲ್ಲಿ ಕಾಂಗ್ರೆಸ್ ಪಕ್ಷ ಪ್ರಬಲವಾಗಿ ಚಳುವಳಿಯಲ್ಲಿ ಭಾಗವಹಿಸಿತ್ತು. ಇದಕ್ಕೆ ಗಾಂಧೀಜಿಯವರ ನೇತೃತ್ವ ಇತ್ತು. ಕಾಂಗ್ರೆಸ್ ದೇಶದಲ್ಲಿ ಆಡಳಿತ ನಡೆಸುವುದಕ್ಕೆ ಸ್ವಯಂ ಶಕ್ತಿಯನ್ನು ಪಡೆದಿದೆ ಎನ್ನುವ ಭಾವನೆ ಬೆಳೆದಿತ್ತು. ಇದನ್ನು ಇಲ್ಲಿಯವರೆಗೆ ಅಧಿಕಾರದಿಂದ ಇಳಿಸತಕ್ಕ ಕೆಲಸ ಆಗಿರಲಿಲ್ಲ, ಇಂಥ ಒಂದು ಭಾವನೆಗೆ ಈಗ ಕೊಡಲಿ ಪೆಟ್ಟು ಬಿದ್ದಿದೆ. ಈಗ ಪ್ರತಿಯೊಬ್ಬ ಪ್ರಜೆಯು ವಿಚಾರ ಮಾಡಿ, ತನ್ನ ಆತ್ಮಕ್ಕೆ ಏನು ತೀರ್ಮಾನ ಬರುತ್ತದೆಯೋ ಆ ತೀರ್ಮಾನದಂತೆ ನಡೆಯುವುದಕ್ಕೆ ಪ್ರಯತ್ನ ಮಾಡುತ್ತಾನೆ. ನಮ್ಮ ಪಕ್ಷ ಕೇಂದ್ರ ಸರ್ಕಾರದಲ್ಲಿ ಅಧಿಕಾರಕ್ಕೆ ಬಂದಿದೆ ನಾಳೆ ಇಲ್ಲಿಯು ಬರಬಹುದು. ವಿರೋಧಪಕ್ಷದ ಸ್ಥಾನದಲ್ಲಿ ನಾಳೆ ನೀವು ಕುಳಿತುಕೊಳ್ಳಬಹುದು. ನಾವೇ ಶಾಶ್ವತ ಅಧಿಕಾರದಲ್ಲಿರುತ್ತೇವೆ, ನಾವೇ ಮಂತ್ರಿಗಳಾಗಿರುತ್ತೇವೆ ಎನ್ನುವ ಭ್ರಮೆ ಖಂಡಿತವಾಗಿಯೂ ಹೋಗಬೇಕು. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ನಿಶ್ಚಲವಾದ ಆಡಳಿತವನ್ನು ನಡೆಸಿಕೊಂಡು ಹೋಗಬೇಕು.

ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಚುನಾವಣೆ ಕಾಲದಲ್ಲಿ ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಜನರ ಮತವನ್ನು ಪಡೆದಿದ್ದೀರಿ. ಅನೇಕ ಭರವಸೆಗಳನ್ನೂ ಆಜ್ಞೆಗಳನ್ನೂ ಹೊರಡಿಸಿ ಈ ರಾಜ್ಯದಲ್ಲಿ ಏನು ಹೆಚ್ಚು ಹಣವನ್ನು ಖರ್ಚು ಮಾಡಿದ್ದೀರೋ, ಆ ಬಗ್ಗೆ ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ ಖರ್ಚು ತೋರಿಸಿ ಈ ಸದನದಲ್ಲಿ ಈ ಹಣವನ್ನು ಮಂಜೂರು ಮಾಡುವುದಕ್ಕೆ ಏನು ತಂದಿದ್ದೀರೋ ಇದನ್ನು ವಾಪಸ್ಸು ಪಡೆಯುವುದಕ್ಕೆ ಸಾಧ್ಯವಿಲ್ಲವೇ? ತಮಗೆ ಅಧಿಕಾರ ಇದೆ ಎಂದು ಆ ರೀತಿ ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ನೀವು ಚುನಾವಣೆಯಲ್ಲಿ ನಡೆದುಕೊಳ್ಳತಕ್ಕಂಥಾ ರೀತಿನೀತಿ ಏನು ಇದೆ ಅದರ ತಾವು ಪ್ರಶ್ನೆ ಮಾಡಬೇಕಾಗಿದೆ. ಈ ಬಗ್ಗೆ ಸರಿಯಾದ ರೀತಿನೀತಿ ಯಾವಾಗ ಕಲಿಯುತ್ತೀರಿ? ಶ್ರೀಮಾನ್ ಚೆನ್ನಬಸಪ್ಪನವರಂಥಾ ಹಿರಿಯರಾದವರಿಗೆ ನಾನು ಹೇಳುವುದು ಇಷ್ಟು. ತಮಗೆ ಮದುವೆ ಆಗಿದೆ, 4-4 ಮಕ್ಕಳಾಗಿದೆ, ಸ್ವತಂತ್ರ ಬಂದು ಮೂವತ್ತು ವರ್ಷವಾಗಿದೆ. ಆದು ಹುಟ್ಟಿದ ಮಕ್ಕಳು ಮದುವೆಯಾಗಿ ಅವರಿಗೆ ಮರಿ ಮಕ್ಕಳಾಗತಕ್ಕಂಥಾ ಸಂದರ್ಭ ಬಂದಿದ್ದರೂ ಕೂಡ ಈ ಪ್ರಜಾಪ್ರಭುತ್ವದಲ್ಲಿ ಒಂದು ವ್ಯವಸ್ಥಿತವಾದ ಅಚ್ಚುಕಟ್ಟು ರೀತಿಯಲ್ಲಿ ಹಾಗೂ ಸಂಪ್ರದಾಯ ಬದ್ಧವಾದಂಥಾ ಆಡಳಿತವನ್ನು ಒಂದು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಬರದೇಹೋದರೆ ನಿಜವಾಗಿಯೂ ಖಂಡಿತವಾಗಿಯೂ ಜನರ ರಕ್ಷಣೆ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ. ಮತ್ತೆ ಜನ ನಿಮಗೆ ಮತವನ್ನು ಕೊಟ್ಟಿದ್ದಾರೆ. ಇನ್ನು ಮೇಲಾದರೂ ಕೂಡ ಮಾನ್ಯ ಅಧ್ಯಕ್ಷರ ಮುಖಾಂತರ ಶ್ರೀಮಾನ್ ಚನ್ನಬಸಪ್ಪನವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಎಲ್ಲರೂ ಕೂಡ ಒಂದು ಧೃಢ ನಿರ್ಧಾರಕ್ಕೆ ಬರೋಣ. ಚುನಾವಣೆ 2 ತಿಂಗಳು ಇದೆ ಅನ್ನುವಾಗ ನಾವು ಅಧಿಕಾರ ತ್ಯಾಗ ಮಾಡೋಣ ತಾವೇ ಆಗಲಿ ನೀವೇ ಆಗಲಿ ಯಾರೂ ಕೂಡ ಅಧಿಕಾರದಲ್ಲಿ ಇರಬಾರದು ಅನುವ ಒಂದು ನಿರ್ಧಾರಕ್ಕೆ ಬರೋಣ. ಕಾಂಗ್ರೆಸ್ಸಿನ ಪಕ್ಷದ ಸದಸ್ಯರೇ ಆಗಲಿ, ನಾವಾಗಲಿ ನೇರವಾಗಿ ಮತವನ್ನು ಪಡೆಯುವುದಕ್ಕೆ ಹೋಗೋಣ. ಯಾರೂ ಅಧಿಕಾರದಲ್ಲಿ ಇರಬಾರದು. ಈ ಒಂದು ಸಂಪ್ರದಾಯವನ್ನು ದೇಶದಲ್ಲ ಅನುಸರಿಸೋಣ. ಆ ರೀತಿಯಾಗಿ ಚುನಾವಣೆ ನಡೆಸುವುದಾದರೆ

ಖಂಡಿತವಾಗಿಯೂ ಮುಕ್ತ ಚುನಾವಣೆಗೆ ಒಂದು ವಾತಾವರಣ ಉಂಟಾಗುತ್ತದೆ ಎಂದು ಹೇಳುತ್ತೇನೆ. ಅಧಿಕಾರದಲ್ಲಿದ್ದರೆ ಹೇರಳವಾಗಿ ಹಣವನ್ನು ಗುತ್ತಿಗೆದಾರರಿಂದ ಬಂಡವಾಳ ಷಾಹಿಗಳಿಂದ ಪಡೆಯಬಹುದು. ಕಾಂಗ್ರೆಸ್ ಸರ್ಕಾರ ಇದುವರೆಗೆ ಏನು ಮಾಡಿಕೊಂಡು ಬಂದಿದೆಯೋ ಅದನ್ನೇ ನಾವೂ ಕೂಡ ಮಾಡಬಾರದು. ಆದುದರಿಂದ ನಾನು ಮತ್ತೊಮ್ಮೆ ಶ್ರೀಮಾನ್ ಚೆನ್ನಬಸಪ್ಪ ಅಂಥಾ ಹಿರಿಯರಾದಂಥಾವರಿಗೆ ಹೇಳುತ್ತೇನೆ. ಚುನಾವಣೆಗೆ ಇನ್ನೂ 2 ತಿಂಗಳು ಇದೆ ಅನ್ನುವಾಗ ಎಲ್ಲರೂ ಅಧಿಕಾರವನ್ನು ಬಿಟ್ಟುಬಿಡೋಣ. ಅಧಿಕಾರವನ್ನು ಬಿಟ್ಟು ಚುನಾವಣೆ ನಡೆಸುವ ಅನ್ನುವ ಅಭಿಪ್ರಾಯ ಬರುವುದಾದರೆ ಈ ದೇಶದಲ್ಲಿ ಖಂಡಿತವಾಗಿಯೂ ಉತ್ತಮ ವಾತಾವರಣ ಉಂಟಾಗುತ್ತದೆ ಎಂದು ನಾನು ಭಿನ್ನವಿಸಿಕೊಳ್ಳುತ್ತೇನೆ. ಏತಕ್ಕೆಂದರೆ ಚುನಾವಣೆ ಕಾಲದಲ್ಲಿ ನಿಮಗೆ ಸಿಕ್ಕಿರತಕ್ಕಂಥಾ ಅಧಿಕಾರವನ್ನು ಯಾವ ಯಾವರೀತಿ ದುರುಪಯೋಗಪಡಿಸಿ ಕೊಂಡಿದ್ದೀರಿ ಅನ್ನುವುದಕ್ಕೆ ಕಾರಣಗಳನ್ನೂ ಸಹ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ದಕ್ಷಿಣ ಕನ್ನಡ ಜಿಲ್ಲೆಗೆ ಹೋದಾಗ ಅಲ್ಲಿ ಬೆಸ್ತರ ಮತ ಪಡೆಯಲು ಮೀನು ಹಿಡಿಯುವ ಕಾಲದಿಂದ ನರಳಿದವರಿಗೆ ಒಂದು ಕುಟುಂಬಕ್ಕೆ 250 ರೂಪಾಯಿನಂತೆ, ಒಟ್ಟು 25 ಲಕ್ಷ ರೂಪಾಯಿ ಕೊಡುತ್ತೇವೆ ಅನ್ನುವ ಆಶ್ವಾಸನೆಯನ್ನು ಕೊಟ್ಟರು ಅದರಂತೆ ಅರ್ಜಿಯನ್ನೂ ಕೂಡ ಹೊರಡಿಸಿದರು. ಇದರ ಬಗ್ಗೆ ಈ ಸದನದಲ್ಲಿ ಹೆಚ್ಚುವರಿ ಬೇಡಿಕೆ ಏನು ತಂದಿದ್ದಾರೆ ಇದು ಪ್ರಾಮಾಣಿಕತೆಯೇ? ಇದು ಆಶ್ವಾಸನೆ ಅಲ್ಲವೇ? ಇದನ್ನು ಮೊದಲು ಕೊಟ್ಟಿರಲಿಲ್ಲ. ಚುನಾವಣೆ ಸಮಯದಲ್ಲಿ ಈ ರೀತಿ ಕೊಡುತ್ತೇವೆ ಅಂತ ಹೇಳಿರುವುದು ಇದು ಭರವಸೆ ಅಲ್ಲವೇ? ಬೆಸ್ತರು ಮೊದಲಿನಿಂದಲೂ ಇದ್ದಾರೆ, ಮತ್ತು ಅವರ ಪರವಾಗಿ ಮಂತ್ರಿಗಳೂ ಇದ್ದಾರೆ. ಮತ್ತು ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದಿಂದ ಬಂದಿರತಕ್ಕಂಥಾ ಮಂತ್ರಿಗಳು ಮತ್ತು ಶಾಸಕರೂ ಇದ್ದಾರೆ. ಅವರ ಕಷ್ಟ ಸುಖಗಳನ್ನು ಶಾಸಕರು ಈ ಸದನದಲ್ಲಿ ಮೊದಲಿನಿಂದಲೂ ಹೇಳಿದ್ದಾರೆ, ಮತ್ತು ಹೊರಗಿನಿಂದಲೂ ಒತ್ತಾಯ ಪಡಿಸಿದ್ದಾರೆ. ಬೆಸ್ತರ ಕಷ್ಟಸುಖಗಳ ಬಗ್ಗೆ ಹಿಂದೆ ಹೇಳಿದಾಗ ಸರ್ಕಾರಕ್ಕೆ ಕನಿಕರ ಬಾರದೆ ಈಗ ಇವರ ಬಗ್ಗೆ ಅನುಕಂಪ ಬಂದಿರುವುದರ ಬಗ್ಗೆ ನಾವು ಪ್ರಶ್ನೆ ಮಾಡಬೇಕಾಗಿದೆ 4 5 ವರ್ಷದಿಂದಲು ಈ ಸಮಸ್ಯೆ ಇದೆ. ಹಾಗಿರುವಾಗ ಕೂಡಲೇ ಚುನಾವಣೆ ಸಮಯದಲ್ಲೇ ಇವರಿಗೆ ಸಹಾಯ ಮಾಡಲು 25 ಲಕ್ಷ ರೂಪಾಯಿಗೆ ಮಂಜೂರಾತಿ ಏನು ಕೊಟ್ಟಿದ್ದಾರೋ ಆ ಹಣವೂ ಕೂಡ ಈ ಸಪ್ಲಿಮೆಂಟರಿಯಲ್ಲಿ ಸೇರಿಸಿದ್ದಾರೆ. ಕಾರಣ ಬೆಸ್ತರಿಗೆ ಸಹಾಯ ಮಾಡಿ ಅವರಿಂದ ಓಟು ಪಡೆಯುವುದರಲ್ಲಿ ಯಶಸ್ವಿಯಾಗಿದ್ದಾರೆ. ಕೇವಲ ನಿಮ್ಮ ಈ ಸಾಧನೆ ಎಂಥಹ ಪ್ರಾಮಾಣಿಕತೆಯಿಂದ ಕೂಡಿದೆ ಅನ್ನುವುದು ತೋರಿಸುತ್ತದೆ. ನಿಮ್ಮ ಅಧಿಕಾರದ ಅವಧಿಯಲ್ಲಿ ಚುನಾವಣೆ ಕಾಲದಲ್ಲಿ ಅವರಿಗೆ ಆಸೆ ತೋರಿಸಿ ಅವರಿಂದ ಈ ರೀತಿ ಓಟು ಪಡೆದಿದ್ದೀರಿ.

Sri H. M. CHANNABASAPPA —In case anybody has misused his powers, it is a fit case for election case and it is not a matter of argument here.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನೀವು ಮಾಡಿರುವ ಪಾಪಕ್ಕೆ ನಮ್ಮನ್ನು ಕೋರ್ಟಿಗೆ ಹೋಗಿ ಎಂದು ಹೇಳುತ್ತೀರಾ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಶ್ರೀಮಾನ್ ಪುಟ್ಟಸ್ವಾಮಿಯವರೇ ಆತುರವಾಗಿದ್ದರೆ ಹೋಗಿ. ದಯವಿಟ್ಟು ನಾನು ಹೇಳುವುದನ್ನು ಸ್ವಲ್ಪ ಕೇಳಿ. 30-35 ದಿವಸ ಇರುವಾಗ ಚುನಾವಣೆ ಘೋಷಣೆ ಆದದ್ದು. ಚುನಾವಣೆ ನಡೆಯುತ್ತದೆ ಎಂಬುದು ನಮಗೂ ಗೊತ್ತಿರಲಿಲ್ಲ, ನಿಮಗೂ ಗೊತ್ತಿರಲಿಲ್ಲ. ಇದು ಸತ್ಯಾಂಶ. ಈ ಪಟ್ಟಿಯಲ್ಲಿ ಈ ಖರ್ಚನ್ನು ಸೇರಿಸಿದ್ದು ಯಾವಾಗ ಚುನಾವಣೆ ಘೋಷಣೆ ಆದದ್ದು ಯಾವಾಗ? ಹೀಗಿರುವಾಗ ಚುನಾವಣೆಯಲ್ಲಿ ಭರವಸೆ ಕೊಟ್ಟಿದ್ದನ್ನು ಇದರಲ್ಲಿ ಸೇರಿಸಿದೆ ಅಂತ ಹೇಳುವುದು ಯಾವ ನ್ಯಾಯ?

ಶ್ರೀ ಕಾಗೋಡು ತಿಮ್ಮಪ್ಪ.—ಚುನಾವಣೆ ಮುಗಿದ ಮೇಲೆ ಇದನ್ನೆಲ್ಲಾ ಸೇರಿಸಿರಬಹುದು.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಹಾಗಿದ್ದರೆ ತಾವು ಎಲ್ಲದಕ್ಕೂ ಮನ್ನಣೆ ಮಾಡುತ್ತೀರಾ? ಚುನಾವಣೆಯಲ್ಲಿ ಭರವಸೆ ಕೊಟ್ಟಿದ್ದನ್ನೆಲ್ಲಾ, ಆ ಖರ್ಚನ್ನೂ ಇದರಲ್ಲಿ ಸೇರಿಸಿದ್ದೀರಿ ಅಂತ

ಹೇಳಿದರೆ ಇದು ನ್ಯಾಯವೇ ಮೇಲಾಗಿ ಚುನಾವಣೆ ನಡೆಯುತ್ತದೆ ಅನ್ನುವುದು ನಮಗೂ ಗೊತ್ತಿರಲಿಲ್ಲ, ನಿಮಗೂ ಗೊತ್ತಿರಲಿಲ್ಲ. 30 ದಿವಸದೊಳಗೆ ಅದಂಥಾ ಖರ್ಚನ್ನೂ ಕೂಡ ಇದರಲ್ಲಿ ತಂದಿದ್ದೀರಿ ಅಂತ ಹೇಳಿದರೆ ಇದು ಯಾವ ನ್ಯಾಯ ಸ್ವಾಮಿ?

ಶ್ರೀ ಕಾಗೋಡು ತಿಮ್ಮಪ್ಪ.—ನೀವು ಸುಬ್ಬರಾಯನ ಕೆರೆ ಏರಿ ಮೇಲೆ ಏನು ಭಾಷಣ ಮಾಡಿದಿರಿ ಅದನ್ನು ನಾನು ಹೇಳುತ್ತಾ ಇಲ್ಲ. ನಮ್ಮ ಮುಖ್ಯಮಂತ್ರಿಗಳು ಯಾವಾಗ ಏನು ವಾಗ್ದಾನ ಮಾಡಿದರು, ಯಾವ ಸಹಾಯವನ್ನು ಕೊಡುತ್ತೇವೆ ಅಂತ ಹೇಳಿದ್ದಾರೆ ಅವೆಲ್ಲವೂ ಕೂಡ ಅವರ ಕಡಿತದಲ್ಲೇ ಇದೆ. ಬೇಕಾದರೆ ನಾನು ಹೇಳುತ್ತೇನೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ನೀವು ಹೇಳುವುದಕ್ಕಿಂತ ಮುಂಚಿತವಾಗಿ ನಾನೇ ವ್ಯಾಖ್ಯಾನ ಮಾಡಿದ್ದೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ —ಬೆಸ್ತರಿಗೆ ಅಕ್ಕಿ ಮೂಟೆ ಎಷ್ಟು ಕೊಟ್ಟಿದ್ದೀರಿ? ಬೇಳೆ ಮೂಟೆ ಎಷ್ಟು ಕೊಟ್ಟಿದ್ದೀರಿ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಬೆಸ್ತರಿಗೆ ಅಕ್ಕಿ ಮೂಟೆ ಎಷ್ಟು ಕೊಟ್ಟಿದ್ದೀರಿ, ಬೇಳೆ ಮೂಟೆ ಎಷ್ಟು ಕೊಟ್ಟಿದ್ದೀರಿ, ಯಾವಾಗ ಕೊಟ್ಟಿದ್ದೀರಿ ಅನುವುದಕ್ಕೆ ಬೇರೆ ಪ್ರಶ್ನೆ ಹಾಕಿದರೆ ಹೇಳುತ್ತೇನೆ. ಅದಕ್ಕೆ ಉತ್ತರ ಕೊಡೋಣ.

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದೇ ಇದೇ ಸದನದಲ್ಲಿ ಒಂದು ಕಾನೂನನ್ನು ತಂದಿದ್ದೀರಿ. ಅದು ಯಾವ ಕಾನೂನು ಎಂದರೆ ಮರ ಕಡಿಯಬಾರದು ಅನ್ನುವ ಕಾನೂನು. ಆ ದಿವಸ ಎ.ಐ.ಸಿ.ಸಿ. ನಡೆಯುವ ಗೌಹಾತಿಗೆ ತಾವೆಲ್ಲಾ ಹೋಗಬೇಕಾಗಿತ್ತು. ಆ ಸಂದರ್ಭದಲ್ಲಿ ತರಾತುರಿಯಾಗಿ ಈ ಒಂದು ಕಾನೂನನ್ನು ತಂದಿರಿ. ಮಾರುತಿ ಕಾರಿನ ಮಾಲೀಕರ 5 ಅಂಶದ ಕಾರ್ಯಕ್ರಮವನ್ನು ಜಾರಿಗೊಳಿಸುವುದಕ್ಕೆ ಈ ಸರ್ಕಾರ ಯಶಸ್ವಿಯಾಗಿದೆ ಅನ್ನುವುದನ್ನು ತೋರಿಸಿಕೊಳ್ಳುವುದಕ್ಕೆ ಟಾಂ ಟಾಂ ಮಾಡಿಸಿಕೊಳ್ಳುವುದಕ್ಕೆ ಡಂಗೂರ ಹೊಡೆಸಿಕೊಳ್ಳುವುದಕ್ಕೆ ಆತುರಾತುರವಾಗಿ ಈ ಕಾನೂನನ್ನು ತಂದಿರಿ. ಆವಾಗ ನಾನು ಇದರ ಬಗ್ಗೆ ಹೇಳಿದೆ ಇಷ್ಟು ಆತುರವಾಗಿ ತರಬೇಡಿ ಎಂದು. ಇದರಿಂದ ಅನೇಕ ತೊಂದರೆಗಳು ಇವೆ. ಇದರ ಬಗ್ಗೆ ಜನರ ಅಭಿಪ್ರಾಯವನ್ನು ಸಂಗ್ರಹಣೆ ಮಾಡಿಕೊಂಡು ಆಮೇಲೆ ತನ್ನಿ ಎಂದು ಹೇಳಿದರೂ ತಾವು ಕೇಳಲಿಲ್ಲ. ಅವೊತ್ತೇ ಈ ಕಾನೂನು ತಂದು 2–3 ದಿವಸ ಟೈಂ ಸಹ ಕೊಡದೇ ಅವೊತ್ತೇ ಈ ಸದನದ ಅಂಗೀಕಾರ ಪಡೆದಿರಿ.

ಈ ಕಾನೂನು ಜಾರಿ ಯಾದ ಮೇಲೆ ನಿಮ್ಮ ಊರಿನಲ್ಲಿ ಏನಾಗಿದೆ ಎಂಬುದು ನನಗೆ ಗೊತ್ತಿಲ್ಲ. ಆದರೆ ನಮ್ಮ ಮಲೆನಾಡಿನ ಪ್ರದೇಶದಲ್ಲಿ ಆಗುತ್ತಿರುವ ಅನಾಹುತಗಳನ್ನು ಊಹೆ ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ ತುರ್ತುಪರಿಸ್ಥಿತಿಯ ಅವಧಿಯಲ್ಲಿ ಈ ಕಾನೂನನ್ನು ಉಪಯೋಗಿಸಿಕೊಂಡು ಮಲೆನಾಡಿನ ಜನರ ಕತ್ತಿನ್ನು ಅರಣ್ಯ ಇಲಾಖೆಯ ಅಧಿಕಾರಿಗಳು ಹಿಸುಕಿದರು. ಈ ಮೊದಲು ಮಲೆನಾಡಿನ ಕೆಲವು ಜನರು ಕಾಡಿನಿಂದ ಸೌದೆಯನ್ನು ತಂದು ಮಾರಿ ಜೀವನ ಮಾಡುತ್ತಿದ್ದರು. ಇಂತಹವರಿಗೆಲ್ಲಾ ಲೈಸನ್ಸ್ ತೆಗೆದುಕೊಳ್ಳಬೇಕೆಂದು ಕೇಳಿದಾಗ ಅವರೆಲ್ಲರೂ ಕಂಗಾಲಾದರು ತಮ್ಮ ಜಮೀನಿನಲ್ಲಿರತಕ್ಕಂಥ ಮರಗಿಡಗಳನ್ನು ಕಡಿಯಬೇಕಾದರೂ ಸಹ ಲೈಸನ್ಸ್ ಪಡೆಯಬೇಕೆಂದು ಕಾನೂನು ಮಾಡಿದ ಮೇಲೆ ರೈತರಿಗೆ ಬಹಳ ಕಷ್ಟವಾಗಿದೆ ಇದರಿಂದ ರೈತರಿಗೆ ಬಹಳ ಕಷ್ಟವಾಗಿದೆ ತಮಗೆ ಬೇಕಾದ ನೇಗಿಲು ಮತ್ತು ವ್ಯವಸಾಯದ ಉಪಕರಣಗಳನ್ನು ಮಾಡಿಕೊಳ್ಳಲು ಮರ ಕಡಿಯಲು ಅವಕಾಶ ಇಲ್ಲದಂತೆ ಆಗಿದೆ. ನಮ್ಮ ಭಾಗದಲ್ಲಿ ಶೇಕಡಾ 80-90ರಷ್ಟು ಹುಲ್ಲಿನ ಮನೆಗಳೇ ಇವೆ ಈ ಮನೆಗಳಿಗೆ ಪ್ರತಿವರ್ಷವೂ ಮೇಲು ಹೊದಿಕೆ ಹಾಕಬೇಕಾಗುತ್ತದೆ. ಮತ್ತು ಹೋಗಿರತಕ್ಕಂಥ ಕಂಬ ಮತ್ತು ಗಳಗಳನ್ನು ಬದಲಾವಣೆ ಮಾಡಬೇಕಾಗುತ್ತದೆ. ಆ ಸಂದರ್ಭದಲ್ಲಿ ತಮ್ಮಲ್ಲಿರುವ ಮರಗಳನ್ನು ಕಡಿಯಲಿಕ್ಕೆ ಅವಕಾಶವಿಲ್ಲದಂತೆ ಆಗಿದೆ. ತಮಗೆ ಬೇಕಾದ ವ್ಯವಸಾಯ ಉಪಕರಣಗಳನ್ನು ಮಾಡಿಕೊಳ್ಳಲು ಮರವನ್ನು ಕಡಿದು ತರುವಂತಹ ಒಂದು ಅವಕಾಶ ಬ್ರಿಟೀಷರ ಕಾಲದಿಂದಲೂ ಇತ್ತು. ಆ ಒಂದು ಸೌಕರ್ಯವನ್ನು ಈಗ ಇಲ್ಲದಂತೆ ಮಾಡಿದ್ದಾರೆ. ಇದರಿಂದ ನಮ್ಮ ಭಾಗದ ಜನರು ರೊಚ್ಚಿಗೆದ್ದಿದ್ದಾರೆ. ನಾವೇನಾದರೂ ಅಲ್ಲಿಗೆ ಹೋದರೆ ಮೈಮೇಲೆ ಬೀಳುತ್ತಾರೆ. ಇಂತಹ ಕಾನೂನನ್ನು ಏತಕ್ಕೆ ಮಾಡಿದಿರಿ ಎಂದು ಕೇಳುತ್ತಾರೆ. ಅಧಿಕಾರದಲ್ಲಿರುವವರು ಇದನ್ನೆಲ್ಲಾ ಯೋಚನೆ ಮಾಡಬೇಕಾಗಿತ್ತು.

5-00 P. M.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮರ ಕಡಿಯಬೇಕಾದರೆ ನಾಲ್ಕೈದು ಹೊಸ ಗಿಡಗಳನ್ನು ಹೊಸದಾಗಿ ಬೆಳೆಸಬೇಕು ಮತ್ತು ಮರ ಕಡಿಯಲು ಲೈಸನ್ಸ್ ತೆಗೆದುಕೊಳ್ಳಬೇಕು ಎಂಬತಕ್ಕಂಥ ಕಾನೂನನ್ನು ಒಂದು ಒಳ್ಳೆಯ ಸದುದ್ದೇಶದಿಂದ ಮಾಡಲಾಯಿತು. ಈಗ ಮರ ಕಡಿಯುವವರಿಗೆ ಮರ ಬೆಳೆಸುವ ಪ್ರಾಕ್ಟೀಸ್ ಹೊರಟು ಹೋಗಿದೆ ಅದಕ್ಕೋಸ್ಕರ ಅವರವರ ಜಮೀನಿನಲ್ಲಿ ಮರಗಳನ್ನು ಬೆಳೆಸಿದರೆ ಮುಂದೆ ಸ ದೆಗೆ ಮತ್ತು ಸೊಪ್ಪಿಗೆ ಅನುಕೂಲವಾಗುತ್ತದೆಂದು ಇದನ್ನು ಜಾರಿಗೆ ತಂದಿದ್ದು ಆದರೆ ಇದನ್ನು ಆಚರಣೆ ಕೊಡುವುದರಲ್ಲಿ ತೊಂದರೆಗಳಾಗುತ್ತಿದ ಎಂಬುದಾಗಿ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಕೆಲವರು ಈ ಕಾನೂನನ್ನು ದುರುಪಯೋಗ ಮಾಡಿಕೊಂಡಿರ ಬಹುದು. ಅಂಥಾದ್ದನ್ನು ತಪ್ಪಿಸಿ ಎಂದು ತಾವು ಹೇಳಿ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ —ಈ ರೀತಿಯ ಕಾನೂನನ್ನು ಮಾಡಿದ ಮೇಲೆ ಅದರಿಂದ ಜನರ ಮೇಲೆ ಏನು ದುಷ್ಪರಿಣಾಮ ಉಂಟಾಯಿತು ಎಂಬುದನ್ನು ತಿಳಿದುಕೊಂಡು ಅದನ್ನು ಬಗೆಹರಿಸಲು ತಾವು ಪ್ರಯತ್ನ ಮಾಡಲಿಲ್ಲ ಆದರೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ದೇವರಾಜ ಅರಸ್ ಅವರು ಚುನಾವಣೆಯ ಸಂದರ್ಭದಲ್ಲಿ ಆ ಭಾಗಕ್ಕೆ ಬಂದಾಗ, ಅಲ್ಲಿಯ ಜನರು ತಮ್ಮ ಕಷ್ಟವನ್ನು ಹೇಳಿದ ಮೇಲೆ, ಪ್ರತಿಯೊಂದು ಮನೆಯವರು ತಹಶೀಲ್‌ದಾರರಿಗೆ ಅರ್ಜಿ ಕೊಟ್ಟರೆ ಅವರು ಎರಡು ಗಾಡಿ ಸೌದೆಯನ್ನು ತರಲು ಅನುಮತಿ ಕೊಡುತ್ತಾರೆಂದು ಹೇಳಿದರು. ಈ ಮೊದಲು ಲ್ಯಾಂಡ್ ರೆವಿನ್ಯೂ ಆಕ್ಟ್‌ಗೆ ಒಂದು ತಿದ್ದುಪಡಿಯನ್ನು ತಂದರು. ಅದರ ಪ್ರಕಾರ ಯಾರಾದರು ಭೂಮಿ ಇಲ್ಲದವರು ಬಗರ ಹುಕುಂ ಸಾಗುವಳಿ ಮಾಡಿದ್ದರೆ ಅಂತಹವರಿಗೆ ಆ ಜಮೀನನ್ನು ಮಂಜೂರು ಮಾಡಲಾಯಿತು ಆದರೆ ತುರ್ತುಪರಿಸ್ಥಿತಿಯ ಸಮಯದಲ್ಲಿ ಈ ಒಂದು ಅವಕಾಶವನ್ನು ತಪ್ಪಿಸಿದರು. ಆದರೆ ಮಾನ್ಯ ಮುಖ್ಯಮಂತ್ರಿಗಳು ಚುನಾವಣೆಯ ಸಮಯದಲ್ಲಿ ಭೂಹೀನರು ಸರ್ಕಾರದ ಜಮೀನನ್ನು ಏನಾದರು ಅತಿಕ್ರಮಣ ಮಾಡಿ ಸಾಗುವಳಿ ಮಾಡುತ್ತಿದ್ದರೆ ಅಂತಹ ಜಮೀನನ್ನು ಅವರಿಗೇ ಮಂಜೂರು ಮಾಡುವುದಾಗಿ ಭರವಸೆ ಕೊಟ್ಟರು. ಇದು ಏಕೆ ಬೇಕಾಗಿತ್ತು? ಅವರಿಗೆ ಹೇಳಬಹುದಾಗಿತ್ತು, ಏನೆಂದರೆ, ನಿಮ್ಮ ಮನಸ್ಸಿಗೆ ತೋಚಿದಂತೆ ಮತದಾನ ಮಾಡಿ ಮುಂದೆ ಅಂತಹ ಜಮೀನನ್ನು ಮಂಜೂರು ಮಾಡುವುದು ಸರಿಯೇ ಅಥವಾ ತಪ್ಪೇ ಎಂದು ಪರಿಶೀಲನೆ ಮಾಡಿ ನಂತರ ಕಾರ್ಯಗತ ಮಾಡುತ್ತೇವೆಂದು ಹೇಳಬಹುದಾಗಿತ್ತು. ಆದರೆ ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥ ಮಾನ್ಯ ಮುಖ್ಯಮಂತ್ರಿಗಳು ಆ ರೀತಿ ಮಾಡಲಿಲ್ಲ, ಅಲ್ಲಿಯ ಜನರು ಸಿಟ್ಟಿನಿಂದ ಯಾವಾಗ ಅವರ ಮೇಲೆ ತಿರುಗಿ ಬಿದ್ದರೋ, ಆಗ ಅವರುಗಳನ್ನು ಸಮಾಧಾನ ಮಾಡುವುದಕ್ಕಾಗಿ, ಯಾರು ಸರ್ಕಾರದ ಜಮೀನನ್ನು ಬಗರೆ ಹುಕುಂ ಸಾಗುವಳಿ ಮಾಡಿದ್ದಾರೋ, ಅಂತಹ ಜಮೀನನ್ನು ಅವರಿಗೇ ಮಂಜೂರು ಮಾಡುವುದಾಗಿ ಹೇಳಿ ಬಂದರು. ಚುನಾವಣೆ ಮುಗಿಯಿತು. ಆದರೆ ಇಲ್ಲಿಯವರೆಗೆ ಆ ಬಗ್ಗೆ ಯಾವ ಒಂದು ಆಜ್ಞೆಯನ್ನು ಸಹ ಹೊರಡಿಸಿಲ್ಲ. ಇದು ಚುನಾವಣೆ ನಡೆಸುವ ಕ್ರಮವೇ? ಚುನಾವಣೆಯ ಸಮಯದಲ್ಲಿ ಎಲ್ಲ ರೀತಿಯ ಆಶ್ವಾಸನೆಗಳನ್ನು ಸಹ ಕೊಟ್ಟರು. ಈ ಮೊದಲು ಋಣ ಪರಿಹಾರ ಮಸೂದೆಯನ್ನು ಜಾರಿಗೆ ತಂದರು ಇದರಿಂದ ಜನರಿಗೆ ಸಾಲ ಸಿಗುವ ಅವಕಾಶಗಳು ನಿಂತುಹೋಗಿವೆ. ಮುಂದೆ ಸರ್ಕಾರದವರೇ ಸಾಲ ಕೊಡುವ ವ್ಯವಸ್ಥೆ ಮಾಡುತ್ತೇವೆಂದು ಹೇಳಿದರು. ಈ ಸಾಲವನ್ನು ಚುನಾವಣೆಯ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಉಡುಪಿಯ ಮಾನ್ಯ ಮಹಿಳಾ ಸಚಿವರು ಹಂಚಿಕೆ ಮಾಡಿದರು. ಈ ರೀತಿ ಚುನಾವಣೆಯ ಸಮಯದಲ್ಲಿ ಸಾಲವನ್ನು ಹಂಚಿದರೆ ಅದು ಚುನಾವಣೆಯ ನಡುವಳಿಕೆಯೇ? ಒಟ್ಟಿನಲ್ಲಿ ಚುನಾವಣೆಯ ಸಂದರ್ಭದಲ್ಲಿ ಹಣವನ್ನು ಖರ್ಚು ಮಾಡತಕ್ಕಂಥ ಒಂದು ಕೆಲಸವನ್ನು ಮಾಡಿದ್ದೀರಿ ಉದಾಹರಣೆಗೆ ಹೇಳುವುದಾದರೆ, ಮಂತ್ರಿಗಳಿಗೆ ಸಂಬಂಧಪಟ್ಟಂತೆ ಟೆಲಿಫೋನ್ ಚಾರ್ಜಸ್‌ಗಾಗಿ 5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈ ಬಾಬಿಗೆ ಈ ಮೊದಲು ಒದಗಿಸಿದ್ದ ಹಣವೆಷ್ಟು? ಈ ವರ್ಷ ಮಾತ್ರ ಇಷ್ಟೊಂದು ಹಣ ಹೆಚ್ಚು ಖರ್ಚಾಗಲು ಕಾರಣವೇನು?

ಶ್ರೀ ಎಚ್. ಎಂ. ಚನ್ನಬಸಪ್ಪ —ತಾವು ಈ ಬಗ್ಗೆ ಒಂದು ಪ್ರಶ್ನೆ ಹಾಕಿದರೆ ಉತ್ತರ ಬರುತ್ತದೆ. ಆಗ ಅದರ ಆಧಾರದ ಮೇಲೆ ಮಾತನಾಡುವುದಕ್ಕೆ ತಮಗೆ ಅನುಕೂಲವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಏತಕ್ಕೋಸ್ಕರ ಇಷ್ಟೊಂದು ಹಣ ಖರ್ಚಾಯಿತು ಎಂಬ ಬಗ್ಗೆ ಇಲ್ಲಿ ವಿವರಗಳಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಟೆಲಿಫೋನ್ ಚಾರ್ಜಸ್ ಹೆಚ್ಚಾಗಿದೆ. ಮಂತ್ರಿಗಳ ಸಂಖ್ಯೆ ಜಾಸ್ತಿಯಾಗಿದೆ. ಈ ಕಾರಣದಿಂದ ಇದರ ಖರ್ಚು ಜಾಸ್ತಿಯಾಗಿದೆಯೇ ವಿನಃ ಚುನಾವಣೆ ಗೋಸ್ಕರವಾಗಿ ಇಷ್ಟೊಂದು ಹಣ ಖರ್ಚಾಗಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಯಾವ ಯಾವ ಮಂತ್ರಿಗಳು ಯಾವ ಯಾವ ತಿಂಗಳುಗಳಲ್ಲಿ ಎಷ್ಟೆಷ್ಟು ಕಾಲ್ ಮಾಡಿದ್ದಾರೆಂಬ ವಿವರಗಳನ್ನು ಕೊಡಿ

ಶ್ರೀ ಎಚ್. ಎಂ. ಚನ್ನಬಸಪ್ಪ.- ಪ್ರಶ್ನೆಗಳನ್ನು ಕೇಳಲು ಮಾನ್ಯ ಸದಸ್ಯರಿಗೆ ಸಂಪೂರ್ಣವಾದಂಥ ಹಕ್ಕಿದೆ. ಆದಕಾರಣ ಈ ಬಗ್ಗೆ ಪ್ರಶ್ನೆ ಕೇಳಿ, ಅದಕ್ಕೆ ಉತ್ತರ ಪಡೆದುಕೊಂಡು, ಆ ಒಂದು ಅಂಕಿಅಂಶಗಳ ಆಧಾರದ ಮೇಲೆ ಮಾತನಾಡಿದರೆ ಅದಕ್ಕೆ ಬೆಲೆಯುಂಟು.

ಶ್ರೀ ಕಾಗೋಡು ತಿಮ್ಮಪ್ಪ —5 ಲಕ್ಷ ರೂಪಾಯಿಗಳಷ್ಟು ಹೆಚ್ಚುವರಿ ಬೇಡಿಕೆಯನ್ನು ಈ ಬಾಬಿನಲ್ಲಿ ಕೇಳುವಂತಹ ಪ್ರಸಂಗವೇನಿತ್ತು? ಚುನಾವಣೆಯ ಸಂದರ್ಭದಲ್ಲಿ ನಿಮ್ಮ ಪಕ್ಷದ ಕೆಲಸ ಕ್ಕೋಸ್ಕರವಾಗಿ ಈ ರೀತಿ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿದ್ದೀರಿ. ಇದು ಸರಿಯೇ ಎಂದು ನಾವು ಕೇಳುತ್ತಿದ್ದೇವೆ?

ಆದ್ದರಿಂದ ಮಾನ್ಯ ಅಧ್ಯಕ್ಷರೇ, ಇವತ್ತು ಟ್ರಂಕಾಲ್ ಚಾರ್ಜಸ್ ಎಂದು ಏನು 5 ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ. ಇದು ನನಗೆ ಗೊತ್ತಿರುವ ಹಾಗೆ ಚುನಾವಣೆ ಘೋಷಣೆಯಾದ ಮೇಲೆ ಖರ್ಚು ಮಾಡಿದಂತ ಹಣ. ಒಂದು ಒಂದೂವರೆ ಲಕ್ಷದವರೆವಿಗೂ ಕೆಲವು ಮಂತ್ರಿಗಳು ಖರ್ಚು ಮಾಡಿದ್ದಾರೆ, ಸರ್ಕಾರ ಕೊಟ್ಟಿರತಕ್ಕ ಫೋನುಗಳನ್ನು ಚುನಾವಣೆಗಳ ಅವಧಿಯಲ್ಲಿ ದುರುಪಯೋಗಪಡಿಸಿಕೊಂಡಿದ್ದಾರೆ. ಡೆಲ್ಲಿಗೆ ಸಾಮಾನ್ಯವಾಗಿ ಕಾಲ್ ಹಾಕಿದರೆ 60 ರೂಪಾಯಿ ಖರ್ಚು ಆಗುತ್ತದೆ. ಕ್ಯಾನ್ಸಲ್ ಮಾಡಿದ ರೂ 10 ರೂಪಾಯಿ ಆಗುತ್ತದೆ ನ್ಯಾಯಾಂಗ ತನಿಖೆ ಮಾಡಿದರೆ ಎಲ್ಲವೂ ತಿಳಿಯುತ್ತದೆ. ಯಾವ ಯಾವ ಕಾರಣಕ್ಕಾಗಿ ಟ್ರಂಕಾಲ್ ಮಾಡಿದ್ದಾರೆ, ಯಾವ ಯಾವ ಕಾರಣಕ್ಕಾಗಿ ಬಳಸಿಕೊಂಡಿದ್ದಾರೆ ಎಂಬ ಬಗ್ಗೆ ಒಂದು ನೋಟ್‌ನ್ನು ಸಭೆಯ ಮುಂದೆ ಇಡಿ ಇದು ಶೋಭೆ ತರತಕ್ಕದ್ದಲ್ಲ ಯಾವ ಪ್ರಜಾಪ್ರಭುತ್ವ ಸರ್ಕಾರಕ್ಕೂ ಕೀರ್ತಿ ತರುವಂಥಾದಲ್ಲ. ಚುನಾವಣೆಯ ಕಾಲದಲ್ಲಿ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದೀರಿ. ಈ ಪ್ರವೃತ್ತಿ. ನಡತೆ ಯಾವ ರೀತಿಯಿಂದಲೂ ಸರ್ಕಾರಕ್ಕೆ ಮರ್ಯಾದೆ ತರುವಂಥದಲ್ಲ. ಆದ್ದರಿಂದ ಚುನಾವಣೆ ಭರದಲ್ಲಿ ಎಲ್ಲಾ ದೂರವಾಗಿ ಲಂಗುಲಗಾಮು ಬಿಟ್ಟು ವರ್ತನೆ ಮಾಡಿದೆ, ಜವಾಬ್ದಾರಿ ಸ್ವಲ್ಪವೂ ಇಲ್ಲ.

ಕಂದಾಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಬೇಡಿಕೆ ನಂ. 5 ರಲ್ಲಿ ಹೆಚ್ಚು ಹಣ ಕೇಳಿದ್ದಾರೆ. ಅಧ್ಯಕ್ಷರೇ ಒಂದು ಮಾತನ್ನು ಹೇಳುತ್ತೇನೆ, ನಗರ ಪ್ರದೇಶಗಳ ನಿವೇಶನಗಳ ಮೇಲೆ ತೆರಿಗೆ ಹಾಕ ತಕ್ಕ ಕಾನೂನನ್ನು ಸರ್ಕಾರ ಜಾರಿಗೆ ಕೊಟ್ಟಿದೆ. ಸರ್ಕಾರ ತೆರಿಗೆಯನ್ನು ವಸೂಲು ಮಾಡತಕ್ಕ ಪ್ರಯತ್ನಕ್ಕೆ ಕೈ ಹಾಕಿದ್ದಾರೆ. ಚುನಾವಣೆ ಕಾಲದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಶಿವಮೊಗದಲ್ಲಿ ಚುನಾವಣೆ ಪ್ರಚಾರ ಭಾಷಣಕ್ಕೆ ಹೋದಾಗ ನಗರ ಪ್ರದೇಶಗಳಲ್ಲಿ ನಾವು ಏನು ತೆರಿಗೆ ಹಾಕಿದ್ದೇವೆ ಅದನ್ನು ನಾವು ಈಗ ಕಾರ್ಯಗತ ಮಾಡುವುದಿಲ್ಲ, ಅದನ್ನು ಪುನರ್‌ಪರಿಶೀಲನೆಗಾಗಿ ಇಟ್ಟಿದ್ದೇವೆ ಎಂದು ಹೇಳಿದರು. ಅದನ್ನು ಏತಕ್ಕೆ ಮಾಡಬೇಕಾಗಿತ್ತು, ಮಾಡಬೇಕಾದ ಅಗತ್ಯವಾದರೂ ಏನಿತ್ತು. ನಿವೇಶನಗಳ ಮೇಲೆ, ಸ್ಥಳಗಳ ಮೇಲೆ ಹೆಚ್ಚು ತೆರಿಗೆ ಹಾಕಿದರೆ ಅದರಿಂದ ಏನು ಪರಿಣಾಮವಾಗುತ್ತದೆ ಎಂಬುದು ತಿಳಿಯಲಿಲ್ಲವೇ? ಜನರ ಅಭಿಪ್ರಾಯವನ್ನು ಏನಾದರೂ ಪಡೆ ದಿದ್ದಾರೆಯೇ ಪ್ರಜ್ಞೆ ಇದ್ದರೆ ಶಾಸನ ಮಾಡುವುದಕ್ಕೆ ಸರ್ಕಾರ ಹೋಗುತ್ತಾ ಇರಲಿಲ್ಲ ಇವರು ಕಾರ್ಯಗತ ಮಾಡುವ ಕೆಲಸಗಳ ಬಗ್ಗೆ ಜನ ಮೈಮೇಲೆ ಬಿದ್ದರೆ ವಾಪಸ್ಸು ತೆಗೆದುಕೊಳ್ಳುವುದು. ಚುನಾವಣೆಯಲ್ಲಿ ಓಟು ಕೇಳುವ ಸಂದರ್ಭದಲ್ಲಿ ಇವರು ಮಾಡಿರುವ ಕಾನೂನುಗಳನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಕೊಟ್ಟಂತ ಕಾನೂನುಗಳನ್ನು ವಾಪಸ್ಸು ತೆಗೆದುಕೊಳ್ಳುವಂತ ಸನ್ನಿವೇಶ ಇವತ್ತು ಇದೆ. ಕಂದಾಯ ಇಲಾಖೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ ಇವತ್ತು ಇದರ ಕಥೆ ಹೇಳುವುದಕ್ಕೆ ಆಗುವುದಿಲ್ಲ. ಮುಖ್ಯಮಂತ್ರಿಗಳು ಶಿವಮೊಗ್ಗದಲ್ಲಿ ಒಂದು ಕಡೆ ಭಾಷಣ ಮಾಡಿದರು. ನಮ್ಮ ಸಾಧನೆಯನ್ನು ನೋಡಿ ಮತ ಕೊಡಿ ಎಂದು ಹೇಳಿದ್ದಾರೆ. ಇವರು ಮಾಡಿರುವ ಅತ್ಯಂತ ಮಹತ್ವದ ಸಾಧನೆ ಎಂದರೆ ಭೂ ಸುಧಾರಣೆ ಆದಕ್ಕಾದರೂ ಓಟು ಕೊಡಿ ಎಂದು ಹೇಳಿದ್ದಾರೆ.

ಇವತ್ತು ಸರ್ಕಾರ 1974ನೇ ಇಸವಿಯಿಂದ ಭೂ ಶಾಸನವನ್ನು ಕಾರ್ಯಗತ ಮಾಡತಕ್ಕ ಸನ್ನಿವೇಶದಲ್ಲಿ ಭೂ ನ್ಯಾಯಮಂಡಲಿಗಳು ಕೆಲಸ ಮಾಡುತ್ತಿವೆ ಇದುವರೆವಿಗೂ ಭೂ ನ್ಯಾಯ ಮಂಡಲಿಗಳಿಗೆ ಬೇಕಾದಂತ ಸಿಬ್ಬಂಧಿ ವರ್ಗ ಕೊಟ್ಟಿಲ್ಲ, ಟೈಪಿಸ್ಟ್ ಕಳುಹಿಸಿಲ್ಲ. ಇವರು ಭೂ ಸುಧಾರಣೆ ಕಾರ್ಯಕ್ರಮ ಜಾರಿಗೆ ತರುತ್ತಿದ್ದಾರೆ, ಅವರ ಲೆಕ್ಕದ ಪ್ರಕಾರ 7 ಲಕ್ಷ ಅರ್ಜಿಗಳು ಬಂದಿವೆ, ಒಂದೂವರೆ ಲಕ್ಷ ಅರ್ಜಿಗಳು ಗೇಣಿದಾರರ ಪರವಾಗಿಯೂ ಮತ್ತು 50 ಸಾವಿರ ಅರ್ಜಿಗಳು ಗೇಣಿದಾರರ ವಿರೋಧವಾಗಿಯೂ ತೀರ್ಮಾನವಾಗಿವೆ. ಈ ಶಾಸನ 1974ನೇ ಇಸವಿ, ಮಾರ್ಚಿ 1 ರಿಂದ ಜಾರಿಗೆ ಬಂತು. 1977ನೇ ಇಸವಿ ಮೂರು ವರ್ಷ ಸಂದಾಯವಾಯಿತು. ಮೂರು ವರ್ಷದಲ್ಲಿ ಎರಡು ಲಕ್ಷ ಅರ್ಜಿಗಳನ್ನು ಇತ್ಯರ್ಥ ಮಾಡಿದ್ದಾರೆ ಉಳಿದ ಅರ್ಜಿಗಳನ್ನು ಇತ್ಯರ್ಥ ಮಾಡುವುದಕ್ಕೆ ಇವರು ಜಾರಿಗೆ ತರತಕ್ಕ ಪ್ರಮಾಣದಲ್ಲಿಯೇ ಹೋದರೆ ಇನ್ನೂ ಹತ್ತು ವರ್ಷಗಳು ಬೇಕಾಗುತ್ತದೆ. ರೆವಿನ್ಯೂ ಕಾರ್ಯದರ್ಶಿಗಳಿದ್ದಾರೆ, ಅವರು ಈ ಶಾಸನವನ್ನು ಹತ್ತು ವರ್ಷಗಳವರೆಗೂ ನಡೆಸಿಕೊಂಡು ಹೋಗೋಣ ಎಂದು ಭಾವಿಸಿದ್ದಾರೆ, ಮಾನ್ಯ ರೆವಿನ್ಯೂ ಮಂತ್ರಿಗಳೂ ಕೂಡ ನಾವು ಹೇಳಿದಾಗಲೆಲ್ಲಾ ಸರಿ ಎಂದು ಒಪ್ಪುತ್ತಾರೆ. ಒಪ್ಪುತ್ತೇನೆ; ಆದರೆ ಹೋದರೆ ಮತ್ತೆ ಅವರು ಹೇಳಿದಂತೆ ಮಾಡುತ್ತಾರೆ, ಉದಾಹರಣೆಗೆ ಗೇಣಿದಾರರೆಲ್ಲಾ ಒಂದೇ ಸಾರಿ ಪರಿಹಾರ ಕೊಡಬೇಕು, ಕೊಡುವುದಕ್ಕೆ ಆಗದೇ ಇದ್ದರೆ ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲ ತಂದು ಕೊಡಬಹುದು ಎಂದು ಹೇಳಿದರು. ಹಿಂದೆ ಗೇಣಿದಾರರು 2 ಕಂತುಗಳಲ್ಲಿ ಕೊಡಬಹುದಾಗಿತ್ತು. ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ 1,000 ರೂಪಾಯಿ ಸಾಲ ತೆಗೆದುಕೊಂಡರೆ, 15 ಕಂತುಗಳಲ್ಲಿ ತೀರಿಸಬೇಕಾದರೆ, ಕಂತಿಗೆ 139 ರೂಪಾಯಿ ಆಗುತ್ತದೆ. ನಮ್ಮ ಕಡೆಯಲ್ಲಿ ಗೇಣಿ ಮೂರು ಚೀಲ ಭತ್ತ ಕೊಡುತ್ತಾರೆ ಅಂದರೆ ಒಂದೂ ಒಂದೂವರೆ ಕ್ವಿಂಟಾಲ್ ಕೊಡಬೇಕಾಗುತ್ತದೆ ಅದರ ಬೆಲೆ 160-170 ರೂಪಾಯಿ ಆಗುತ್ತದೆ. ಅವರ ಪ್ರಕಾರ ಎಕರೆಗೆ 1,000 ರೂಪಾಯಿ ಆಗುತ್ತದೆ. ಅಲ್ಲದೆ ಅದನ್ನು ಫೆಬ್ರವರಿ ತಿಂಗಳಲ್ಲಿ ಕೊಡಬೇಕು. ಒಂದು ತಿಂಗಳು ಜಾಸ್ತಿ ಆದರೂ ಜಾಸ್ತಿ ಬಡ್ಡಿ ಸೇರಿ 160 ರೂಪಾಯಿ ಆಗುತ್ತದೆ. ಒಟ್ಟು 2245 ರೂಪಾಯಿ ಆಗುತ್ತದೆ. ಜಮೀನು ಖರೀದಿಗೆ ಬದ್ಧಂತಾಗುತ್ತದೆ, ಈಗಿನ ಸುಗ್ರೀವಾಜ್ಞೆಯ ರೀತ್ಯಾ 2000 ರೂಪಾಯಿ ಇದ್ದರೆ ಒಂದೇ ಕಂತಿನಲ್ಲಿ ಕೊಡಿ, 2000 ಮೇಲೆ ಇದ್ದರೆ, ಭೂ ಅಭಿವೃದ್ಧಿ ಬ್ಯಾಂಕಿನಿಂದ 2000 ರೂಪಾಯಿಗಳನ್ನು ಸಾಲ ಪಡೆದು 20 ಕಂತುಗಳಲ್ಲಿ 5 ರೂಪಾಯಿ ಬಡ್ಡಿ ದರದಲ್ಲಿ ಕೊಡಿ ಎಂದು ಮೊನ್ನೆ ಬದಲಾವಣೆ ಮಾಡಿದ್ದಾರೆ. ಇವರ ತತ್ವ ಹೇಗೆ ಎಂದರೆ, 'ಗಟ್ಟಿ ಇದ್ದರೆ ರೊಟ್ಟಿ ಹಾಕಿ ತೆಳ್ಳಗೆ ಇದ್ದರೆ ದೋಸೆ ಹಾಕಿ' ಎಂದು ಹೇಳಿದಂತೆ ಆಗುತ್ತದೆ ಹಿಂದೆ ಮುಂಬಯಿನಲ್ಲಿ ಮುರಾರ್ಜಿ ದೇಸಾಯಿಯವರು ಮುಖ್ಯಮಂತ್ರಿಯಾಗಿದ್ದಾಗ ಗೇಣಿ ಶಾಸನ ಮಾಡಿದರು. ಅಲ್ಲಿ ಒಂದು ಎಕರೆಗೆ ಎಷ್ಟು ಗೇಣಿ ಕೊಡುತ್ತಿದ್ದರು ಎಂದರೆ 20 ರೂಪಾಯಿ ಕೊಡುತ್ತಿದ್ದರು ಒಂದು ಗುಂಟೆಗೆ 8 ಅಣೆಯಂತೆ ಒಂದು ಎಕರೆಗೆ 20 ರೂಪಾಯಿ ಆದರೆ ಗೇಣಿದಾರನಿಗೆ ಸುಲಭವಾಗುತ್ತದೆ ಒಂದು ಎಕರೆಗೆ 1,0 ರೂಪಾಯಿ ಆದರೆ, ಗೇಣಿದಾರ ಯಾವ ರೀತಿ ಕೊಡಬೇಕಾಗುತ್ತದೆ ಸೊಸೈಟಿಯವರು ಸಾಲ ವಸೂಲಿ ಬಗ್ಗೆ ಈಗಾಗಲೇ ನೋಟೀಸ್ ಕೊಟ್ಟಿದ್ದಾರೆ ಉತ್ತರ ಕನ್ನಡ ಜಿಲ್ಲೆಯಲ್ಲಿ 74ನೇ ಇಸವಿಯಿಂದ ಭೂಸುಧಾರಣಾ ಕಾನೂನನ್ನು ಜಾರಿಗೆ ಕೊಟ್ಟಿದ್ದಾರೆ. 48ನೇ ಸೆಕ್ಷನ್ ಪ್ರಕಾರ ಹೆಚ್ಚುವರಿ ಭೂಮಿ ಸರ್ಕಾರದಲ್ಲಿ ವೇಸ್ಟ್ ಆಗುತ್ತದೆ.

ಅವರು ಅಲ್ಲಿ ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಈಗ ಅವರು ಎಲ್ಲಿ ಗೇಣಿ ಕೊಡುತ್ತಾರೆ ಇದರಿಂದಾಗಿ ಜನ ತಿರುಗಿಬಿದ್ದರು. ಪತ್ರಿಕೆಯಲ್ಲಿರುವ ಭೂಸುಧಾರಣೆಯ ಮಹಾ ಅಸ್ತ್ರವನ್ನು ನೋಡಿ ಅದರ ಸಾಧನೆಯನ್ನು ನೋಡಿ, ಮತ ನೀಡಬೇಕೆಂದು ಜನರನ್ನು ಇವರು ಕೇಳುವುದಕ್ಕೆ ಹೋದಾಗ, ಜನರು ಭಯಂಕರವಾಗಿ ಬೆಂಕಿಯಂತೆ ಎದ್ದು, ಏನು ಕಾನೂನು ಮಾಡಿದ್ದೀರಿ ನಾಲ್ಕು ವರ್ಷಗಳಿಂದ ನಮ್ಮ ಜಮೀನಿಗೆ ಖಾತೆಯಾಗಿಲ್ಲ, ಕಥೆ ಹೇಳುತ್ತಿದ್ದೀರಾ? ಎಂದು ಪ್ರಶ್ನಿಸಿದರು. ಆಗ ಇವರು ಅಲ್ಲಿಂದ ಓಡಿ ಬಂದು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿದರು ಈ ಈ ಸುಗ್ರೀವಾಜ್ಞೆಯ ವಿಚಾರ ಜನಗಳಿಗೆ ಚುನಾವಣೆ ಮುಗಿದ ಮೇಲೆ ಗೊತ್ತಾಯಿತು. ಕಂದಾಯ ಇಲಾಖೆ ಏನು ಕೆಲಸ ಮಾಡುತ್ತಿದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇಣಿದಾರರ ಅರ್ಜಿಗಳು ಸುಮಾರು ಒಂದೂವರೆ ಲಕ್ಷವಿದ್ದರೆ, ಕಳೆದ ನಾಲ್ಕು ವರ್ಷಗಳಿಂದ ಕೇವಲ ಇಪ್ಪತ್ತೈದು ಸಾವಿರ ಅರ್ಜಿಗಳು ಮಾತ್ರ ತೀರ್ಮಾನವಾಗಿವೆ. ಉತ್ತರ ಕನ್ನಡದ ಜಿಲ್ಲೆಯಲ್ಲಿ ಸುಮಾರು ಎಂಬತ್ನಾಲ್ಕು ಸಾವಿರ ಗೇಣಿದಾರರಿಂದ ಅರ್ಜಿಗಳು ಬಂದಿದ್ದರೆ, ಇಲ್ಲಿಯವರೆಗೆ ಕೇವಲ ಮೂವತ್ತು ಸಾವಿರ ಅರ್ಜಿ

ಗಳು ಮಾತ್ರ ತೀರ್ಮಾನವಾಗಿವೆ. ಈ ಪ್ರಮಾಣದಲ್ಲಿ ಅರ್ಜಿಗಳನ್ನು ಇವರು ತೀರ್ಮಾನ ಮಾಡುತ್ತಾ ಹೋದರೆ, ಎಲ್ಲ ಅರ್ಜಿಗಳನ್ನೂ ತೀರ್ಮಾನ ಮಾಡಲು ಕನಿಷ್ಟ ಇನ್ನು ಇಪ್ಪತ್ತೈದು ವರ್ಷಗಳಾದರೂ ಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಗೂ ಇನ್ನಿತರ ಕಡೆಗಳಲ್ಲಿ ಎಲ್ಲೆಲ್ಲಿ ಹೆಚ್ಚು ಹೆಚ್ಚು ಗೇಣಿದಾರರ ಅರ್ಜಿಗಳಿರುತ್ತವೆ, ಅಲ್ಲಿ ಹೆಚ್ಚು ಟ್ರಿಬ್ಯುನಲ್‌ಗಳನ್ನು ನೇಮಕ ಮಾಡಿ ಅರ್ಜಿಗಳನ್ನು ಬೇಗ ಇತ್ಯರ್ಥಗೊಳಿಸುತ್ತೇವೆ ಎಂದು ಹಿಂದಿನ ಶಾಸನ ಸಭೆಯಲ್ಲಿ ಮಾನ್ಯ ಕಂದಾಯ ಸಚಿವರು ಹೇಳಿದ್ದರು. ಅವತ್ತಿನಿಂದ ಇವತ್ತಿನವರೆಗೂ ಅಲ್ಲೆಲ್ಲಾ ಹೆಚ್ಚು ನ್ಯಾಯ ಮಂಡಲಿಗಳನ್ನು ಏತಕ್ಕೆ ನೇಮಕ ಮಾಡಲಿಲ್ಲ? ಇವರಿಗೆ ಮಾಡುವ ಮನಸ್ಸಿಲ್ಲ ಆದರೆ ಹಣ ಮಾತ್ರ ಬೇಕು. ಹೆಚ್ಚಿಗೆ ನ್ಯಾಯ ಮಂಡಲಿಗಳನ್ನು ರಚಿಸಿ, ಅಲ್ಲಿಗೆ ಬೇಕಾಗುವ ಸರ್ವೆಯರ್‌ಗಳನ್ನೂ ಮತ್ತು ಗುಮಾಸ್ತರನ್ನೂ ನೇಮಕ ಮಾಡುವ ತಾಕತ್ತು ಇವರಿಗಿಲ್ಲದಿದ್ದರೆ, ಇವರು ಸರ್ಕಾರವನ್ನು ಏತಕ್ಕೆ ನಡೆಸಬೇಕು? ಒಂದೊಂದು ನ್ಯಾಯ ಮಂಡಲಿಗಳಲ್ಲಿ ಸಾಮಾನ್ಯವಾಗಿ ಇಬ್ಬಿಬ್ಬರು ಸರ್ವೇಯರ್‌ಗಳು ಇರುತ್ತಾರೆ. ಆದರೆ ಒಂದೊಂದು ತಾಲ್ಲೂಕಿನಲ್ಲಿ ಗೇಣಿದಾರರ ಅರ್ಜಿಗಳು ಐದು ಸಾವಿರದಿಂದ ಹತ್ತು ಸಾವಿರದವರೆಗೂ ಇರುತ್ತವೆ. ಈ ಇಬ್ಬರು ಸರ್ವೇಯರ್‌ಗಳು ಈ ಜಮೀನುಗಳೆಲ್ಲವನ್ನು ಸರ್ವೆ ಮಾಡಬೇಕಾದರೆ ಎಷ್ಟು ವರ್ಷ ಬೇಕು? ಇದು ರೀತಿ ನೀತಿಯೇ? ಕಾನೂನು ಮಾಡಿದ್ದಾರೆ. ಆದರೆ ಅದನ್ನು ಜಾರಿಗೊಳಿಸುವ ಮನಸ್ಸಿಲ್ಲ. ಮಾತೆತ್ತಿದರೆ ಬ್ಯೂರಾಕ್ರಸಿ ಎಂದು ಹೇಳುತ್ತಾರೆ. ಯಾರು ಬ್ಯುರಾಕ್ರಸಿ ಮಂತ್ರಿಗಳಾಗಿರುವ ನಿಮಗೆ ತಾಕತ್ತು ಇಲ್ಲದೇ ಹೋದರೆ, ಅಧಿಕಾರಿಗಳನ್ನು ಹತೋಟಿಯಲ್ಲಿಟ್ಟುಕೊಂಡು ಆಜ್ಞೆ ಹೊರಡಿಸುವುದಕ್ಕೆ ನಿಮಗೆ ಯೋಗ್ಯತೆ ಇಲ್ಲದೇ ಹೋದರೆ ಅಧಿಕಾರ ಏತಕ್ಕೆ ನಡೆಸುತ್ತೀರಿ? ಭೂಹೀನರಿಗೆ ಜಮೀನು ಹಂಚಬೇಕೆಂಬ ಉದ್ದೇಶದಿಂದ ಯಾವ ಯಾವ ಗ್ರಾಮಗಳಲ್ಲಿ ಗೋಮಾಳ ಇದೆಯೋ, ಅಂಥವುಗಳನ್ನು ಅಸಿಸ್ಟೆಂಟ್ ಕಮಿಷನರ್‌ರವರು ರೀ ಅಪ್ರೋಪ್ರಿಯೇಷನ್ ಮಾಡಿ ಆ ಜಮೀನನ್ನು ಭೂ ಹೀನರಿಗೆ ಹಂಚಬೇಕೆಂದು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ ಮತ್ತು ಎಲ್ಲ ಕಡೆಗಳಲ್ಲೂ ಇದಕ್ಕೆ ಪೂರಕವಾಗುವಂತೆ ದರಖಾಸ್ತು ಅಡ್ವೈಸರಿ ಸಮಿತಿಗಳನ್ನೂ ನೇಮಕ ಮಾಡಿದ್ದಾರೆ. ಆ ಸಮಿತಿಯವರು ಜಮೀನುಗಳನ್ನು ಹಂಚಬೇಕೆಂದು ಸರ್ಕಾರಕ್ಕೆ ಶಿಫಾರಸು ಮಾಡಿದರೆ, ಕಂದಾಯ ಇಲಾಖೆಯ ಕಾರ್ಯ ದರ್ಶಿಯವರು ಒಂದು ಸುತ್ತೋಲೆಯನ್ನು ಹೊರಡಿಸಿ ಯಾವ ಗೋಮಾಳಗಳನ್ನೂ ಮತ್ತು ದರಖಾಸ್ತು ಜಮೀನುಗಳನ್ನೂ ಮಂಜೂರು ಮಾಡತಕ್ಕದ್ದಲ್ಲ ಎಂದು ತಿಳಿಸುತ್ತಾರೆ. ಇದು ಎಂಥಾ ನ್ಯಾಯ?

ಇನ್ನು ನಿವೇಶನ ಹಂಚುವುದನ್ನೂ ಸರ್ಕಾರದವರು ಮಾಡುತ್ತಿದ್ದಾರೆ. ಮಾನ್ಯ ಘೋರ್ಪಡೆಯವರನ್ನು ನಮ್ಮ ಕಡೆಗೆ ಕರೆದುಕೊಂಡು ಹೋಗುತ್ತಾನೆ. ಅವರು ಬಂದು ನೋಡಲಿ. ಸರ್ಕಾರದವರು ಹಂಚಿರುವ ನಿವೇಶನಗಳಲ್ಲಿ ಇನ್ನು ಐವತ್ತು ವರ್ಷ ಕಳೆದರೂ ಮನೆ ಕಟ್ಟಿಕೊಳ್ಳುವುದಕ್ಕಾಗುವುದಿಲ್ಲ. ಹಾಗೇನಾದರೂ ಕಟ್ಟಿದರೆ ಅವರಿಗೆ ನಾನು ಶರಣಾಗುತ್ತೇನೆ. ಅಂಥಾ ನಿವೇಶನಗಳನ್ನು ಇವತ್ತಿನ ದಿವಸ ಮಂಜೂರು ಮಾಡಿದ್ದಾರೆ. ಈ ಜನ ಹಿಂದೆ ಬೀದಿಯಲ್ಲೇನೂ ಬಿದ್ದಿರಲಿಲ್ಲ, ಮನೆಯಲ್ಲಿಯೇ ವಾಸಿಸುತ್ತಿದ್ದವರು. ಅಂಥವರಿಗೆ, ಇವತ್ತು ಇನ್ನೂರೈವತ್ತು ರೂಪಾಯಿ ಕೊಟ್ಟು ಗುಡಿಸಲು ಕಟ್ಟಿಸಿ ಕೊಡುತ್ತಾರಂತೆ. 250 ರೂಪಾಯಿ ಕೊಟ್ಟರೆ, ಈಗಿರುವ ಗುಡಿಸಲನ್ನು ಕಿತ್ತು ಹಾಕಿ, ಇನ್ನೊಂದು ಗುಡಿಸಲಿಗೆ ಸಾಮಾನು ತಂದು ಹಾಕಲಿಕ್ಕೆ ಇನ್ನೂರೈವತ್ತು ರೂಪಾಯಿ ಖರ್ಚಾಗಿಬಿಡುತ್ತದೆ. ಹೀಗೆ ಮಾಡಿದರೆ ಒಂದು ಸಾಧನೆ ಮಾಡಿದಂತಾಗುತ್ತದೆಂದು ಇವರು ತಿಳಿದುಕೊಂಡಿದ್ದಾರೆಯೇ? ನ್ಯಾಯವಾದ ರೀತಿಯಲ್ಲಿ ಸಾಧನೆಗಳನ್ನು ಮಾಡಿ. ಭಿಕ್ಷೆ ಕೊಡುವ ರೀತಿಯಲ್ಲಿ ಕೊಡಬೇಡಿ. ಬಡವರಿಗೆ ಕೊಡುವ 250 ರೂಪಾಯಿಗಳನ್ನು ಐ.ಎ.ಎಸ್. ಅಧಿಕಾರಿಗಳಿಗೆ ಕೊಟ್ಟರೆ, ಅವರು ಅದರಲ್ಲಿ ಮನೆಯನ್ನು ಕಟ್ಟಿಸಿಕೊಳ್ಳುತ್ತಾರೆಯೇ? ಇವರಿಗೆ ಸಂಬಳ ಬರುತ್ತದೆ, ಆದಾಯವಿರುತ್ತದೆ. ಬೆಂಗಳೂರಿನಲ್ಲಿ ಇವರಿಗೆ ಸಾವಿರಾರು ಗಟ್ಟಲೆ ಸಾಲ ಕೊಡುತ್ತಾರೆ. ಅರ್ಬನ್ ಡೆವಲಪ್‌ಮೆಂಟ್ ಬೋರ್ಡ್ ಇವರಿಗೆ ನಿವೇಶನ ಕೊಡುತ್ತದೆ. ಮುಖ್ಯ ಮಂತ್ರಿಗಳ ಅಳಿಯಂದಿರಿಗೆ, ಮಗಳಿಗೆ ನಿವೇಶನ ಕೊಡುತ್ತಾರೆ. ಆದರೆ ಬಡವರಿಗೆ ಕೊಡುವ ನಿವೇಶನದಲ್ಲಿ ಹಿಂದಕ್ಕೆ ಮರ ನೆಡುವುದಕ್ಕಾಗುವುದಿಲ್ಲ. ಮುಂದಕ್ಕೆ ಕೊಟ್ಟಿಗೆ ಕಟ್ಟಿಕೊಳ್ಳುವುದಕ್ಕಾಗುವುದಿಲ್ಲ. ಅದೂ ಒಳ್ಳೆಯ ಜಾಗದಲ್ಲಿ ನಿವೇಶನ ಕೊಡುವುದಿಲ್ಲ. ಏನೋ ಅಂತ ಒಂದು ನಿವೇಶನ ಕೊಟ್ಟು, ಆ ನಿವೇಶನದಲ್ಲಿ 250 ರೂಪಾಯಿಗಳಿಗೆ ಟೈಪ್ ಡಿಸೈನ್‌ನಲ್ಲಿ ಒಂದು ಗುಡಿಸಲನ್ನು ಕಟ್ಟುವ ಹಾಗೆ ಚೀಫ್ ಇಂಜಿನಿಯರ್‌ರವರು ಒಂದು ಡಿಸೈನ್ ಹುಡುಕಿಬಿಟ್ಟಿದ್ದಾರೆ. ಅದರ ಪ್ರಕಾರವೇ ಮನೆ ಕಟ್ಟಿಸಬೇಕು. ಈ

ಡಿಸೈನ್ ಪ್ರಕಾರ ನಮ್ಮ ಮಲೆನಾಡಿನಲ್ಲೇನಾದರೂ ಮನೆ ಕಟ್ಟಿದರೆ, ಒಂದು ಸಲ ಗಾಳಿ ಬಂದು ಬಿಟ್ಟಿತ್ತೆಂದರೆ ಅದು ಹಾರಿಕೊಂಡು ಹೋಗಿಬಿಡುತ್ತದೆ. ಟೈಪ್ ಡಿಸೈನ್ ಕಟ್ಟಿಸಬೇಕೆಂಬ ಇಚ್ಛೆಯಿದ್ದರೆ ಕಟ್ಟಿಸಿ ಆದರೆ ಅದನ್ನು ಕಟ್ಟಿಸಲಿಕ್ಕೆ ಸುಮಾರು ಎರಡು ಸಾವಿರ ರೂಪಾಯಿಗಳಾದರೂ ಕೊಡಿ.

ಶ್ರೀ ಎಂ. ವೈ. ಘೋರ್ಪಡೆ.—ನಮ್ಮ ಕಡೆ ಇಂಥಾ ಮನೆಗಳನ್ನು ಸಾಕಷ್ಟು ಕಟ್ಟಿಸಿದ್ದೇವೆ. ನಿಮ್ಮ ಕಡೆ ಜಾಸ್ತಿ ಮಳೆ ಬೀಳುವುದರಿಂದ 1 50 ರೂಪಾಯಿಗಳ ವೆಚ್ಚದ ಮನೆಗಳನ್ನು ಕಟ್ಟಿಸಿ, ನಾವು ಸಿಮೆಂಟ್ ಪಿಲ್ಲರುಗಳನ್ನು ಕೊಡುತ್ತೇವೆ. ಯಾವ ಯಾವ ಪ್ರದೇಶಗಳಲ್ಲಿ ಯಾವ ಯಾವ ಮಾದರಿ ಮನೆಗಳು ಸರಿಹೋಗುತ್ತವೆ, ಅಂತಹುಗಳನ್ನು ಕಟ್ಟಿಸಲಿಕ್ಕೆ ಸಾಕಷ್ಟು ಅವಕಾಶವಿದೆ. ನಮ್ಮ ಕಡೆ ಗುಡಿಸಲುಗಳನ್ನು ಕಟ್ಟಿಸುತ್ತಿದ್ದೇವೆ, ನಿಮ್ಮ ಕಡೆಯೂ ಗುಡಿಸಲುಗಳನ್ನು ಕಟ್ಟಿಸಿಕೊಳ್ಳಿ ಎಂದು ಹೇಳುವುದರಲ್ಲಿ ನ್ಯಾಯವಿಲ್ಲವೆಂದು ನಮಗೆ ಗೊತ್ತು. ಈಗಾಗಲೇ ನಮ್ಮ ಕಡೆ ಮೂರು-ನಾಲ್ಕು ಸಾವಿರ ಗುಡಿಸಲುಗಳನ್ನು ಕಟ್ಟಿಸಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—250 ರೂಪಾಯಿಗಳನ್ನು ಕೊಡುವುದಕ್ಕೆ ಹೋಗಬೇಡಿ ಎರಡು ಸಾವಿರ ರೂಪಾಯಿಗಳನ್ನು ಕೊಡಿ ಮೂಗಿಗೆ ತುಪ್ಪ ಹಾಕುವ ಕೆಲಸ ಮಾಡುವುದಕ್ಕೆ ಹೋಗಬೇಡಿ ಒಂದು ಊರಿನಲ್ಲಿ ಕನಿಷ್ಟ ಹತ್ತು ಮನೆ ಕಟ್ಟಿಸಿದರೂ, ಇಪ್ಪತ್ತು ವರ್ಷಗಳು ಶಾಶ್ವತವಾಗಿರುವಂಥ ಕೆಲಸ ಮಾಡಿ. ಇನ್ನೊಂದು ವಿಚಾರ ಈಗ ಸರ್ಕಾರದವರು ಕೂಲಿಗಾರರಿಗೆ ಮತ್ತು ಬಡವರಿಗೆ ಮನೆಗಳ ಸೌಲಭ್ಯವನ್ನು ಕೊಡುತ್ತಿದ್ದಾರೆ. ಅವರು ಆ ಮನೆಗಳನ್ನು ಹೇಗೆ ಕಟ್ಟುತ್ತಾರೆ, ಅವರು ಒಂದು ದಿನ ಕೂಲಿ ಮಾಡದಿದ್ದರೆ, ಅಂದು ಊಟವಿರುವುದಿಲ್ಲ, ಅನ್ನವಿರುವುದಿಲ್ಲ. ಅವರು ದುಡಿದು ತಿನ್ನಬೇಕು. ಅಂತಹ ಸಂದರ್ಭದಲ್ಲಿ ಅವರು ಈ ಕಡೆ ಮನೆಯನ್ನು ಹೇಗೆ ಕಟ್ಟುತ್ತಾರೆ ನೀವು ಕೊಡುವ ಸಾಲಕ್ಕೆ ಇನ್ನೂ ಐನೂರು ರೂಪಾಯಿಗಳನ್ನು ಸೇರಿಸಿ ಮನೆಯನ್ನು ಸಹ ನೀವೇ ಕಟ್ಟಿಸಿಕೊಡಿ ಕಂಟ್ರಾಕ್ಟರುಗಳಿಗೆ ಮಾತ್ರ ಈ ಕೆಲಸವನ್ನು ಕೊಡಬೇಡಿ. ಎಷ್ಟೋ ಮನೆಗಳ ಕೆಲಸವನ್ನು ಇನ್ನೂ ಪ್ರಾರಂಭವನ್ನೇ ಮಾಡಿಲ್ಲ ಸರ್ಕಾರದವರು ಇಲ್ಲಿಯವರೆಗೆ ಕೊಟ್ಟಿರುವ ಮನೆಗಳಲ್ಲಿ ಪೂರ್ಣಗೊಂಡಿರುವ ಮನೆಗಳ ಸಂಖ್ಯೆ ಎಷ್ಟು?

ಶ್ರೀ ಎಂ. ವೈ. ಘೋರ್ಪಡೆ.—ಈಗಾಗಲೇ 45 ಸಾವಿರ ಮನೆಗಳು ಪೂರ್ತಿಯಾಗಿವೆ. ಇನ್ನೂ 26 ಸಾವಿರ ಮನೆಗಳು ಪೂರ್ತಿಯಾಗುವುದರಲ್ಲಿವೆ. ಅದೂ ಅಲ್ಲದೆ 7,800 ಮನೆಗಳಲ್ಲಿ ಈಗಾಗಲೇ 1,500 ಮಂಜೂರು ಮಾಡಿದ್ದೇವೆ. ನಿಮ್ಮ ತಾಲ್ಲೂಕಿನಲ್ಲಿ ನೀವೇ ಇದನ್ನು ನೋಡಿಲ್ಲ ಅಲ್ಲಿ ನಾವು ಎಷ್ಟು ಕಟ್ಟಿಸಿದ್ದೇವೆ ಎಂಬುದನ್ನು ದಯವಿಟ್ಟು ಹೋಗಿ ನೋಡಿ ನಮ್ಮಲ್ಲಿ ಮನೆ ಕಟ್ಟಿಸಲಿಕ್ಕೆ ಮೂರು ವಿಧದ ಮಾದರಿಗಳಿವೆ. ನಿಮ್ಮ ಪ್ರದೇಶಕ್ಕೆ ಯಾವುದು ಅನುಕೂಲವೇ ಆ ಮಾದರಿಯನ್ನು ಕಟ್ಟಿಸಿಕೊಳ್ಳಿ.

ಶ್ರೀ ಕಾಗೋಡು ತಿಮ್ಮಪ್ಪ.—ಪರದೇಶಿ ಮುಂದೆ ಕಷ್ಟ ಪಟ್ಟು ದುಡಿದು, ಆ ಮನೆಯನ್ನು ಮುಂದೆ ಬೇಕಾದರೆ ದೊಡ್ಡದು ಮಾಡಿಕೊಳ್ಳಲು ಅನುಕೂಲವಾಗುವಂತೆ ಈಗಲೇ ನಾವು ಒಂದು ಉತ್ತಮ ಮನೆಯನ್ನು ಕಟ್ಟಿಸಿಕೊಡುವುದು ಒಳ್ಳೆಯದು. ಅದು ಬಿಟ್ಟು ಟೈಪ್ ಡಿಸೈನ್ ಎಂದು ಮಾಡಿ ಪುನ ಅದನ್ನು ಸರಿಪಡಿಸುವುದಕ್ಕೆ ಮಂತ್ರಿ ಮಂಡಲದವರೆಗೂ ಬರುವುದಾದರೆ, ಇದು ಯಾವ ರೀತಿಯ ಆಡಳಿತ ಎಂದು ನನಗೆ ಗೊತ್ತಾಗುವುದಿಲ್ಲ.

SRI D. DEVARAJ URS.—If that is being done, it is throughly wrong. It is against Government's intention. I will verify it. We will punish the B D.Os. if they have done like that. Let us not make sweeping remarks. I know there are instances of what you say in some places, The local level officers have handed over to contractors but not everywhere. It is wrong and against the Government Order We will look into it. If you give instances, we will take action. It is against the spirit of the Government Order.

5-30 P.M.

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀಮಾನ್ ಘೋರ್ಪಡೆಯವರು ಇದೇ ಮಾತನ್ನು ಹಿಂದೆ ಒಂದು ಸಾರಿ ಹೇಳಿದ್ದರು. ಆದರೆ ಇವೊತ್ತಿನವರೆಗೂ ಕೂಡ ನಿಮ್ಮ ಆಜ್ಞೆ ಹೋಗಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಅದರ ಬಗ್ಗೆ ಬೇಕಾದರೆ ವೆರಿಫೈ ಮಾಡಿಸೋಣ.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಸೊಂಡೂರಿನಲ್ಲಿ ಕಂಟ್ರಾಕ್ಟುದಾರರಿಗೆ ಕೊಟ್ಟು ಮನೆಗಳನ್ನು ಕಟ್ಟಿಸಿದ್ದಾರೆ,

ಶ್ರೀ ಕಾಗೋಡು ತಿಮ್ಮಪ್ಪ,—ಅಧ್ಯಕ್ಷರೇ, ಇವೊತ್ತು ಕಂದಾಯ ಇಲಾಖೆ ಏನು ಇದೆ, ಇದಕ್ಕೆ ಹೆಚ್ಚು ಹಣ ಕೊಡತಕ್ಕ ಅಗತ್ಯ ಇಲ್ಲ ಎಂದು ಹೇಳುತ್ತೇನೆ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಹೆಚ್ಚು ಲಕ್ಷ್ಯ ಕೊಡಬೇಕು ಏಕೆಂದರೆ ತಮ್ಮ ಚುನಾವಣೆ ಕಾಲದಲ್ಲಿ ಭೂಸುಧಾರಣೆ ಮಹತ್ ಸಾಧನೆ ಎಂದು ಹೇಳಿದ್ದೀರಿ. ಇದರ ಬಗ್ಗೆ-ಯಾವರೀತಿ ಸುಧಾರಣೆಯಾಗಿದೆ ಎನ್ನುವ ಬಗ್ಗೆ ಭೂ ನ್ಯಾಯ ಮಂಡಲಿಯವರನ್ನು ತಮ್ಮ ಇಲಾಖಾ ಕಾರ್ಯದರ್ಶಿಯವರನ್ನು, ಅದಕ್ಕೆ ಸಂಬಂಧಪಟ್ಟ ಮಂತ್ರಿಗಳನ್ನು ಕರೆದು ಕೇಳಿದರೆ ಗೊತ್ತಾಗುತ್ತದೆ, ಇವೊತ್ತು ಮಲೆನಾಡು ಪ್ರದೇಶದಲ್ಲಿ ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡು ಗುಂಟೆ, ಮೂರು ಗುಂಟೆ ಐದು ಗುಂಟೆ, ಮತ್ತು ಹತ್ತು ಗುಂಟೆಗೆ ಒಂದೊಂದು ಸರ್ವೆ ನಂಬರು ಇದೆ. ಇದಕ್ಕೆ ಇವೊತ್ತು ಪೋಡಿ ಫೀಸ್ ಕೊಡಬೇಕು. ಇವೊತ್ತು ಪ್ರತಿ ಪೋಡಿಗೆ 8 ರೂಪಾಯಿ ಕೊಡಬೇಕಾಗುತ್ತದೆ, ಇವೊತ್ತು ಒಂದೊಂದು ಗುಂಟೆಗೆ ಒಂದೊಂದು ಸರ್ವೆ ನಂಬರು ಇದೆ ಅಂತಹ ಕಡೆಗಳಲ್ಲಿ ಅವನಲ್ಲಿ ಇರತಕ್ಕ ಒಟ್ಟು ಗುಂಟೆಗಳ ಲೆಕ್ಕ ತೆಗೆದುಕೊಂಡರೆ ಒಂದು ಎಕರೆ ಬರಬಹುದು. ಅವನು ಕಟ್ಟತಕ್ಕ ಹಣ ಲೆಕ್ಕ ತೆಗೆದುಕೊಂಡರೆ ಆತನಲ್ಲಿ ಇರತಕ್ಕ ಒಂದು ಎಕರೆ ಜಮೀನಿಗೆ ಹತ್ತು ಸರ್ವೆ ನಂಬರ್ ಬಂದರೆ, ಆತನು 80 ರೂಪಾಯಿ ಪೋಡಿ ಕೊಡಬೇಕಾಗುತ್ತದೆ. ಇವೊತ್ತು ಆತನಿಗೆ ಆಕ್ಯುಪೆನ್ಸಿ ರೈಟ್ ಸಿಕ್ಕುತ್ತಿಲ್ಲ. ಮೊದಲು ನನಗೆ ಈ ಇಲಾಖೆಯಲ್ಲಿರತಕ್ಕ ಕಾರ್ಯದರ್ಶಿಯವರ ಮೇಲೆ ನಂಬಿಕೆ ಇತ್ತು. ಈಗ ಅವರು ಹಾಕತಕ್ಕ ಅವೆ ಕಾಲನ ನಡಿಗೆಯನ್ನು ನೋಡಿದರೆ ಅದು ಈಗಿನ ಕಾಲದಲ್ಲಿ ನಡೆಯುತಕ್ಕದ್ದಲ್ಲ. ಸರ್ಕಾರದವರು ಹೇಳತಕ್ಕದ್ದೂ ಅವರು ನಡೆಸತಕ್ಕದ್ದು ನೋಡಿದರೆ ಏನೇನು ಸಂಬಂಧವಿಲ್ಲ, ಆದುದರಿಂದ ಅವರಿಗೆ ಸ್ವಲ್ಪ ಚಾಟಿ ಹಾಕತಕ್ಕ ಕೆಲಸವನ್ನು ಸಂಬಂಧಪಟ್ಟ ಮಂತ್ರಿಗಳು ಮಾಡದೇ ಇರುವುದರ ಬಗ್ಗೆ ಅತ್ಯಂತ ವಿಷಾದದಿಂದ ಹೇಳಬೇಕಾಗಿದೆ ಇನ್ನು ಭೂಮಿ ಹಂಚಿರತಕ್ಕದ್ದರಲ್ಲೇ ಹೇಳುವುದಾದರೆ ಫಾರೆಸ್ಟ್ ಇಲಾಖೆಗೆ ಯಾವ ಜಮೀನು ಹೋಗುತ್ತದೆ ಸರ್ವೆ ಇಲಾಖೆಗೆ ಯಾವ ಜಮೀನು ಹೋಗುತ್ತದೆ ಎನ್ನುವುದು 5 ವರ್ಷದಿಂದ ಇವೊತ್ತಿನವರೆಗೂ ಆಗಿಲ್ಲ ಎಂದರೆ ಏನು ಮಾಡಬೇಕು ಇವೊತ್ತು ತಾಲ್ಲೋಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಕೋ ಆರ್ಡಿನೇಷನ್ ಕಮಿಟಿ, ಖಾಸಗಿ ಸದಸ್ಯರನ್ನು ನೇಮಕ ಮಾಡಿ ಅವರಿಗೆ 51 ರೂಪಾಯಿ ದಿನಭತ್ಯ ಕೊಡುತ್ತಿದ್ದಾರೆ. ನಮ್ಮಗಳಿಗೆ ದಿನಭತ್ಯ 31 ರೂಪಾಯಿ ಕೊಡುತ್ತಿದ್ದಾರೆ ಇವೊತ್ತು 20 ಅಂಶದ ಕಾರ್ಯಕ್ರಮವನ್ನು ವಿಮರ್ಶೆ ಮಾಡತಕ್ಕವರಿಗೆ 51 ರೂಪಾಯಿ ದಿನಭತ್ಯ ಕೊಡುತ್ತಿದ್ದಾರೆ, ಈಗ 5-10 ವರ್ಷಗಳಾದರೂ ದರಖಾಸ್ತು ಮಂಜೂರು ಆಗದೇ ಇದ್ದರೆ, ಸರ್ಕಾರ ಯಾವರೀತಿ ನಡೆಯುತ್ತಿದೆ ಎಂದು ನೋಡಬೇಕಾಗುತ್ತದೆ. ಆದುದರಿಂದ ಈ ಕಂದಾಯ ಇಲಾಖೆಗೆ ಹೆಚ್ಚುವರಿ ಹಣ ಖಂಡಿತ ಕೊಡತಕ್ಕದ್ದಲ್ಲ ಅವರು ಹೆಚ್ಚುವರಿ ಹಣ ಪಡೆಯಲಿಕ್ಕೆ ಯಾವ ಯೋಗ್ಯತೆಯನ್ನು ಪಡೆದಿಲ್ಲ ಎಂದು ಹೇಳಿ ಇದರ ಬಗ್ಗೆ ಸಂಪೂರ್ಣ ವಿರೋಧ ಮಾಡುತ್ತೇನೆ.

ಅಧ್ಯಕ್ಷರೇ ಇನ್ನು ಡಿಮ್ಯಾಂಡ್ ನಂಬರ್ 38ರಲ್ಲಿ ನಮ್ಮ ಸಹಕಾರ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಯನ್ನು ಇಟ್ಟಿದ್ದಾರೆ ಈ ಸಹಕಾರ ಸಂಘಗಳನ್ನು ನಾವು ಪುನರ್ ಸಂಘಟನೆ ಮಾಡಿದ್ದೇವೆ ಅದನ್ನು ಮಾಡಿದ ಮೇಲೆ ಹೆಚ್ಚು ಕೆಲಸ ಮಾಡುತ್ತಿವೆ ಎಂದು ಆಗಲೇ ನಮ್ಮ ಮುಖ್ಯಮಂತ್ರಿಗಳು ಹೇಳಿದರು ಆದರೆ ಈ ಪುನರ್ ಸಂಘಟನೆಯ ವಿಷಯ ಇವೊತ್ತಿನವರೆಗೂ ಕೋಲಾರ ಜಿಲ್ಲೆಯಲ್ಲಿ ಏತಕ್ಕೆ ಮಾಡಲಿಲ್ಲ? ಅಲ್ಲಿ ಪುನರ್ ಸಂಘಟನೆ ಮಾಡಲಿಕ್ಕೆ ಸಮಯ ಸಿಕ್ಕಿಲ್ಲ ಎಂದು ಕಾಣುತ್ತದೆ

ಶ್ರೀ ಕೆ. ಎಚ್. ರಂಗನಾಥ್,—ಅಲ್ಲಿ ಸ್ವಲ್ಪ ತಕರಾರು ಇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಅದು ಯಾರ ತಕರಾರು ಎನ್ನುವುದನ್ನು ನೋಡಬೇಕು. ಇವೊತ್ತು ದಾರವಾಡ ಜಿಲ್ಲೆಯಲ್ಲಿ ಆಗಿಲ್ಲ. ಕೋಲಾರ ಜಿಲ್ಲೆ, ದಾರವಾಡ ಜಿಲ್ಲೆ ಈ ಎರಡು ಕಡೆಗಳಲ್ಲಿ ಪುನರ್‌ಸಂಘಟನೆ ಮಾಡುವುದಕ್ಕೆ ಪ್ರಯತ್ನ ಮಾಡಿಲ್ಲ.

ಶ್ರೀ ಕೆ ಎಚ್. ರಂಗನಾಥ್.—17 ತಾಲ್ಲೋಕುಗಳನ್ನು, ಒಂದು ಜಿಲ್ಲೆಯನ್ನು ಬಿಟ್ಟರೆ ಮಿಕ್ಕ ಕಡೆಗಳಲ್ಲಿ ಪುನರ್‌ಸಂಘಟನೆ ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಅವರ ಪುನರ್‌ಸಂಘಟನೆ ನಿಯಮಾವಳಿ ಪ್ರಕಾರ ವ್ಯವಸಾಯಗಾರರಿಗೂ, ವ್ಯವಸಾಯಗಾರರಲ್ಲದವರಿಗೂ ಕೂಡ ಎಲ್ಲ ಸೌಕರ್ಯವನ್ನು ಪಡೆಯುವುದಕ್ಕೆ ಸಾಕಷ್ಟು ಅವಕಾಶ ಇದೆ. ಆ ಬಗ್ಗೆ ನನ್ನ ಭಿನ್ನಾಭಿಪ್ರಾಯವಿಲ್ಲ. ಕೆಲಸ ಮಾತ್ರ ಆಗಿಲ್ಲ, ಕೆಲಸ ಮಾಡಬೇಕಾದ್ದು ಇನ್ನೂ ಇದೆ. ಅವರು ಸಹಕಾರಸಂಘಗಳನ್ನು ಪುನರ್‌ಸಂಗಟನೆ ಮಾಡಿದ ಮೇಲೆ, ಕಾಂಗ್ರೆಸ್ ಸ್ನೇಹಿತರನ್ನೇ ನೇಮಿಸಿದ್ದಾರೆ. ಸಹಕಾರ ಸಂಘಗಳನ್ನು ಪುನರ್‌ಸಂಘಟನೆ ಮಾಡಿದಮೇಲೆ ಏನಾದರೂ ಆಗಲಿ ಸಕ್ಕರೆಯನ್ನು ಮಾತ್ರ ಹಂಚುತ್ತಿದ್ದಾರೆ ಈಗ ಸಕ್ಕರೆ ಹಂಚುವ ಮುಖಾಂತರ ಕಾಂಗ್ರೆಸ್ ಸ್ನೇಹಿತರು ತಮ್ಮ ಪುನರ್ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದಾರೆ. ಪಾಪ ಕಾಂಗ್ರೆಸ್ ಸ್ನೇಹಿತರು ಪುನರ್‌ವ್ಯವಸ್ಥೆ ಮಾಡಿಕೊಳ್ಳಲಿ, ಏಕೆಂದರೆ ಅವರು ಇನ್ನು ಅರ್ಧವರ್ಷ ಮುಕ್ಕಾಲು ವರ್ಷ ಕಳೆದರೆ ಜೈಲಿಗೆ ಹೋಗಬೇಕಾಗಿದೆ. ಬೇಗ ಜೈಲು ರಿಪೇರಿ ಮಾಡಿಕೊಳ್ಳಿ ಎಂದು ಈಗಾಗಲೇ ನಮ್ಮ ಮಾನ್ಯ ಸದಸ್ಯರೊಬ್ಬರು ಹೇಳಿದ್ದಾರೆ. ಇವೊತ್ತು ಒಂದೇ ಉದ್ದೇಶ ಹೊಂದಿರತಕ್ಕ ಎಲ್ಲಾ ಸಹಕಾರ ಸಂಘಗಳು ಐಕ್ಯವಾಗಿ ಕೆಲಸ ಮಾಡಬೇಕು. ಈಗ ನಮ್ಮಲ್ಲಿ ಅನೇಕ ಸಹಕಾರ ಸಂಘಗಳು ಇವೆ. ತೋಟಗಾರಿಕೆ, ಅಡಿಕೆ ಬೆಳೆಗಾರರು, ಮುಂತಾದ ಸಹಕಾರ ಸಂಘಗಳಲ್ಲಿ ಅನೇಕ ಜನ ಸದಸ್ಯರು ಎಲ್ಲಾ ಸಂಘಗಳಲ್ಲಿಯೂ ಸೇರಿಕೊಂಡಿದ್ದಾರೆ. ನಮ್ಮಲ್ಲಿ ತೋಟಗಾರಿಕೆ ಸೊಸೈಟಿ ಎಂದು ಇದೆ. ಆ ಸೊಸೈಟಿಯನ್ನು ಹಾಗೆ ಬಿಟ್ಟುಕೊಟ್ಟಿದ್ದಾರೆ. ಆದರೆ ಎರಡು ಮೂರು ಕಡೆಗಳಲ್ಲಿ ಅಡಿಕೆ ಬೆಳೆಗಾರರಿಗೆ ಬೇರೆ ಮಾಡಿದ್ದಾರೆ, ಇವೊತ್ತು ಒಂದು ಸಹಕಾರ ಸಂಘದಲ್ಲಿ ಇರತಕ್ಕ ಷೇರುದಾರರು ಮತ್ತೊಂದು ಸಹಕಾರಸಂಘದಲ್ಲಿಯೂ ಷೇರುದಾರರಾಗಿರುತ್ತಾರೆ ಇದನ್ನು ಪರಿಶೀಲನೆ ಮಾಡುವವರು ಯಾರು ? ಇವೊತ್ತಿನವರೆಗೂ ಪರಿಶೀಲನೆ ಮಾಡತಕ್ಕಂತಹ ಕೆಲಸ ನಡೆದಿಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ, ಒಂದೇ ಉದ್ದೇಶವನ್ನು ಹೊಂದಿರುವ ಸೊಸೈಟಿಗಳನ್ನೆಲ್ಲಾ ಒಂದೇ ಕಡೆ ಸೇರಿಸಬೇಕೆಂದು ಏನು ಮಾಡಿದ್ದೀರಿ, ಅದರಲ್ಲಿ ಬಡವರಿರಲಿ ಸಾಹುಕಾರರಿರಲಿ, ದೊಡ್ಡವರಿರಲಿ, ಸಣ್ಣವರಿರಲಿ, ಮಾವ ಇರಲಿ, ಅಳಿಯ ಇರಲಿ, ಕಾಂಗ್ರೆಸ್‌ನವರಿರಲಿ ಕಾಂಗ್ರೆಸ್‌ನವರಲ್ಲದಿರಲಿ, ನೆಂಟ ಇರಲಿ, ನೆಂಟರಿಲ್ಲದಿರಲಿ, ಎಲ್ಲರನ್ನೂ ಒಂದೇ ಕಡೆ ಸೇರಿಸಿ ಒಂದು ನ್ಯಾಯ ಮಾರ್ಗದಲ್ಲಿ ಹೋಗುತ್ತೀರಿ ಎಂದು ನಾನು ಭಾವಿಸಿದ್ದೇನೆ ಇದುವರೆಗೆ ಅನೇಕ ಕಡೆಗಳಲ್ಲಿ ಸಹಕಾರ ಸಂಘಗಳನ್ನು ಪುನರ್‌ಸಂಘಟನೆ ಮಾಡದೆ ಮರ್ಜ್ ಮಾಡಿದ್ದಾರೆ. ಆದರೆ ತಾವು ಇದರಲ್ಲಿ ಒಂದಕ್ಕೊಂದಕ್ಕೆ ತಾರತಮ್ಯ ಮಾಡುವುದಕ್ಕೆ ಹೋಗಬೇಡಿ. ತಾವು ಕೆಲವು ಗ್ರೈಡ್ ಲೈನ್ಸ್ ಇಟ್ಟುಕೊಂಡು ವಯಬಿಲಿಟಿ ಇರಬೇಕು ಅದು ಇರಬೇಕು. ಇದು ಇರಬೇಕು ಎಂದು ನಿಯಮಗಳನ್ನು ಮಾಡಿಕೊಂಡಿದ್ದೀರಿ. ಅದರಲ್ಲಿ ಕೆಲವರು ಹೈ ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬಂದರು. ತಮಗೆ ಎಲ್ಲಾ ಚೆನ್ನಾಗಿ ಗೊತ್ತಿರುವುದರಿಂದ ನಾನು ಇದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ನಿಮ್ಮ ಕಾನೂನು ಪ್ರಕಾರ ರೀ ಗ್ರೂಪ್ ಮಾಡಿ, ನಿಮ್ಮನ್ನು ಯಾರೂ ಆ ಆಕ್ಷೇಪಣೆ ಮಾಡುವುದಿಲ್ಲ. ಇವತ್ತು ನಾವು ಏನು ಮಾಡಿದ್ದೀರಿ ಅದನ್ನು ರಾಜಕೀಯ ಮಾಡುವುದಿಲ್ಲ ಇದನ್ನು ಸರಿಪಡಿಸದಿದ್ದರೆ, ತಾವು ಈ ರೀತಿಯ ಹೆಚ್ಚುವರಿ ಬೇಡಿಕೆಯನ್ನು ಕೇಳುವುದಕ್ಕೆ ನಿಮಗೆ ಯಾವ ಅರ್ಹತೆಯೂ ಇಲ್ಲ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಷಯ ಎಂದರೆ, ಈ ಸಹಕಾರ ಇಲಾಖೆಯಲ್ಲಿ ನಮ್ಮ ಮಣಿಪಾಲದ ದೊರೆಗಳಿಗೆ ಒಂದು ಹಾಲಿನ ಕೇಂದ್ರ ಮಾಡುವುದಕ್ಕೆ ಸುಮಾರು 28 ಲಕ್ಷ ರೂಪಾಯಿಗಳನ್ನು ಹೆಚ್ಚುವರಿ ಬೇಡಿಕೆಯಾಗಿ ಕೊಟ್ಟಿದ್ದಾರೆ. ಆ ಮಣಿಪಾಲದಲ್ಲಿ ಸೋಡಾ ಮಾಡುವುದರಿಂದ ಹಿಡಿದು ಹೋಟೆಲ್, ಪಾನ್ ಬೀಡಾ ಮಾಡುವುದು ಇತ್ಯಾದಿ ಎಲ್ಲಾ ಈ ಮಣಿ—ಪಾಲರ ಕೈಯಲ್ಲೇ ಇದೆ. ಅದರ ಜೊತೆಗೆ ಈ ಹಾಲಿನ ಪ್ರಾಡ್ಯೂಸರ್ಸ್ ಕೋ ಅಪರೇಟಿವ್ ಸೊಸೈಟಿಯೂ ಹೋಗಿ ; ಇನ್ನೂ ಅನುಕೂಲವಾಗುತ್ತದೆ. ಜನರಿಗೆ ಇದರಿಂದ

ಉಪಕಾರವಾಗುತ್ತದೆ. ಸ್ವಾಮಿ, ಇಲ್ಲಿ ನನಗೆ ಒಂದು ಅನುಮಾನ ಇದೆ. ಅದು ಏನೆಂದರೆ, ಈ ಮಣಿಪಾಲದಲ್ಲಿರುವ ಕೆನರಾ ಮಿಲ್ಕ್ ಪ್ರಾಡ್ಯೂಸರ್ಸ್ ಕೋಆಪರೇಟಿವ್ ಯೂನಿಯನ್ ಲಿಮಿಟೆಡ್‌ನಲ್ಲೂ ಇವರೇ ಏನಾದರೂ ಇದ್ದಾರೋ ಏನೋ ಎಂದು. ಏಕೆಂದರೆ ತಾವೇ ಹೇಳುತ್ತಿದ್ದೀರಿ, ವೆಸ್ಟೆಡ್ ಇಂಟರೆಸ್ಟ್ಸ್, ವೆಸ್ಟೆಡ್ ಇಂಟರೆಸ್ಟ್ಸ್ ಎಂದು. ತಾವು ಒಂದು ಸಾರಿ ಬಂದರೆ ಕುಳಿತುಕೊಂಡು ಕೂಲಂಕಷವಾಗಿ ಮಾತನಾಡೋಣ. ಯಾವುದಕ್ಕಾದರೂ ಒಂದು ಇತಿ ಮಿತಿ ಇರಬೇಕು. ಇವತ್ತು ಕೋ ಆಪರೇಟಿವ್ ಫೀಲ್ಡ್‌ನಲ್ಲಿ ಫ್ಯಾನ್ ಏಜೆನ್ಸಿ ಬಂತು, ಫರ್ನಿಚರ್ ಏಜೆನ್ಸಿ ಬಂತು. ತಾವು ಒಂದು ಕಾಸು ಖರ್ಚು ಮಾಡಿದರೂ ಅದು ವಾಪಸ್ಸು ನಿಮಗೇ ಬರುತ್ತದೆ ಅವರಿಂದ ವ್ಯವಹಾರ ಮಾಡುವ ಬುದ್ಧಿಯನ್ನು ಕಲಿಯಬೇಕು.

ಶ್ರೀ ಕೆ. ಎಸ್. ರಂಗನಾಥ್.—ಮಾನ್ಯ ಸದಸ್ಯರು ಇದಕ್ಕೆ ಸಂತೋಷ ಪಡಬೇಕು. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಇವತ್ತು ಎನ್ ಸಿ. ಡಿ. ಸಿ. ಯವರು ಎಷ್ಟು ಷೇರ್ ಕ್ಯಾಪಿಟಲ್ ಕೊಡುತ್ತಾರೋ ಅಷ್ಟೇ ಹಣವನ್ನು ನಾವು ಕೊಡಬೇಕಾಗುತ್ತದೆ. ಮಾನ್ಯ ಸದಸ್ಯರು ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಸದಸ್ಯರಾಗಿದ್ದಾರೆ. ನಾನು ಹೇಳುವ ವಿಷಯ ನಿಜವೋ ಅಲ್ಲವೋ ಎಂಬುದನ್ನು ಪರಿಶೀಲಿಸಬೇಕಾದರೆ ಮಾನ್ಯ ಸದಸ್ಯರು ಆ ಕಡೆ ಹೋಗಿ ನೋಡಲಿ, ಅಲ್ಲಿ ಎಮ್ಮೆ, ಹಸು ಮುಂತಾದುವುಗಳನ್ನು ತೆಗೆದುಕೊಂಡಿದ್ದಾರೆ. ಅದರಲ್ಲಿ ಏನಾದರೂ ತಪ್ಪು ಇದ್ದರೆ ಮಾನ್ಯ ಸದಸ್ಯರು ಕೇಳಲಿ. ಈ ಒಂದು ಹೊಸ, ಸ್ಕೀಂಗೆ ಎನ್ ಸಿ ಡಿ ಸಿ. ಯವರು ಎಷ್ಟು ಷೇರ್ ಕ್ಯಾಪಿಟಲ್ ಕೊಡುತ್ತಾರೆ ಅಷ್ಟೇ ಹಣವನ್ನು ನಾವೂ ಕೊಡುತ್ತೇವೆ. ಅಲ್ಲಿ ಒಂದು ಫ್ಯಾನ್ ಏಜೆನ್ಸಿ ಮಾಡಿದರು, ಅಲ್ಲಿ ಅದು ಮಾಡಿದರು, ಇಲ್ಲಿ ಇದು ಮಾಡಿದರು ಎಂದು ಮಾನ್ಯ ಸದಸ್ಯರು ಹೇಳುತ್ತಾರೆ. ಅದಕ್ಕೆ ನಾನು ಹೇಳುವುದಿಷ್ಟೆ ಯಾರು ಯಾವ ಜಿಲ್ಲೆಯಲ್ಲಿ ಏನು ಮಾಡಿದ್ದರೂ ಅದಕ್ಕೆ ನಾವು ಹಣವನ್ನು ಕೊಟ್ಟಿದ್ದೇವೆ. ವೆಸ್ಟೆಡ್ ಇಂಟರೆಸ್ಟ್ಸ್‌ನಲ್ಲಿ ಒಬ್ಬರೇ ಷೇರ್ ಕ್ಯಾಪಿಟಲ್ ಹಾಕಬೇಕೆಂದು ಏನೂ ಇಲ್ಲ. ನಾವು ಸುಮಾರು 28 ಲಕ್ಷ ರೂಪಾಯಿಗಳನ್ನು ಜನರಿಗೆ ಸಾಲ ಕೊಟ್ಟಿದ್ದೇವೆ. ಇದು ಹೊಸದಾಗಿ ಪ್ರಾರಂಭ ಮಾಡುವ ವಿಶೇಷವಾದ ಸ್ಕೀಂ ಆದ್ದರಿಂದ ಎನ್.ಸಿ ಡಿ.ಸಿ. ಯವರು 28 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ, ಬಾಕಿ ಅಷ್ಟು ಹಣವನ್ನು ನಾವು ಕೊಡುತ್ತೇವೆ. ಈ ಸ್ಕೀಂ ಹೊಸದಾಗಿ ಪ್ರಾರಂಭ ಆಗುತ್ತಿರುವುದರಿಂದ ಈ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಬಂದಿದೆ. ಮಣಿಪಾಲ್‌ನಲ್ಲಿ ಅದರೆ ಕೊಡುತ್ತೇವೆ, ಕಾಗೋಡು ತಿಮ್ಮಪ್ಪನವರಿಗೆ ಆದರೆ ಕೊಡುವುದಿಲ್ಲ ಎಂದರೆ ಆಗ ಅದು ತಪ್ಪಾಗುತ್ತದೆ,

ಶ್ರೀ ಕಾಗೋಡು ತಿಮ್ಮಪ್ಪ.—ಈ ಮಿಲ್ಕ್ ಪ್ರೊಡ್ಯೂಸರ್ಸ್ ಕೋಆಪರೇಟಿವ್ ಸೊಸೈಟಿಗೆ ಕೊಡಬಾರದೆಂದು ನಾನು ಹೇಳುವುದಿಲ್ಲ. ಸ್ವಾಮಿ, ತಮ್ಮಲ್ಲಿ ಒಂದು ಮಾತು ಹೇಳುತ್ತೇನೆ. ಶಿವಮೊಗ್ಗಾದ ಡಿ.ಸಿ ಸಿ. ಬ್ಯಾಂಕ್‌ನ ಚುನಾವಣೆ ನಡೆಯಲೇ ಬೇಕಾಗಿತ್ತು. ಅದರೆ ಅದನ್ನು ತಾವು ನಿಲ್ಲಿಸಿದಿರಿ, ಏತಕ್ಕೆಂದರೆ ಅದು ಕೆಲವೇ ಜನರ ಕೈಯಲ್ಲಿದೆ ಅದನ್ನು ತಪ್ಪಿಸಬೇಕೆಂದಲ್ಲವೆ ?

ಶ್ರೀ ಕೆ. ಎಚ್. ರಂಗನಾಥ್ —ಈ ಚುನಾವಣೆಯನ್ನು ಬರೀ ಶಿವಮೊಗ್ಗಾ ಒಂದರಲ್ಲೇ ನಿಲ್ಲಿಸಲಿಲ್ಲ. ಸಹಕಾರ ಸಂಘಗಳಲ್ಲಿ ಹಿಂದಿನ ಸದಸ್ಯರು ತಾವೇ ಮುಂದೆ ಬರಬೇಕೆಂದು ಓಡಾಡುತ್ತಿದ್ದುದರಿಂದ ಹೊಸದಾಗಿ ಬರುವ ಸದಸ್ಯರಿಗೂ ಈ ಓಟಿನ ಹಕ್ಕು ಬರಲಿ ಎಂಬ ದೃಷ್ಟಿಯಿಂದ ಈ ಚುನಾವಣೆಗಳನ್ನು ಮುಂದಕ್ಕೆ ಹಾಕಿದೆವು.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ಆ ಕ್ಷೇತ್ರದಲ್ಲಿ ನನ್ನ ಅನುಭವದಿಂದ ಹೇಳುವುದಾದರೆ ಅದು ಕೆಲವೇ ಜನರ ಹಸ್ತಗತವಾಗುತ್ತದೆ. ಅದನ್ನು ಸ್ವಲ್ಪಮಟ್ಟಿಗಾದರೂ ತಪ್ಪಿಸಿ, ಉಡುಪಿ, ಕುಂದಾಪುರ ಇಂಥ ದೊಡ್ಡ ದೊಡ್ಡ ಊರುಗಳಲ್ಲಿ ಇದನ್ನು ಕೊಡುವುದಾದರೆ ಅಲ್ಲಿನ ಜನ ಕೂಡ ಇದರ ಪ್ರಯೋಜನವನ್ನು ಪಡೆಯುತ್ತಾರೆ.

SRI K.H. RANGANATH.—Government will never refuse.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಇದನ್ನು ಚಲಸಿಯಿಂದ ಹೇಳುತ್ತಿಲ್ಲ. ಇವತ್ತು ಇದೆಲ್ಲವೂ ಸ್ವಲ್ಪ ಹೆಚ್ಚು ಕಡಿಮೆ ಒಬ್ಬರೇ ವ್ಯಕ್ತಿಯ ಕೈಯಲ್ಲೇ ಕೇಂದ್ರೀಕೃತವಾಗುವ ಸಂಭವ ಇದೆ. ನಾವು ಇಲ್ಲಿ ಪಾಸ್ ಮಾಡಿದ ಮೆಡಿಕಲ್ ಬಿಲ್‌ನ್ನು ಏತಕ್ಕೆ ಜಾರಿಗೆ ಕೊಡಲಿಲ್ಲ ಎಂದರೆ ಅದರಿಂದ ಖಾಸಗಿ ಮೆಡಿಕಲ್ ಕಾಲೇಜುಗಳ ಮೇಲೆ ಸರ್ಕಾರದ ಹತೋಟಿ ಬರುತ್ತದೆ ಎಂದು ಹೆದರಿ ಆ ಬಿಲ್ ಜಾರಿಗೆ ಬರದಂತೆ ಮಾಡಿದ್ದು ನಮಗೆ ಗೊತ್ತಿಲ್ಲವೆ ? ಇದಕ್ಕೆ ಯಾರ ಪೊಲಿಟಿಕಲ್ ಪ್ರೆಷರ್ ಇದೆ ಯಾವ ಯಾವ ವ್ಯಕ್ತಿಗಳ ರಾಜಕೀಯ ಶಕ್ತಿಗಳು ಇದರ ಹಿಂದೆ ಇವೆ ಎಂಬುದು ನಮಗೆ ಗೊತ್ತಿಲ್ಲವೆ ? ಹಾಗೆಯೇ ಕೋ ಆಪರೇಟಿವ್ ಫೆಡರೇಷನ್‌ಗೆ ಹಣ ಕೊಟ್ಟಿದ್ದಾರೆ. ನಾವು ಸಾರ್ವಜನಿಕ ಲೆಕ್ಕ ಸಮಿತಿಯವರು ಒಂದು ವರದಿಯನ್ನು ಕೊಟ್ಟಿದ್ದೇವೆ. ಅವರು ಹಣವನ್ನು ಖರ್ಚು ಮಾಡುವಾಗ ಅನುಸರಿಸಿರುವ ರೀತಿನೀತಿಗಳನ್ನು ನೋಡಿದರೆ ಸ್ವಲ್ಪ ಹೆಚ್ಚು ಕಡಿಮೆ ಮರ್ಯಾದೆ ಇರತಕ್ಕ ಯಾವ ಮನುಷ್ಯನೂ ಕೂಡ ಸಹಿಸುವುದಕ್ಕೆ ಸಾಧ್ಯವಿಲ್ಲ. ನಾವು ಸಾರ್ವಜನಿಕರ ಪ್ರತಿನಿಧಿಗಳಾಗಿ ಸರ್ಕಾರವನ್ನು ನಡೆಸುತ್ತಿದ್ದೇವೆ. ಇವತ್ತಿನ ದಿವಸ ಅವರು ಎಷ್ಟು ಹಣವನ್ನು ಲೂಟಿ ಮಾಡಿದ್ದಾರೆ, ಯಾರ ಯಾರ ಆಸ್ತಿಪಾಸ್ತಿಗಳು ಎಷ್ಟೆಷ್ಟಿದೆ ಎಂಬುದನ್ನು ಇದುವರೆಗೂ ನೀವು ವಿಚಾರಣೆ ಮಾಡಿಲ್ಲ, ಅಂಥವರಿಗೆ ಇನ್ನೂ ಹೆಚ್ಚಿನ ಹಣವನ್ನು ಕೊಟ್ಟಿದ್ದೀರಿ ಎಂದು ಜನ ನಮ್ಮನ್ನು ಕೇಳಿದರೆ ಅವರಿಗೆ ನಾವು ಏನು ಉತ್ತರ ಹೇಳಬೇಕು ? ಅಲ್ಲಿ ಹಣ ಲೂಟಿ ಆಗುತ್ತಾ ಇರಲಿ, ನಾವು ಅದರ ಬಗ್ಗೆ ಮಾತನಾಡಿದ್ದು ವಿಧಾನ ಮಂಡಲದ ಲೈಬ್ರರಿಯಲ್ಲಿ ಪುಸ್ತಕವಾಗಿ ಕೊಳೆಯುತ್ತಾ ಇರಲಿ.

ಸ್ವಾಮಿ ತಮಗೆ ಈ ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ಹೇಳುತ್ತೇನೆ. ಏನೆಂದರೆ ಸುಮಾರು 17 ಲಕ್ಷ ರೂಪಾಯಿಗಳ ಚೆಕ್ಕನ್ನು ಸುಮಾರು ಒಂದೂವರೆ ಅಥವಾ ಎರಡು ವರ್ಷಗಳ ಕಾಲ ಬ್ಯಾಂಕ್‌ಗೆ ಪ್ರೊಡ್ಯೂಸ್ ಮಾಡದೆ ಹಾಗೆಯೇ ಇಟ್ಟಿದ್ದರು. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಅದನ್ನು ರಿಪೋರ್ಟ್ ಮಾಡಿದ ಮೇಲೆ ಆ ಚೆಕ್ಕನ್ನು ಬ್ಯಾಂಕ್‌ಗೆ ಪ್ರೊಡ್ಯೂಸ್ ಮಾಡಿದರು. ಆಗ ಅಲ್ಲಿ ಹಣ ಇರಲಿಲ್ಲ, ಆ ಮನುಷ್ಯನ ಹತ್ತಿರ ಆಸ್ತಿಯಿಲ್ಲ, ಈಗ ಅವನು ಕೈ ಮೇಲಕ್ಕೆ ಎತ್ತಿಕೊಂಡು ಕುಳಿತಿದ್ದಾನೆ. ಆತನಿಂದ ಬರಬೇಕಾದ ಹಣವನ್ನು ವಸೂಲು ಮಾಡುವುದಕ್ಕೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಹಾಗಾದರೆ ಈ ಫೆಡರೇಷನ್ ಮುಂದಿನ ವ್ಯವಹಾರ ಮಾಡುವುದು ಬೇಡವೆಂದು ಹೇಳುತ್ತೀರಾ ? ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಇದೆಲ್ಲ ಸಂಸ್ಥೆಗಳು ಪ್ರತಿವರ್ಷ ವ್ಯವಹಾರ ಮಾಡತಕ್ಕಂಥ ಸಂಸ್ಥೆಗಳಾಗಿರುತ್ತವೆ. ಮಾನ್ಯ ತಿಮ್ಮಪ್ಪನವರು ಅದರ ಬಗ್ಗೆ ಹೇಳಿರತಕ್ಕಂಥ ಎಲ್ಲ ವಿಚಾರಗಳು, ನಡೆದಿರತಕ್ಕಂಥ ಎಲ್ಲ ವ್ಯವಹಾರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುವುದು ಅದು ಬೇರೆ ವಿಚಾರವಿರುತ್ತದೆ. ಈ ಫೆಡರೇಷನ್‌ನಲ್ಲಿ ಪ್ರತಿದಿನ ಫರ್ಟಿಲೈಸರ್ಸ್ ಡೀಲ್ ಮಾಡುವುದು ಇರುತ್ತದೆ. ಅದನ್ನು ತೆಗೆದುಕೊಂಡು ಬರಬೇಕು, ಶೇಖರಣೆ ಮಾಡಬೇಕು, ಅನಂತರ ವಿತರಣೆ ಮಾಡಬೇಕು. ಈ ರೀತಿ ವ್ಯವಹಾರ ಮಾಡಿಕೊಂಡು ಹೋಗಬೇಕಾಗುತ್ತದೆ. ಅದಕ್ಕೆ ಹಣ ಕೊಡಬಾರದೆಂದು ಮಾನ್ಯ ಸದಸ್ಯರು ಅಭಿಪ್ರಾಯಪಟ್ಟರೆ ಇದು ಹೇಗೆ ಸಾಧ್ಯ ? ಮಾನ್ಯ ಸದಸ್ಯರು ಇದರಲ್ಲಿ ಆಗಿರತಕ್ಕ ಲೋಪದೋಷಗಳ ಬಗ್ಗೆ ಅಪಾದನೆಗಳನ್ನು ಕುರಿತು ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುವುದು ಸರಿಯಾಗಿರುತ್ತದೆ. ಆ ವಿಚಾರ ಬೇರೆ. ಆದರೆ ಹಣ ಕೊಡಕೂಡದು ಎಂದು ಹೇಳಿದರೆ ಅವರು ವ್ಯವಹಾರವನ್ನು ಮುಂದುವರಿಸಿಕೊಂಡು ಹೋಗುವುದಾದರು ಹೇಗೆ ? ಅವರು ಸಕ್ಕರೆ ಮತ್ತು ಫರ್ಟಿಲೈಸರ್ಸ್ ಎರಡನ್ನೂ ಡೀಲ್ ಮಾಡುತ್ತಾರೆ. ಪ್ರತಿದಿವಸ ವ್ಯವಹಾರ ಮಾಡುವುದಕ್ಕೆ ಹಣ ಕೊಡಬೇಕು. ಸರ್ಕಾರ ಜಾಮೀನು ಆಗಬೇಕು, ಬ್ಯಾಂಕಿನಿಂದ ಅವರು ಹಣವನ್ನು ತೆಗೆದುಕೊಂಡು ಬರಲೇಬೇಕು. ಹೀಗಿರುವಾಗ ಹಣವನ್ನು ಕೊಡಬಾರದು ಎಂದರೆ ಈ ಎಲ್ಲ ವ್ಯವಹಾರಗಳು ಹೇಗೆ ನಡೆಯಬೇಕೆಂದು ಕೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ. ಹಣ ಕೊಡಬಾರದು ಎಂದು ಹೇಳುತ್ತಿಲ್ಲ. ಆದರೆ ಕೊಟ್ಟಂಥ ಹಣ, ಪಡೆದಂಥ ಜನರು ಅಲ್ಲಿ ನಡೆಯುತ್ತಿರುವ ಪರಬಾರಗಳನ್ನು ನೋಡಿದರೆ ಯಾವ ತಪ್ಪಿತಸ್ಥನ ಮೇಲೂ ಏನು ಕ್ರಮವನ್ನು ತೆಗೆದುಕೊಂಡಿಲ್ಲ. ಹಿಂದೆ ಮಾಡಿದಂಥ ತಪ್ಪಿತಸ್ಥನ ಮೇಲೆ

ಕ್ರಮವನ್ನು ತೆಗೆದುಕೊಂಡಿದ್ದರೆ ಮುಂದೆ ಬರತಕ್ಕಂಥವರು ಎಚ್ಚೆತ್ತುಕೊಳ್ಳುತ್ತಿದ್ದರು. ತಪ್ಪು ಮಾಡಿದಂಥ ಜನರು ಅಂದರೆ ಹಣ ಪಡೆದವರೇ ಆಗಲಿ, ಆಫೀಸರುಗಳೇ ಆಗಲಿ ಅವರಿಗೆ ಶಿಕ್ಷೆಯನ್ನು ವಿಧಿಸದಿದ್ದರೆ ಸ್ವಾಭಾವಿಕವಾಗಿ ನಾವು ಕೊಟ್ಟಿರತಕ್ಕಂಥ ಹಣ ಲಗುವಾಗಿ ನಡೆದುಹೋಗುತ್ತದೆ. ಉದಾಹರಣೆಗಾಗಿ ಮಾನ್ಯ ಸಚಿವರಿಗೆ ಹೇಳುತ್ತೇನೆ ತಪ್ಪು ಮಾಡಿದಂಥ ಒಬ್ಬ ಅಧಿಕಾರಿಯನ್ನಾದರೂ ಇವತ್ತಿನವರೆಗೆ ಕೆಲಸದಿಂದ ತೆಗೆದುಹಾಕಿದ್ದೀರಾ? ಶಿಕ್ಷೆಯನ್ನು ಕೊಟ್ಟಿದ್ದೀರಾ ಎಂದು ಕೇಳಬೇಕಾಗಿದೆ. 17 ಲಕ್ಷ ರೂಪಾಯಿ ಚೆಕ್ಕನ್ನು ಒಬ್ಬ ಅಧಿಕಾರಿ ಇಟ್ಟುಕೊಂಡಿದ್ದ ಅವನನ್ನು ಹಿಡಿದಾಗ ಅವನ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಸಮಾಜ ಕಲ್ಯಾಣ ಇಲಾಖೆಯಲ್ಲಿ ಕಂಡುಬಂದ ಲೋಪದೋಷಗಳ ಕಾರಣದಿಂದಾಗಿ ಸಾರ್ವಜನಿಕ ಸಂಸ್ಥೆಯವರು ಲೆಕ್ಕ ಕೊಟ್ಟಿದ್ದಕ್ಕೆ ಅವರ ವರದಿಯ ಆಧಾರದಮೇಲೆ ಮಂತ್ರಿಗಳಾದ ಶ್ರೀಮಾನ್ ರಾಚಯ್ಯನವರನ್ನು ಪದವಿಯಿಂದ ತೆಗೆದುಹಾಕಿದಿರಿ ಅದೇ ಫೆಡರೇಷನ್ ಅಧ್ಯಕ್ಷರಾದ ಶ್ರೀಮಾನ್ ಶ್ರೀ ಕಂಠಯ್ಯನವರನ್ನು ಇನ್ನೂ ಏತಕ್ಕೆ ಅಧಿಕಾರದಲ್ಲಿ ಇಟ್ಟುಕೊಂಡಿದ್ದೀರಿ? ಅವರು ಪಾಪ ಜೊಳ್ಳು, ಇದು ಘಟ್ಟಿಕಾಳೆಂದು ಕಾಣುತ್ತದೆ ಇವತ್ತು ನಿಮ್ಮ ಕಣ್ಣಿಗೆ ಇದು ಚೆನ್ನಾಗಿ ಕಾಣಬಹುದು ನಮಗೆ ಪ್ರಶ್ನೆ ಇದೆ. ನಾವು ಮಾತನಾಡಿದರೆ ನೀವು ಆ ಕಡೆ ಕುಳಿತು ನಗುತ್ತಾ ಇರುತ್ತೀರಿ. ಒಬ್ಬ ಅಧಿಕಾರಿ 17 ಲಕ್ಷ ರೂಪಾಯಿ ಚೆಕ್ಕನ್ನು ಬ್ಯಾಂಕಿಗೆ ಕಟ್ಟದೆ ವರ್ಷಗಟ್ಟಲೆ ಇಟ್ಟುಕೊಂಡಿದ್ದ ವಿಚಾರ ಸಮಿತಿಯ ವಿಚಾರಣೆಯಾದಮೇಲೆ ಹೊರಗೆ ಬಂದಿತು ಇವರ ಮೇಲೆ ಕೋರ್ಟಿನಲ್ಲಿ ದಾವಾ ಹಾಕಲಿಲ್ಲ. ಫೆಡರೇಷನ್ ಕಾರ್ಯಕಾರಿ ಸಮಿತಿಯ ಒಪ್ಪಿಗೆ ಇಲ್ಲದೇ ಚೇರ್‌ಮನ್‌ರವರಿಗೆ ಇನ್‌ಸ್ಟ್ರಕ್ಷನ್ ಕೊಟ್ಟು ಅದನ್ನು ಹತ್ತು ಕಂತುಗಳಲ್ಲಿ ಕಟ್ಟುವ ಹಾಗೆ ಡಿಕ್ರಿ ಮಾಡಿದ್ದಾರೆ ಇದೇನು ಇವರ ಸ್ವಂತ ಆಸ್ತಿಯೇ. ಇವರ ಸ್ವಂತ ಹಣವೆ ಎಂದು ಕೇಳಬೇಕಾಗಿದೆ. ಇದು ಸಾರ್ವಜನಿಕರ ಹಣ, ಇದನ್ನು ನಾವು ಸರಿಯಾದ ರೀತಿಯಲ್ಲಿ ನೋಡಿಕೊಳ್ಳಬೇಕು. ಈ ರೀತಿ ದೊಡ್ಡ ದೊಡ್ಡ ಸಂಸ್ಥೆಗಳಲ್ಲಿ ನಡೆಯತಕ್ಕಂಥ ಅವ್ಯವಹಾರದ ಬಗ್ಗೆ ಸಣ್ಣ ವ್ಯವಹಾರ ನಡೆಸುವ ಹಳ್ಳಿಗಳಲ್ಲಿರತಕ್ಕಂಥ ಸೊಸೈಟಿಯವರು ಏನೆಂದುಕೊಳ್ಳುತ್ತಾರೆಂಬುದನ್ನು ವಿಚಾರ ಮಾಡಬೇಕು. ಒಬ್ಬ ಪೋಲೀಸ್ ಪೇದೆ 5 ರೂಪಾಯಿಗಳನ್ನು ತೆಗೆದುಕೊಂಡರೆ ಅವನನ್ನು ಕೆಲಸದಿಂದ ತೆಗೆಯುತ್ತೀರಿ. ಉದಾಹರಣೆಗೆ ನಾನೇ ಒಂದು ಸಾರಿ ಕೆ.ಎಸ್. ಆರ್.ಟಿ.ಸಿ. ಬಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಅಂಕೋಲದಲ್ಲಿ ಆ ಬಸ್ಸಿನ ಕಂಡಕ್ಟರ್ ನಾಲ್ಕು ಜನರಿಗೆ ಟಿಕೆಟ್ ಕೊಡದಿದ್ದ ಕಾರಣ ಸಿಟ್ಟು ಬಂದು ವಿಚಾರವನ್ನು ಅಧಿಕಾರಿಗಳಿಗೆ ತಿಳಿಸಿದೆ. ಅವನನ್ನು ಬಹಳ ಸುಲಭವಾಗಿ ಕೆಲಸದಿಂದ ತೆಗೆದುಬಿಟ್ಟರು ಕೊನೆಗೆ ಅವನು ಬಂದು ಕ್ಷಮಾಪಣೆ ಕೇಳಿಕೊಂಡಾಗ ನಮ್ಮ ಸ್ನೇಹಿತರಾದ ಎಸ್. ವಿ. ನಾಯಕರ ಹತ್ತಿರ ಹೋದರೆ ಅವರು ಏನು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು ಲಕ್ಷಾಂತರ ರೂಪಾಯಿಗಳನ್ನು ಲೂಟಿ ಮಾಡುವಂತ ಜನ, ದರೋಡೆ ಮಾಡುವಂಥ ಜನರನ್ನು ಸಂಭಾವಿತರು ಎಂದು ಹೇಳಿ ನೀವು ಆಡಳಿತವನ್ನು ನಡೆಸುತ್ತಿದ್ದರೆ ಜನ ಮೆಚ್ಚುತ್ತದೆಯೇ, ದೇಶ ಮೆಚ್ಚುತ್ತದೆಯೇ ದೇವರು ಮೆಚ್ಚುತ್ತಾನೆಯೇ ನನಗಂತೂ ದೇವರ ಮೇಲೆ ನಂಬಿಕೆ ಇಲ್ಲ ನಮ್ಮ ಆತ್ಮಕೂಡ ಮೆಚ್ಚುವುದಿಲ್ಲ. ಇವತ್ತು ಇದನ್ನಲ್ಲ ವಿಚಾರ ಮಾಡದೆ ಮತ್ತೆ ಹಣವನ್ನು ನೀವು ಆ ಫೆಡರೇಷನ್‌ಗೆ ಕೊಡುವುದಾದರೆ ಯಾರಿಗೆ ತಾನೆ, ಮರ್ಯಾದೆ ಬರುತ್ತದೆ? ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ವರದಿಯನ್ನು ಕೊಟ್ಟಿದ್ದಾರೆ ಅದನ್ನೆಲ್ಲ ಕೈಯಲ್ಲಿ ಇಟ್ಟುಕೊಂಡು ಕುಳಿತುಕೊಂಡಿದ್ದೀರಿ. ಇವತ್ತಿನ ದಿವಸ ಹಳ್ಳಿಯ ಜನರು ಎಚ್ಚರರಾಗಿದ್ದಾರೆ ಆದರೆ ನೀವು ಎಚ್ಚರರಾಗಿಲ್ಲ. ವಿಚಾರಣೆ ಮಾಡಿ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು. ಕಳೆದ ಅಧಿವೇಶನದಲ್ಲಿ ಹೇಳಿದ್ದೀರಿ ಕ್ರಮ ತೆಗೆದುಕೊಂಡರೆ ಯಾರ ಯಾರ ಗತಿ ಏನಾಗುತ್ತದೆ ಎನ್ನುವುದು ಹೇಳುವುದಕ್ಕೆ ಬರುವುದಿಲ್ಲ. ಶ್ರೀ ರಂಗನಾಥ್‌ರವರು ಈಗಲಾದರೂ ದಿಟ್ಟ ನಿಲುವನ್ನು ತೆಗೆದುಕೊಳ್ಳುತ್ತಾರೆಯೋ ಏನೋ ನನಗೆ ಗೊತ್ತಿಲ್ಲ. ಇದರಿಂದ ನನಗೆ ಬಹಳ ವ್ಯಥೆಯಾಗುತ್ತದೆ. ಹೀಗಾಗಬಾರದು ಇದನ್ನು ತಪ್ಪಿಸಬೇಕು. ಇದರಿಂದ ಯಾರಿಗೂ ಮರ್ಯಾದೆ ಬರುವುದಿಲ್ಲ. ಸಂಸ್ಥೆಯನ್ನು ಬೆಳೆಸಬೇಕು. ವ್ಯವಹಾರವನ್ನು ನಡೆಸಬೇಕು. ಹೀಗೆ ವ್ಯವಹಾರವನ್ನು ನಡೆಸತಕ್ಕಂಥ ಸಂದರ್ಭದಲ್ಲಿ ತಪ್ಪು ಮಾಡಿದಂಥ ಜನಗಳಿಗೆ ಶಿಕ್ಷೆಯನ್ನು ವಿಧಿಸಬೇಕು. ಇಲ್ಲದಿದ್ದರೆ ಅದು ಮುಂದುವರಿದುಕೊಂಡೇ ಹೋಗುತ್ತದೆ. ''ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ'' ಎಂಬಂತೆ, ಇವತ್ತು

ಆಗುತ್ತದೆ. ಸಹಕಾರಿ ಇಲಾಖೆಯುವತಿಯಿಂದ ಫೆಡರೇಷನ್‌ಗೆ ಹಣ ಕೊಡತಕ್ಕುದ್ದು ಇರುತ್ತದೆ. ಇದರ ಬಗ್ಗೆ ಸರ್ಕಾರಕ್ಕೆ ಯಾವ ನಿರ್ದೇಶನವನ್ನು ಕೂಡ ಕೊಟ್ಟಿಲ್ಲ. ಹಣವನ್ನು ಕೊಡುವುದರ ಬಗ್ಗೆ ವಿಶೇಷವಾಗಿ ವರದಿಯನ್ನು ಮಾಡಬೇಕಿತ್ತು. ಅದೇ ರೀತಿ ಇನ್ನು ಅರ್ಕನೆಟ್ ಪ್ರೊಸೆಸಿಂಗ್ ಕೋಆಪರೇಟೀವ್ ಸೊಸೈಟಿಗೆ ಹಣವನ್ನು ಕೊಟ್ಟಿದ್ದೀರಿ, ಅಡಿಷನಲ್ ಷೇರ್ ಕ್ಯಾಪಿಟಲ್ ಕೊಟ್ಟಿದ್ದೀರಿ. ಇವೊತ್ತಿನ ದಿವಸ ಕೇಂದ್ರ ಸರ್ಕಾರದ ಹಣ ನಮ್ಮ ಸರ್ಕಾರದ ಹಣ ಅಲ್ಲದೆ ಕೇರಳ ಸರ್ಕಾರದವರ ಹಣ ಇದರಲ್ಲಿ ತೊಡಗಿಸಿದ್ದಾರೆ. ಅಡಿಕೆ ಬೆಳೆಗಾರನಿಗೆ ಸರಿಯಾದ ಬೆಲೆ ಸಿಗಬೇಕು ಎನ್ನುವ ದೃಷ್ಟಿಯಿಂದ ಕರೀದಿ ಮಾಡತಕ್ಕಂಥ ಏಜೆನ್ಸಿಯನ್ನು ಪ್ರೊಸೆಸಿಂಗ್ ಸೊಸೈಟಿಯವರಿಗೇನೇ ಕೊಟ್ಟಿರುತ್ತಾರೆ. ಅವರೇ ಇದರ ನಿರ್ವಹಣೆಯನ್ನು ವಹಿಸಿಕೊಂಡಿರುತ್ತಾರೆ. ಚುನಾವಣೆ ಕಾಲದಲ್ಲಿ ಜನತಾ ಪಕ್ಷಕ್ಕೆ ಓಟು ಕೊಟ್ಟರೆ ನಿಮಗೆ ದುಡ್ಡು ಸಿಗುವುದಿಲ್ಲವೆಂದು ಜನರನ್ನು ಹೆದರಿಸುತ್ತಿದ್ದಾರೆ. ಇದು ನ್ಯಾಯವೇ? ಈವತ್ತಿನ ದಿವಸ ಶ್ರೀಮತಿ ಇಂದಿರಾಗಾಂಧಿಯವರಂಥವರೇ ಅಧಿಕಾರದಿಂದ ಉರುಳಿಹೋದರು, ನೆನ್ನೆ ಮೊನ್ನೆ ಹುಟ್ಟಿಕೊಂಡಿರತಕ್ಕಂಥ ಫೆಡರೇಷನ್, ಪ್ರೊಸೆಸಿಂಗ್ ಸೊಸೈಟಿಯ ಹಿತದೃಷ್ಟಿಯಿಂದ ನೋಡುವುದಾದರೆ ಇದರ ಬಗ್ಗೆ ಹೆಚ್ಚಿನ ಹುಷಾರಿಂದ ಇರಬೇಕಾಗುತ್ತದೆ. ಅವರು ವ್ಯವಹಾರ ಮಾಡತಕ್ಕದ್ದರಲ್ಲಿ ತಪ್ಪು ಇರುತ್ತದೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಹಳ್ಳಿಗಳಲ್ಲಿ ಬೆಳೆಯತಕ್ಕಂಥ ಅಡಿಕೆಯನ್ನು ಕೊಳ್ಳಲು ತಾಲ್ಲೂಕುಗಳಲ್ಲಿ ನಮ್ಮ ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟಿಂಗ್ ಸೊಸೈಟಿಗಳು ಇರುತ್ತದೆ. ಅದರಲ್ಲಿ ನಮ್ಮ ಷೇರು ಬಂಡವಾಳವಿರುತ್ತದೆ. ಅವರಿಗೆ ಏತಕ್ಕೆ ಏಜನ್ಸಿಯನ್ನು ಕೊಟ್ಟಿಲ್ಲ. ಅವರನ್ನು ಏತಕ್ಕೆ ಕೈಬಿಟ್ಟರೆಂದು ನಾನು ಕೇಳುತ್ತಿದ್ದೇನೆ. ಇದನ್ನೆಲ್ಲ ನೋಡಿದರೆ ಅವರು ಮನಾಪಲಿ ಮಾಡುವುದಕ್ಕೆ ಹೋಗಿ ಈಗ ದುಡ್ಡು ಹೊಡೆದು ತಿನ್ನುವುದಕ್ಕೂ ಶುರು ಮಾಡಿದ್ದಾರೆ. ಆದ್ದರಿಂದ ನಮಗೆ ಈ ಸೊಸೈಟಿಗಳು, ಸಹಕಾರಸಂಘಗಳು ಹೇಗೆ ಕೆಲಸಮಾಡುತ್ತಿವೆ ಎಂಬುದು ಗೊತ್ತಿದೆ. ಆಹಾರಧಾನ್ಯಗಳನ್ನು ಕೊಳ್ಳುತಕ್ಕಂಥ ಮಾರಾಟ ಮಾಡತಕ್ಕಂಥ ಕೆಲಸವನ್ನು ಒಂದೇ ಏಜನ್ಸಿಗೆ ಶಾಶ್ವತವಾಗಿ ಕೊಡಬಾರದು. ಏಜೆನ್ಸಿಗಳಲ್ಲಿ ಯಾವಾಗಲೂ ಕಾಂಪಿಟೇಷನ್ ಇರಬೇಕು. ಆಗ ಮಾರ್ಕೆಟಿಂಗ್ ಫೆಡರೇಷನ್ ಚೆನ್ನಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಎಲ್ಲಾ ಕಡೆ ಅದರ ಬ್ರಾಂಚ್‌ಗಳನ್ನು ತೆಗೆದು ಅವರ ಜನರನ್ನೇ ಇಟ್ಟು ಕೆಲಸ ಮಾಡಬೇಕು. ಸಾಗರದಲ್ಲಿ ಒಂದು ಕೋಆಪರೇಟಿವ್ ಸೊಸೈಟಿಯನ್ನು ಒಂದು ಏಜೆನ್ಸಿಗೆ ಕೊಟ್ಟಿದ್ದಾರೆ, ಅದರಲ್ಲಿ ಒಬ್ಬ ಪ್ರತಿನಿಧಿ ಇನ್ನಾನೆ. ಅವನು ಏನನ್ನೂ ನೋಡುವುದೂ ಇಲ್ಲ, ಕೇಳುವುದೂ ಇಲ್ಲ, ಯಾವಾಗಲೂ ಕಾಫಿ ಕುಡಿದು ಓಡಾಡುವುದು, ರಾಮಣ್ಣನಿಗೆ ಒಂದು ರೇಟು ಭೀಮಣ್ಣನಿಗೆ ಒಂದು ರೇಟು, ತನಗೆ ಬೇಕಾದವರಿಗೆ ಒಂದು ರೇಟು, ತನಗೆ ಬೇಡದವರಿಗೆ ಇನ್ನೊಂದು ರೇಟು ಈ ರೀತಿಯಲ್ಲಿ ವ್ಯವಹಾರವನ್ನು ಮಾಡುತ್ತಿದ್ದಾನೆ,

ಅಧ್ಯಕ್ಷರು.— ಇನ್ನು 5 ನಿಮಿಷಗಳಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಈ ವಿಷಯದ ಬಗ್ಗೆ ಮಾತನಾಡುವುದು ಬಹಳ ಇದೆ.

ಅಧ್ಯಕ್ಷರು.—ತಾವು ದಯವಿಟ್ಟು ನಾಳೆ ಮಾತನಾಡಬಹುದು. ಈಗ ಸಭೆ ಮುಕ್ತಾಯವಾಗಿ ನಾಳೆ ಒಂದು ಗಂಟೆಗೆ ಸೇರುವುದು.

The House adjourned at Six of the Clock to meet again at One of the Clock on Tuesday the 29th March, 1977.